TIGHT BINDING BOOK

UNIVERSAL LIBRARY
OU_198580
UNIVERSAL LIBRARY

;MANIA UNIVERSITY LIBRARY

lo. K80.G RG1M Accession No. K3004

; book should be returned on or before the date
ed below.

# ನಮ್ಮ ನಗೆಗಾರರು

ಬರೆದು ಪ್ರಕಟಿಸಿದವರು
**ಜಿ. ಪಿ. ರಾಜರತ್ನಂ**
ಮಲ್ಲೇಶ್ವರಂ, ಬೆಂಗಳೂರು

ಮಾರಾಟಗಾರರು
**ಸತ್ಯಶೋಧನ ಪುಸ್ತಕ ಭಂಡಾರ**
ಕೋಟೆ, ಬೆಂಗಳೂರು

ಸರ್ವ ಸ್ವಾಮ್ಯವೂ ಗ್ರಂಥಕರ್ತರದು

CHECKED 1951
K 3004
6

## ನಾಲ್ಕು ಹೊಸ ಪುಸ್ತಕಗಳು

(ಸಂಪಾದಕ, ಅನುವಾದಕ, ವಿಮರ್ಶಕ : ಜಿ. ಪಿ. ರಾಜರತ್ನಂ)

**ವಿದ್ಯಾರ್ಥಿವಿಚಾರ ವಿಲಾಸ :** ಬೆಲೆ ಒಂದು ರೂಪಾಯಿ.

'ಪ್ರೊಫೆಸರ್ ವೆಂಕಣ್ಣಯ್ಯ ವ್ಯಾಸಂಗ ಗೋಷ್ಠಿ'ಯಲ್ಲಿ ವಿದ್ಯಾರ್ಥಿಗಳು ನಡೆಸಿದ ಕೃತಿರಚನೆಗಳ ಸಂಗ್ರಹ. ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರೆಲ್ಲ ನೋಡಬೇಕಾದ ಪುಸ್ತಕ.

**ಪ್ರೊಫೆಸರ್ ವೆಂಕಣ್ಣಯ್ಯ ಜ್ಞಾಪಕ ಉಪನ್ಯಾಸಗಳು :** ಬೆಲೆ ಒಂದು ರೂಪಾಯಿ.

'ಮುಸ್ಲಿಂ ಧಾರ್ಮಿಕ ಹಬ್ಬಗಳು', 'ಗೀತಾ ಗ್ರಂಥದಲ್ಲಿ ವಿಶ್ವರೂಪ', 'ಜೋರ್ಟ್ ಮಹಾಪುರುಷನ ಉಪಖ್ಯಾನ' ಮತ್ತು 'ತುಲಸೀದಾಸರ ರಾಮಚರಿತಮಾನಸ' ಎಂಬ ನಾಲ್ಕು ಉಪನ್ಯಾಸಗಳೂ 'ದಿವಂಗತ ಶ್ರೀ. ವೆಂಕಣ್ಣಯ್ಯನವರು' ಎಂಬ ಜೀವನ ಚಿತ್ರವೂ 'ಕಣ್ಮರೆಯಾದ ಕನ್ನಡದ ಹಕ್ಕಿ' ಎಂಬ ಕವನವೂ ಇಲ್ಲಿದೆ.

**ಏಕಲವ್ಯ :** ಬೆಲೆ ಹತ್ತಾಣೆ.

ಶ್ರೀ. ಟಿ. ಪಿ. ಕೈಲಾಸಂ ಇಂಗ್ಲಿಷಿನಲ್ಲಿ ಬರೆದಿರುವ 'PURPOSE' ಎಂಬ ನಾಟಕದ ವಿಮರ್ಶಾ ಪೂರ್ವಕವಾದ ಸಾರವಿಸ್ತರಣ.

**ವೈಣಿಕನ ವೀಣೆ :** ಬೆಲೆ ಆರಾಣೆ.

ಪ್ರಪಂಚದ ಕಿನ್ನರಕಥೆಗಳಲ್ಲಿ ಅತ್ಯುನ್ನತ ಸ್ಥಾನ ಗಳಿಸಿರುವ ಹ್ಯಾನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಎಂಬವನ ಸುಂದರವಾದ ಕತೆಗಳು ಕೆಲವು. ಮಕ್ಕಳಿಂದ ಮುದುಕರ ವರೆಗೂ ರುಚಿಸತಕ್ಕವು.

# ಬಿನ್ನಹ

ರತ್ನಾಕರ ಮತ್ತು ಮುದ್ದಣ ಎಂಬ ಇಬ್ಬರು ಕನ್ನಡ ಕವಿಗಳ ಕಾವ್ಯದಲ್ಲಿರುವ ಹಾಸ್ಯದ ಪರಿಚಯವನ್ನು ಈ ಲೇಖನಗಳಲ್ಲಿ ಕೊಡಲು ಪ್ರಯತ್ನಿಸಿದ್ದೇನೆ. ಈ ಲೇಖನಗಳು ೧೯೪೦ ರಿಂದ ಆಗಾಗ್ಗೆ ಒಂದೊಂದಾಗಿ 'ಕನ್ನಡ ನುಡಿ'ಯಲ್ಲಿ ಪ್ರಕಟವಾದುವು. ಇವುಗಳನ್ನು ಪ್ರಕಟಿಸಿದ 'ಕನ್ನಡ ನುಡಿ'ಗೆ ನಾನು ಋಣಿಯಾಗಿದ್ದೇನೆ.

ಕನ್ನಡದ ಇತರ ಕವಿಗಳಲ್ಲಿ ಕಂಡುಬರುವ ಹಾಸ್ಯದ ಪರಿಚಯಕ್ಕೆ ನನ್ನ '**ನಕ್ಕಳಾ ತಾಯಿ**' ಎಂಬ ಪುಸ್ತಕವನ್ನು ನೋಡಬಹುದು.

ಜಿ. ಪಿ. ರಾಜರತ್ನಂ

# ಒಳಪಿಡಿ


೧. ಕವಿವಲ್ಲಭ .... ೧

೨. ರತ್ನಾಕರ .... ೧೭

೩. ನಗೆಗಾರರಿವರಿಬ್ಬರೇ .... ೪೩

೪. ಮದನಮದಭಂಗ .... ೬೧

೫. ಪುರಾಣಮಿತ್ಯೇವ ನ ಸಾಧು ಸರ್ವಂ .... ೭೨

೬. ಅಪೂರ್ವ ಪುರುಷ ರತ್ನಾಕರ .... ೮೮

೭. ಶ್ರೀರಾಮಾಶ್ವಮೇಧ .... ೯೬

೮. ಕಾಂತಾಸಮ್ಮಿತತಯಾ ಉಪದೇಶ .... ೧೦೨

# ನಮ್ಮ ನಗೆಗಾರರು

## ೧. ಕವಿವಲ್ಲಭ

"ಲೋಗರಱಿವಿನ ಕೊರತೆಯಂ ನೀಡುಮೆಣಿಸದೆ ತಗದ ಕಜ್ಜಮನೊಡರ್ಚುತೆ ಕಟ್ಟಿಕಡೆಯೊಳ್ ಬಱಿಮುಱುಕದಿಂ ಮನವೆ ಕುದಿವರ್ ಪಲಂಬರೊಳರ್."

ಸಂಸ್ಕೃತ ರಾಮಾಶ್ವಮೇಧ ಓದಿಯಾಯಿತು. 'ಎಂತೆಂತೊ ರಗಳೆಯ ಪಾೞ್ಗತೆ ಕಡೆಗಂಡುದು.' ಅಬ್ಬ! ಏನು ಕತೆ! 'ಅಡಿಮುಡಿಯಿಲ್ಲದ ಕತೆ.' 'ನಿಱಿಗೆಯ ಕೂಟಂ ಕೇಳ್ವರ್ಗೆ ಮನಕ್ಕೆ ಬಾಱದ' ಕತೆ. 'ಪೊಪೊಪ ಬಟ್ಟೆಯೊಳ್ ಅಡವಿವೆಟ್ಟುಗಳ ಬಱುವಣ್ಣನೆಯ ಬೇಸರಿಕೆಯ ಪಾೞ್ಗಬ್ಬಂ.' ಕಾಮಾಕ್ಷಿ, ಚ್ಯವನಾಶ್ರಮ, ನೀಲಾಚಲ, ಸಾಳಿಗ್ರಾಮ, ಗೋಪೂಜಾ ಮಾಹಾತ್ಮ್ಯಗಳ ಮೂಟೆ. ಅಪ್ಪ ಎಲ್ಲೂ ನಾಡ ಹೊಗದು. ಹೊಕ್ಕರೂ 'ಬಲ್ಲುಳ್ಳ ರಾಯಂ ಕಟ್ಟಿ ಕಾಪಂ, ತಾನೆ ಕೆಯ್ಗೊಟ್ಟುಪಂ.' ಕಟ್ಟಿ ಕಾದಿದರೂ ಅದು 'ಕಿವಿಗಳ್ಗೆ ಪುರುಳ ಮರದ ಗುರ್ದಿನಾಟದ ಬಱುರಗಳೆಯ ನಿಡುಗತೆ.' 'ಕತೆಯ ಪೇೞ್ವರ ಕಣ್ಗೆ ಕಟ್ಟಿದಿಱೊಳ್ ಪುರುಳನಱಿಯದ ಗಾಂಪಿನ ಕಾಪವರಂತಿರೆ ಸಪ್ಪೆಯ ಬಣ್ಣಂ ತೂಂಕಡಿಸಂತೆ' ಗೆಯ್ವ ಕತೆ. ಒಟ್ಟಿನಲ್ಲಿ ಇದು 'ಕಟ್ಟಾಯಸದ ನಿಚ್ಚವಯಣ, ಬನ್ನವಟ್ಟೆಯ ಬಳಲ್ಕೆ, ಗಾೞುಗೂೞುಱೊಳ್ ಪೊಣರ್ವ ಗನ್ನಸಿಟ್ಟುರದ ಸೆಣಸಾಟ'—ರಾಮಸೇನೆಗೆ ಮಾತ್ರ**ವಲ್ಲ,** ಓದುಗರಿಗೆ ಕೂಡ. ಇಂತಹದನ್ನು 'ಜಾಣಿಲಿವೆಣ್ಗಳೆ **ಕೊಂಡಾಡು**ವರಲ್ಲದೆ ಬಲ್ಲರೇನೊಲ್ವರೆ?'

ಆದರೆ, ಈ ಮಹಾಮುರುಕುಮನೆಯ ಯಾವುದೋ ಮೂಲೆಯಲ್ಲಿ ಮುಚ್ಚಿಹೋದ ಸೀತಾ ಪರಿತ್ಯಾಗದ ಕತೆ – ಈಗ ಪ್ರಚಾರದಲ್ಲಿರುವಂತೆಯಾದರೂ–ಕೇಳುತ್ತಿದ್ದರೆ 'ಸುಡು ಸುಡು ನಿನ್ನ ಜನ್ನಗುದುರೆಯಂ' ಎನ್ನಿಸುವಂತಹದು. 'ಮೇಣುಂ ಮೇಣುಂ ಕೇಳ್ವೆಂ ಕೇಳ್ವೆಂ ಎಂಬೊಂದಾಸೆ' ಹುಟ್ಟಿಸುವಂತಹದು. ಇದು 'ಎರ್ದೆವುಗುವ ನಲ್ಗತೆ.' ಕೇಳುವ ಪ್ರತಿ ಸತಿಪತಿಯೂ 'ಆನೊರ್ಮೆಯುಂ ನಿನ್ನ ನುಡಿದು ಬಾಡಿಂ. ಅಂತದಱಿನೆಮ್ಮೊಳಾವಗಂ ಪುದುವಾಳ್ಕೆಯಂ ದೀರ್ಘಾಯುಮಂ ಶಿವಂ ನೆಲೆಗೆಯ್ಗೆ! ಸ್ವಸ್ತಿ!' ಎಂದು ಹಾರೈಸಿಕೊಳ್ಳುವಂತೆ ತಲ್ಲೀನತೆಯುಂಟುಮಾಡುವಂತಹದು.

ಆದರೆ ಇದಾದರೂ ಎಂತಹ ಕತೆ? ಹುಸಿತವಸಿ ದುಷ್ಟರಾಕ್ಷಸ ಅಂದು ಸೀತೆಯನ್ನು ಕದ್ದೊಯ್ದು ಒಡನೆ ಬಿಡಲಾರದ ಮೋಹದಿಂದ ಮರುಗಿ ಕೊರಗಿ ಹುಡುಕಿ ಬಂದು ಹಿರಿಯಾಯಾಸದಿಂದ ಕಡಲಿಗೆ ಅಣೆಗಟ್ಟು ಕಟ್ಟಿ ರಾಕ್ಷಸರಲ್ಲಿ ಕಾದಿ ಮೊನೆಯಲ್ಲಿ ಗೆದ್ದು ಮರಳಿಸಿದನಂತೆ ರಾಮ. ಪುನಃ ಯಾವನೊ ಗಾವಿಲ, ನಡುಗೇರಿಯ ಅಗಸ, ಕರುಬಿ ಹೇಳಿದ ನಾಣ್ನುಡಿಯ ನೆವ ಹಿಡಿದು ದೇವಿಯರಲ್ಲಿ ಕುಂದನೆಣಿಸಿದನಂತೆ. 'ಹೊನ್ನ ಸುರಿಗೆಯೆಂದೇ ಎದೆಗೊತ್ತಿದೆ. ಹೀಗೆ ಕರುಳನ್ನು ಕೊರೆಯುವುದೆಂದು ತಿಳಿಯದೆ ಹೋದೆನಲ್ಲಾ. ಆ ಅಗಸ ನನ್ನನ್ನು ಎಳಿಸಲಿಲ್ಲ. ಎಚ್ಚರಿಸಿದ' ಎಂದು, ಕೂಳ ಕೊರಚಾಡಿದರೆ ತಾನೊಂದಾಡಿದನಂತೆ. 'ಧರ್ಮ ಹಾಗೆ. ಅಪವಾದ ಹೊದ್ದಿದ ಬಳಿಕ ದೂಷಿತೆಯಾದ ಈ ಮಡದಿಯನ್ನು ಬಿಟ್ಟಲ್ಲದೆ ಮಾಣೆ. ಸೀತೆಯನ್ನು ತೊರೆದೇ ಸುಖವಾಗಿ ಬಾಳುವೆನು' ಎಂದು ತುಂಬಿದ ಬಸಿರಿಯನ್ನು, ಕವಡನರಿಯದ ಬಾಲೆಯನ್ನು ಕಾಡಿಗಟ್ಟಲು ಛಲ ಹಿಡಿದನಂತೆ. ಸೀತೆ ಅಡವಿಯ ರಿಸಿಹೆಂಗಳನ್ನು ಕಾಣಲು ಬಯಸಿದ್ದಳಂತೆ; 'ಅಂತದರಿಸೀ ನೆವದಿಂ ಅಡವಿಯೊಳುಟಿದೆ ಬಾರ' ಎಂದು ತಮ್ಮನಿಗೆಂದನಂತೆ. ಹೀಗೆ ರಾಮ ಕೂಳನ ಪಿಸುಣಿಗೆ ನಿರಪರಾಧಿನಿಯನ್ನು ಬಲಿತೆತ್ತ. ಊರಿನಲ್ಲಿ ಮಾರಿಯೆಂದು ಮನೆಯ ಹೋರಿಯನ್ನು ಮಾರು

ಗೊಟ್ಟ. ಹಾಲು ಹುಳಿತುದೆಂದು ಆವನ್ನು ಹೊಯ್ದ. ವ್ಯಾಜವಿಲ್ಲದೆ ಅಗಸನೊಬ್ಬ ತೆಗಳಿದನೆಂದು, ಅಬಲೆಯನ್ನು ಹೀಗೆ ಕಾರಡವಿಗೆ ಅಟ್ಟಿದ. ಹಾ! ರಾಘವಾ! ಕಿರುಕೂಸನ್ನು ನಿನ್ನ ಕೈಯಲ್ಲಿ ಕೊಡುವಾಗ ಜನಕನೇನೆಂದ? ಅಗ್ನಿಸಾಕ್ಷಿಯಾಗಿ ಸೀನೆ ಏನೆಂದೆ? ಪಾವಕ ಪಾವನೆಯನ್ನು ತೊರೆಯಲು ಹೇಗೆ ಮನಸ್ಸು ತಂದೆ? 'ನಿನ್ನೀ ಜಸಕೆ ನಿನ್ನೀ ಪೆರ್ಮೆಗೆ ನಿನ್ನೀ ಬೀರಕೆ ಇಂತಿದು ಪಾಡೇ!'

ಇಂತವನು 'ಸೀತಾರಾಮ'ನಂತೆ! ಸೀತೆಯನ್ನು ಹಾಗೆ ಉಳಿದು ಏತರ ಸೀತಾರಾಮ? ಕಲ್ಲೆದೆಯವನಂತೆ ಸೀತೆಯನ್ನು ತೊರೆದು ಬಳಿಕ ಪ್ರಲಾಪಿಸಿದನಂತೆ! ಮೊದಲು ತಲೆಹೊಯ್ಯಲೇಕೆ? ಅನಂತರ ಮರುಗಲೇಕೆ? ತಾನು ಯಶೋಧನನಂತೆ! ಲೋಕಾಪವಾದ ಭೀತಿಯಿಂದ ಅಡವಿಗಟ್ಟಿದನಂತೆ! ಅರಸಿಯೊಡನೆ ಏನೂ ಹಗೆಯಿಲ್ಲವಂತೆ! ಹಗೆಯೇನು, ನಗೆಯೇನು, ಅರಿಯದ ಹೆಣ್ಣೊಬ್ಬಳು ಕಾಡಿಗಾದಳು ತಾನೆ! ಅದನ್ನೆ ನೆನೆನೆನೆದು ಬಹಳ ಹಲುಬಿದನಂತೆ. ಏಕಂತೆ? ತನಗೆ ಬೇರೆ ಹೆಂಡಿರಿಲ್ಲವೆಂದೆ? ನಗು ಬರುವುದು ಇವನ ನಡತೆಗೆ. ಲೋಗರಿಗೆ ಅರಿವಿನ ಕೊರತೆಯೆಂಬುದನ್ನು ಸೀಡುಂ ಎಣಿಸನೇಕೆ? ತಗದ ಕಜ್ಜಮನೊಡರ್ಚಲೇಕೆ? ಕಟ್ಟಕಡೆಯೊಳ್ ಮನದೆ ಬರಿ ಮರುಕದಿಂ ಕುದಿಯಲೇಕೆ? ಇಂತವರು ಇವನೊಬ್ಬನೆ ಅಲ್ಲ, 'ಪಲಂಬರೊಳರ್.'

ಈ ವಿಯೋಗದುಃಖವನ್ನು ನೆನೆನೆನೆದು ಅನುಗಾಲ ಹಲುಬುತ್ತಿದ್ದನಂತೆ. ಇರಲು, ಒಮ್ಮೆ ದರ್ಶನಾರ್ಥವಾಗಿ ಅಗಸ್ತ್ಯ ಬಂದನಂತೆ. 'ಮುನಿ ಏನೆಂಗುಂ ನೋಟ್ಪೆಂ.' ಬಂದ ಮುನಿ, ರಾವಣ ಕುಂಭಕರ್ಣಾದಿಗಳು ಬ್ರಹ್ಮನ ಬಳಗ–ಎಂದನಂತೆ. ಇದು ಕೇಳಿ, ಸೀತೆಯನ್ನು ತೊರೆದುದಕ್ಕೆ ಪಶ್ಚಾತ್ತಪಿಸುತ್ತಿದ್ದ ರಾವಣಾರಿ 'ಪೆಣ್ಣೆವದಿಂ ಪಾತಕದಿನಿತೊಂದು ತಿಣ್ಣಮಂ ಪೊಱುವೊಡೆಂದೇಂ ಬಿದಿಮಾಡಿದನೇ? ಎಗ್ಗರೆನರೆ ಲೋಗರಾಡರೆ ಮಡದಿಗೆಂದು ಬ್ರಹ್ಮಘಾತಂಗೆಯ್ದನೆಂದು?' ಎಂದು ಹಲುಬತೊಡಗಿದನಂತೆ. ಎಲ್ಲ ಅನಿಷ್ಟಕ್ಕೂ ಸೀತೆ ಗುರಿ.

ಸೀತೆಯನ್ನು ರಾವಣ ಕದ್ದರೆ, ಅದು ಅವಳ ತಪ್ಪೆ? ತಾನು ಅಗ್ನಿ ಸಾಕ್ಷಿಕವಾಗಿ ಕೈ ಹಿಡಿದವಳ ಮಾನ ಪ್ರಾಣಗಳನ್ನು ಕಾಪಾಡಲು ಅಷ್ಟು ಆಯಾಸಪಟ್ಟು ರಾವಣನನ್ನು–ಬ್ರಹ್ಮನ ಬಳಗಪಾದರೇನಂತೆ–ಕೊಂದುದು ತಪ್ಪೆ? ಎಗ್ಗರ, ಲೋಗರ ಅರಿವಿನ ಕೊರತೆಯ ನುಡಿಗಷ್ಟು ದುಗುಡವೇಕೆ? 'ದಾನವರುಪಟಳಕೆ ಬಾರ್ತೆಗೆಟ್ಟ ಬರ್ದಿಲರಂ ಬರ್ದುಂಕಿಸಲ್ ಮೆಯ್ವೆತ್ತು ಪುಟ್ಟಿದ ಆದಿನಾರಾಯಣನಲಾ' ಇವನು! ಹಿಂದೆ 'ಬಲ್ಲೆಂ ಅವಳಯೋನಿಜೆಯೆಂಬುದಂ, ಪಾವನೆಯೆಂಬುದಂ. ಆದೊಡಂ ಜನರಿಂತು ಜಱೋಡಿಸೆ ಪುದುವಾಟ್ಸೆನೆಂತೊ' ಎಂದು ಸ್ವಸುಖೈಕಕಾಮನಾಗಿ ನಿರ್ದುಷ್ಟೆಯನ್ನು ಕಾಡಿಗಟ್ಟಿದನಲ್ಲ? ಅರಿಯದ ಹೆಣ್ಣಿನ ಪಾಡೇನೆಂದು, ಬೇಡ? ತನ್ನ ಸೊಗವೆ, ತನ್ನ ಪುದುವಾಟ್ನೆಯೆ ಯಾವಾಗಲೂ!

ರಾಮನಿಗಂತೂ ತನ್ನ ಅನ್ಯಾಯದ ಅರಿವಾಗದಿದ್ದರೆ ಮಹಾಮುನಿ ಅಗಸ್ತ್ಯನಾದರೂ ತಿಳಿಯಬೇಡ? ತಿಳಿಸಬೇಡ? ಇಲ್ಲ. 'ಪಾತಕಂ ಜ್ಞಾತಂ, ಅಜ್ಞಾತಂ' ಎಂದು ತೊಡಗಿ ಬ್ರಹ್ಮಹತ್ಯೆಯ ಪಾಪಕ್ಕೆ ಅಶ್ವಮೇಧ ಮಾಡೆಂದು ಒಡರಿಸುವನಂತೆ! ಈ ಸಾಕ್ಷಾನ್ನಾರಾಯಣ ಅಂತೆ ಗೈವನಂತೆ! ಸೀತೆಯ ಮಾತೇ ಇಲ್ಲ! ಮುಂದೆ ಬ್ರಹ್ಮ ಹತ್ಯೆಯ ಬಿಸಿಲುಗುದುರೆಯ ಬೇಟೆ! 'ಇಂತೆರ್ದವುಗುವ ಕತೆಗಿನ್ನೆಂ ತುಡುಗೊಱಿಯಂಗೆಯ್ವೆನೋ!' ಇದಕ್ಕಿಂತ, 'ಉಱಿದೊಡಂ ಅಱಿದೊಡಂ ಬಟ್ಟೆದೋರಿಪ ರಸಭರಿತಂ ಚರಿತಂ' ಆಗದಿದ್ದರೂ ರಸಭಾರದಲ್ಲಿ ಭೋಜಪ್ರಬಂಧ ವಿಕ್ರಮವಿಜಯ ಮಹಾವೀರಚರಿತಗಳೆ ಎಷ್ಟೋ ಮೇಲು.

* * *

ಆದರೆ ಇದನ್ನು ನಾನು ಹೀಗೆ ಹೇಳಲಾಗದು. ನಮ್ಮ ಜನ ಕೇಳಲಾರರು. 'ಛೀ! ಶ್ರೀರಾಮ ಪುಣ್ಯಚರಿತಮಂ ಪಾಟ್ಗತೆಯೆಂದು ಇಱಿಕೆಯ್ದು ತೆಗಟ್ವ!' ಎಂದಾತು. 'ಉಱಿದೊಡಂ ಅಱಿದೊಡಂ ಬಟ್ಟೆದೋಱಿಪ ರಸಭರಿತಂ ಚರಿತಂ' ಎನಿಸುವ 'ರಾಮಾಯಣದೊಳೇ ನಾನುಮೊಂದು' ಈ 'ಪುಣ್ಯಚರಿತಂ.' 'ಅಧರಕ್ಕೆ ಕಹಿ–ಉದರಕ್ಕೆ

ಸಿಹಿ 'ಯಾದ ಈ ಟೀಕೆಯನ್ನು ಜನಕ್ಕೆ ಹಿತವಾಗಿ ತಿಳಿಸುವುದೆಂತು ? ಒಳ್ಳೆಯದು. ಶೃಂಗಾರ ಹಾಸ್ಯಗಳ ಹಿತಮಿತ ಮಿಶ್ರಣದಲ್ಲಿ ಈ ಕಟು ಟೀಕೆಯನ್ನು ಕಲಸಿಕೊಡೋಣ.*

ಒಬ್ಬ ಕಬ್ಬಿಗರ ಬಲ್ಲಿದನಿರಲಿ. ಅವನಿಗೆ ಮುದ್ದಣ್ಣನೆಂದು ಮುದ್ದಾದ ಹೆಸರಿರಲಿ. ಅವನಿಗೆ ತಾನು ಬರುವುದನ್ನು 'ದೂರದೆ ಕಂಡೆಟ್ಟು ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕೆಯ್ಯಿಡಿದೊಳ ಚೌಕಿಗೆಗುಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುವ' ಮುದ್ದಿನ ಮಡದಿಯಿರಲಿ. ಅವಳಿಗೂ ಮುದ್ದಾದ ಹೆಸರಿರಲಿ: ಮನೋರಮೆ ಎಂದು. ಈಕೆ ಒಂದು ಸಂಜೆ ಕತೆ ಹೇಳುವಂತೆ ಅವನನ್ನು ಕೇಳಲಿ. ಸೀತಾಸ್ವಯಂವರ ಸೀತಾಪಹರಣಗಳನ್ನು ಅವನು ಮೊದಲೇ ಕತೆ ಹೇಳಿದ್ದಾನೆಂದು ಸಂಕೇತವಿರಲಿ. ಎಂದರೆ, ಇನ್ನುಳಿದ ಕತೆ ಸೀತಾಪರಿತ್ಯಾಗವೆಂದಾಯಿತು. ಆದರೆ ಮನೋರಮೆ 'ಶ್ರೀರಾಮಂ ಅಶ್ವಮೇಧಮಂ ಕೆಯ್ಕೊಂಡನೆಂಬಗಲ್ತೆ. ಆ ಕತೆಯೆ ಅಕ್ಕುಂ' ಎನ್ನಲಿ. 'ಅಯ್ಯೊ ! ಶೇಷರಾಮಾಯಣವೆ !' ಎಂದು ಹಂಗಿಸಲಿ ಮುದ್ದಣ ; 'ಬಲ್ಗತೆ ಕಣಾ ! ಒಂದೆರಡ್ದಿವಸಕ್ಕೆ ಮುಗಿಯದು !' ಎಂದು ಅವಳನ್ನು ಮರಳ್ಚಲು ಯತ್ನಿಸಲಿ. 'ಇರ್ದೆ. ಓರೊಂದು ದಿವಸಮಿನಿಸಿನಿಸಂ

---

* ಈ ಪದ್ಧತಿ ನಮ್ಮವರಿಗೇನೂ ಹೊಸದಲ್ಲ. 'ಅಧ್ಯಾತ್ಮವೆ ನಿಚಿತ ಪ್ರಯೋಜನವೆನಗೆ' ಎಂದ ರತ್ನಾಕರ ಕೂಡ—

ಆಗಮವಧ್ಯಾತ್ಮವಳವಟ್ಟು ಶೃಂಗಾರ ।
ತ್ಯಾಗಭೋಗವ ನೋಡಿ ಮರೆಯೆ ॥
ಭೋಗಿಯೋಗಿಗಳೆದೆ ಜುಮ್ಮುಜುಮ್ಮೆನೆ ನೇನು ।
ದಾಗಿ ಸೊಲ್ಲಿಸುವೆನಾಲಿಸಿರೊ ॥

ಎಂದು ಭರತೇಶ ವೈಭವದಲ್ಲಿ ಹೇಳಲಿಲ್ಲ ? ಅಶ್ವಘೋಷನನ್ನೂ ನೋಡಿ:

ಇತ್ಯೇಷಾ ವ್ಯುಪಶಾಂತಯೇ ನ ರತಯೇ ಮೋಕ್ಷಾರ್ಥಗರ್ಭಾ ಕೃತಿಃ ।
ಶ್ರೋತೄಣಾಂ ಗ್ರಹಣಾರ್ಥಮನ್ಯಮನಸಾಂ ಕಾವ್ಯೋಪಚಾರಾತ್ ಕೃತಾ ।
ಯನ್ಮೋಕ್ಷಾತ್ ಕೃತಮನ್ಯದತ್ರ ಹಿ ಮಯಾ ತತ್ಕಾವ್ಯಧರ್ಮಾತ್ಕೃತಂ ।
ಪಾತುಂ ತಿಕ್ತಮಿವೌಷಧಂ ಮಧುಯುತಂ ಹೃದ್ಯಂ ಕಥಂ ಸ್ಯಾದಿತಿ ॥

ಪೇೞ್ವೊಡೇಂ ?' ಎನ್ನಲಿ ಆಕೆ. ಹೀಗೆ, ಹೇಳದೆ ತೀರದಾಗಿ ಬಂದಾಗ, ಈ ಕಬ್ಬಿಗರ ಬಲ್ಲಹ ಈ ಬರಿ ರಗಳೆಯ ಸಿಡುಗತೆಯಿಂದ ಆಕೆಗೆ ತಲೆ ನೋವು ಬರುವಂತೆ ಹೇಳಲಿ. ಈ ಕತೆಯ ಗುಣಕ್ಕೆ ತಕ್ಕಂತೆ ಹೇಳುವ ಸಮಯ ವರ್ಷಾಕಾಲದ ಸಂಜೆಯಾಗಿರಲಿ. ಒಳಗೆ ಹೇಗೋ ಹೊರಗೂ ಹಾಗೆ ಸೋನೆಯಿರಲಿ. 'ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿಂ ಜೇಸತ್ತ ಬಗೆ'ಯನ್ನು ತಣಿಸಲು ಇದಕ್ಕಿಂತ ಯೋಗ್ಯ ಕತೆಯೆಲ್ಲಿ !

ಮುದ್ದಣ ಮನೋರಮೆಗೆ ಅಶ್ವಮೇಧದ ಕತೆ ಬಿತ್ತರಿಸಲಿ. ಬಿತ್ತರಿಸುತ್ತ ಬಿತ್ತರಿಸುತ್ತ, ಯಜ್ಞಕಾಲಕ್ಕೆ ಸೀತೆಯಲ್ಲಿರಲಿಲ್ಲವೆಂದು 'ಪೊನ್ನ ಸೀತೆ'ಯನ್ನು ಸೂಚಿಸಲಿ. ಏಕಿರಲಿಲ್ಲವೆಂದು ಕುತೂಹಲ ಕೆದಕಿದ ಮನೋರಮೆಗೆ ಮುದ್ದಣ ಸೀತಾಪರಿತ್ಯಾಗದ ಕತೆಯನ್ನು ಮರುಗಿಸುವಂತೆ ವಿಸ್ತರಿಸಲಿ. ಮನೋರಮೆ ಅದರಲ್ಲಿ ಆಸಕ್ತಳಾದಳೆಂದು ಕಂಡು ಬಂದಾಗ 'ಇಂತು ನಡೆನಡೆದು ಬಲ್ಬಾರಂಬೋಗಿ ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳಣ್ಣನ ಕಟ್ಬಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುೞಿಸಿ ಪೋದಂ' ಎಂಮ ತಟ್ಟನೆ ಮುಗಿಸಲಿ. ಆಗ ಮನೋರಮೆ ತಾನಾಗಿಯೆ, ಅಶ್ವಮೇಧದ ನೆನಪೆ ಇಲ್ಲವೆಂಬಂತೆ, ಸೀತಾಪರಿತ್ಯಾಗವನ್ನು ವಿಸ್ತರಿಸಬೇಕೆಂದು ಬೇಡಲಿ. ವಿಸ್ತರಿಸುತ್ತ, ಮಧ್ಯೆ ಮುದ್ದಣ 'ಜನ್ನಗುದುರೆ'ಯ ಹೆಸರೆತ್ತಲಿ. ಎತ್ತಿದೊಡನೆ 'ಸುಡುಸುಡು ನಿನ್ನ ಜನ್ನಗುದುರೆಯಂ. ಆ ಕತೆಗೀಗಳೆ ಪೊಟ್ಟೆ ? ಸೀತೆಯೇನಾದಳೆಂತಿರ್ದಳೆಂದು ಪೇೞಯ್' ಎಂದು ಮನೋರಮೆ ಸಿಡಿಮಿಡಿಗೊಳ್ಳಲಿ. ಸೀತೆ ಪ್ರಾಚೇತಸನ ಒಲ್ಮೆಗಾಪಿಗೆ ಬರುವತನಕ ಮುದ್ದಣ ಕತೆ ತಿಳಿಸಲಿ. ಅಲ್ಲಿಂದ ಮುಂದೆ, ಇಂತಹ ಕತೆಯ ಪಕ್ಕದಲ್ಲಿ ಅವಳು ಕೇಳಬಯಸಿದ ಅಶ್ವಮೇಧದ ಕತೆ ಹೇಗೆ ಕಾಣುವುದೆಂಬುದಕ್ಕೆ ಕುದುರೆ ಹೊರಟು ನಡೆದುದನ್ನು 'ಸವಿಸ್ತರಂ ನಿರವಿಸಲಿ'; 'ತೊಡಂಕಿ ಬೆದಂಕಿ ಪೇೞಲಿ.' ಮನೋರಮೆಗೆಯೆ 'ಎಲ್ಲೆಲ್ಲಿ ಕೇಳಿಕೊಂಡೆ ನಾನೀ ಕತೆಯನ್ನು!' ಎನ್ನುವಂತೆ ಹೇಳಲಿ. ಆಕೆ ಆ ಕತೆಯ ಬಗ್ಗೆ (ನನ್ನ) ತನ್ನ ಅಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ಹೇಳಿಬಿಡಲಿ. **(ಹೆಂಗುಸಧು**

ತಾನೆ ಈ ಅಭಿಪ್ರಾಯ! ಅದರಲ್ಲೂ ಆ ಹೆಂಗುಸು ಮನೋರಮೆ ಯಂತಹ ಮನೋಹರಿ ತಾನೆ! ಅದೂ ಮನೆಯೊಳಗೆ ಕುಳಿತು ಗಂಡ ನೊಂದಿಗೆ ತಾನೆ! ಲೋಕಾಂತವಲ್ಲವಲ್ಲ! ಏಕಾಂತ!) ಯಜ್ಞಾಶ್ವ ಸಂಚಾರದ ಕತೆ ಕೇಳಿ ತೂಕಡಿಸುತ್ತಿದ್ದ ಮನೋರಮೆ (ಲವಕುಶ) ಕುಮಾರರು ಕುದುರೆ ಕಟ್ಟಿದುದು ಕೇಳಿ ಎಚ್ಚರಗೊಳ್ಳಲಿ. ಆ ಕುವರರ ಕತೆ ಕೇಳಲು ಉತ್ಸುಕಳಾಗಲಿ. ಆಗ 'ಎಳಗುವರರೊಂದು ಕತೆ ಮುಂತಿರ್ಕೆ. ನೀಂ ಮುನಿವೆರಸು ಪೋದ ಸೀತೆಯೊಂದಿರವನಱಿ ತುಂಟೆ?' ಎಂದು ಮುದ್ದಣ ಎಚ್ಚರಗೊಡಲಿ. 'ಆ ಮಕ್ಕಳಿರ್ಕೆ ಪೋಕೆ. ಎನ್ನಬ್ಬೆ ಸೀತೆಯೆಂತಿರ್ದಳೇಂಗೆಯ್ದುಳ್ ಪೇಟ' ಎನ್ನುವಷ್ಟು ಮಟ್ಟಿಗೆ ಮನೋರಮೆ ಅಶ್ವಮೇಧದಿಂದ ಸೀತಾತ್ಯಾಗದ ಪರಿಸಮಾಪ್ತಿಗೆ ಮುರಿದು ಬರಲಿ. ಮುಂದೆ 'ಮಕ್ಕಳ ಸೆರಗಿಲ್ಲದ ಸಾಸಕ್ಕೆ ಬೆಱಗುವಟ್ಟು ಹುಂಗುಟ್ಟದೆ ಗುರುಗುಮ್ಮ'ಸಿರಲಿ. ರಾಮ ಸೀತೆಯನ್ನು ಕರೆದೊಯ್ದನೆ ಎಂಬುದನ್ನೂ ಮುದ್ದಣ ವಾಚ್ಯವಾಗಿ ಹೇಳದಿರಲಿ. ಮನೋರಮೆಯೆ ಮರೆಯದೆ 'ಏಂ ಸೀತೆಯನಿನ್ನುಂ ಕೂಡಿ ಪೋಗನೆ?' ಎನ್ನಲಿ. ಈಗ ಕೂಡಿಯೆ ಪೋದನೆಂದಾಗ, ಹಿಂದೆ ಸೀತೆಯನ್ನು ತೊರೆದುದಕ್ಕೆ ರಾಮ ನನ್ನು ತೆಗಳಿದಾಕೆ ಈಗ ತಾನೇ 'ರಾಮನೊಳ್ಳಿದನಕ್ಕೆ' ಇತ್ಯಾದಿ ತುದಿ ಕೊನೆಯಿಲ್ಲದೆ ಹರಸಲಿ. ಹೀಗೆ ಮುದ್ದಣ, ಕಬ್ಬಿಗರ ಬಲ್ಲಹ, 'ಅರಿ ಯದರಂತೆ ಮಿಣ್ಣನಿರ್ದು' ಮನೋರಮೆಯನ್ನು 'ತನ್ನಿಂ ತಾನೆ ಕಟ್ಟಿಸಿದ ಬಿಟ್ಟ'ನಾಗಲಿ.

* * *

ಉಂ. ದೊಡ್ಡ ವಿಡಂಬವಾಯಿತು. ಆದುದು ಆಯಿತು; ಎಡೆ ಎಡೆಗಿರಲಿ ಇನ್ನೊಂದೆರಡು......ಪದ್ಯ ಪಥ್ಯವಂತೆ! ಗದ್ಯ ಹೃದ್ಯವಂತೆ! 'ಅತ್ತೆವಿರೇಂ ಬಯ್ದರೆ? ಎನ್ನೊತ್ತಿನ ಸಹಜಾತರಂತುಟಣಕಿಸೆ ನಿನಗಾದತ್ತೆ ವಿಷಾದಂ? ದೂಸಱಿದೆತ್ತಣಿನಾಯ್ತರಸಿ ನಿನಗೆ ಸರಸಿರು ಹಾಕ್ಷೀ?' ಪದ್ಯವೂ ಹೃದ್ಯವಾಗಬಲ್ಲುದು. 'ಸ್ವಸ್ತಿ. ಶ್ರೀಮತ್ಸುರಾ ಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮುಕುಟ ತಟಘಟಿತ—' ಇದಕ್ಕಿಂತ ಪಥ್ಯವಾದ ಗದ್ಯ ಬೇಕೆ! ಇದು 'ಸಕ್ಕದದೊಂದು ಚೆಲ್ವು!'

........ಪುರಾಣ ಕತೆಗಳನ್ನು ಕುರಿತು ಈ ಸಣ್ಣ ಸೂಜಿಚುಚ್ಚಿರಲಿ: ಸ್ವರ್ಗದ ದೇವತೆಗಳಿಗೂ ಭೂಮಿಯ ತಪಸ್ವಿಗಳಿಗೂ ಹಗೆಯಂತೆ. ಇವರು ತಪಸ್ಸಿಗೆ ನಿಂತರೆ ದೇವತೆಗಳು ಅಡ್ಡಿಯೊಡ್ಡುವರಂತೆ. ಇದು ಹುಟ್ಟುಹಗೆ. ನಾಡವರು ದಿನ ದಿನ ಬೇಳುವ ಹವ್ಯವನ್ನು ಉಂಡುಂಡು ಸವಿಕೊಂಡ ದೇವತೆಗಳು ಎಲ್ಲಿಯಾದರೂ ಒಬ್ಬ ಈ ನಿತ್ಯಬಲಿಯಿಂದ ಪುರುಳು ಕಾಣದೆ ಹೆಜ್ಜೆಯಿಟ್ಟು ತಿರುಳು ಪುರುಳುಗಳನ್ನು ತೋರಿಸುವ ಯೋಗಕ್ಕೆ ಸಂಚುಗೆಯ್ದೊಡನೆ ಕರುಬಿ ಸದಾ ಈ ಉದ್ಯೋಗಕ್ಕೆ ತಡೆ ಬರುವರು. ಕಳ್ಳು ಕುಡಿದವರು ಏನು ತಾನೆ ಮಾಡುವುದಿಲ್ಲ? ನೂರು ಯಜ್ಞದ ಬಲ್ಮೆಯಿಂದ ಸ್ವರ್ಗದಲ್ಲಿ ಬಾಳುವ ಇಂದ್ರ ಕೂಡ ಈ ಯೋಗಮಾರ್ಗವನ್ನು ಕಂಡು ಇರಲಾರ........

ಇಂತಹ ವಿಷಯಗಳನ್ನು ಬಿಟ್ಟು ಸ್ವತಂತ್ರ ಕೃತಿಗೆ ತೊಡಗಿದರೆ ಕಬ್ಬಿಗರ ಬಲ್ಲಹ ಏನು ಮಾಡಬಲ್ಲನೆಂಬುದಕ್ಕೆ ಮುದ್ದಣ ಮನೋರಮೆಯರ 'ಕಾಮದೇವ–ರತಿದೇವಿ' ಸಲ್ಲಾಪ ಸಾಕ್ಷಿಯಿರಲಿ. ಕೊನೆಗೊಂದು ಕೊಂಡಿಯಿರಲಿ: 'ಇಂತು ವ್ಯರ್ಥಾಳಾಪದಿಂ ಪೊೞ್ತಂ ಕಳಿವೆಮ್ಮಂ ಲೋಗರ್ ಪೞಿಯರೆ? ಪೋ ಮಾಣ್. ರಾಮಕಥೆಯ ನಿರ್ಸ್ನೋರೆಪೆಂ ಕೇಳ್,' ಎಂದು. ವ್ಯರ್ಥಾಳಾಪವೆಂದು ಯಾರೂ ಪಳಿಯರು, ಗೊತ್ತು. ರಾಮಕಥೆಗಿಂತ ಇದನ್ನೆ ಹೇಳು–ಎಂಬರು, ಗೊತ್ತು. ಆದರೆ ನಾನು ತೋರ ಹೊರಟಿರುವುದು ಅಶ್ವಮೇಧದ ಕತೆಯ ಪುರುಳನ್ನು. ಇದೊ; ಇರಲಿ ಇನ್ನೊಂದು ರಸಸ್ಥಾನ: 'ಭವತಿ ಭಿಕ್ಷಾಂದೇಹಿ' ಮಂತ್ರೋಪದೇಶ........ಇವು ಶೃಂಗಾರ ಹಾಸ್ಯಗಳಿಗಾಯ್ತು. ವೀರರಸಕ್ಕೆ ಕುಶಲವರ ಕಾಳಗ ಸಾಕು. ತೂಕಡಿಸುತ್ತಿದ್ದ ಮನೋರಮೆ ಎಚ್ಚತ್ತು ಈ ಕತೆ ಕೇಳಿ 'ನೆರಗಿಲ್ಲದ ಸಾಸಕ್ಕೆ ಮರವಟ್ಟು' ಇರಲಿ. ಜೊತೆಗೆ ಕಬ್ಬಿಗರ ಬಲ್ಲಹನ ಬಣ್ಣನೆಯ ಕುಸುರಿ ಕಾಣಿಸಲಿ ಕಥಾಮುಖದಲ್ಲಿ; ಹಾಗೂ ಅಲ್ಲಲ್ಲಿ ಎಡೆಗಳಲ್ಲಿ. ಹೆಚ್ಚೇಕೆ? 'ಮುನ್ನೀರ ನೀರ ಸವಿಯುಸಱಿಪೊಂದು ಬಗೆಯೊಳ್ **ಕೊಡನ** ಕುವರನಂತಿರೆ ಬಲ್ಲಹಲನೆ ಕುಡಿವೊಡಕ್ಕುಮೆ? **ಒರ್ಪನಿ ಸಾಲದೆ?'**

* * *

—ಎಂದು ಸಂಸ್ಕೃತ ರಾಮಾಶ್ವಮೇಧವನ್ನು ಓದಿದ ನಂದಳಿಕೆ ಲಕ್ಷ್ಮೀನಾರಣಪ್ಪನವರು ಕನ್ನಡದಲ್ಲಿ ರಾಮಾಶ್ವಮೇಧ ಬರೆದರು.

ಪರಂಪರೆಯಾಗಿ ಪವಿತ್ರವೆಂದು ನಡೆದುಬಂದ ಈ ಕತೆಯನ್ನು ಕುರಿತು ತನ್ನ ಅಭಿಪ್ರಾಯವನ್ನು ಇಷ್ಟು ಸ್ಪಷ್ಟವಾಗಿ, ನಿರ್ಭಯವಾಗಿ ಹೇಳಿದ ಈತನೀಗ ದಿಟ್ಟ! ಇಂತಹ 'ಅಪ್ರಿಯವಾದ ಸತ್ಯ'ವನ್ನು ಕೂಡ ಯಾರ ಮನಸ್ಸಿಗೂ ನೋವಾಗದಂತೆ, ಸಹಜಕಾವ್ಯವೋ ಎಂದು ಪ್ರೀತಿಬರುವಂತೆ ನವ್ಯವಾಗಿ ನಿರೂಪಿಸಿದ ಈತನೀಗ **ಕಬ್ಬಿಗರ ಬಲ್ಲಹ!**

*　　　*　　　*

ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ .....

—ಎಂದು ಹೇಳಿದ ಕಾವ್ಯಾವಲೋಕನಕಾರ. ನಂದಳಿಕೆ ಲಕ್ಷ್ಮೀನಾರಣಪ್ಪನವರ ಪ್ರತಿಭೆ ನಿಸರ್ಗವಾದುದು. ಕಾವ್ಯವಿದ್ಯಾಪ್ರಚಯ ಪರಿಚಯವೂ ವೃದ್ಧಸೇವಾನುರಾಗವೂ ಅವರಿಗೆ ಮುಳಿಲಿ ಸುಬ್ಬರಾಯ ರೆಂಬವರ ಕೃಪೆಯಿಂದ ಆಗಿ ಬೆಳೆಯಿತು. ಇನ್ನುಳಿದ ಸತತಾಭ್ಯಾಸ ಪ್ರಯತ್ನ **ರತ್ನಾವತೀ ಕಲ್ಯಾಣ** ಮತ್ತು **ಕುಮಾರ ವಿಜಯ**ಗಳೆಂಬ ಯಕ್ಷಗಾನಗಳಲ್ಲಿ ಪ್ರಾರಂಭವಾಗಿ, **ಅದ್ಭುತ ರಾಮಾಯಣ, ಶ್ರೀರಾಮ ಪಟ್ಟಾಭಿಷೇಕ** ಮತ್ತು **ಶ್ರೀರಾಮಾಶ್ವಮೇಧ**ಗಳಲ್ಲಿ ಮುಂದುವರಿಯುತ್ತಿರುವಾಗಲೇ ನಿರ್ಘೃಣನಾದ ಕಾಲ ಇವರನ್ನು ಕೊಂಡೊಯ್ದು.

ಇವರು ಇದ್ದ ಈ ಸ್ವಲ್ಪ ಕಾಲದಲ್ಲೇ ಕನ್ನಡಕ್ಕೆ ಕೊಟ್ಟುಹೋದ ಕೃತಿಗಳಲ್ಲಿ ಮೊದಲಿನೆರಡು ಯಕ್ಷಗಾನಗಳು ಕನ್ನಡ ಜಿಲ್ಲೆಯಲ್ಲಾದರೂ ಪ್ರಚಾರದಲ್ಲಿದ್ದಂತಿಲ್ಲ. ಮಿಕ್ಕ ಮೂರೂ ಬಹುಜನ ಪರಿಚಿತವಾದವು. ಅವುಗಳಲ್ಲಿ ರಾಮಾಶ್ವಮೇಧವಂತೂ ಸರ್ವಜನಮಾನ್ಯವಾದುದು. ಅದರೊಳಗೂ ಮುದ್ದಣ–ಮನೋರಮಾ ಸೃಷ್ಟಿಯಂತೂ 'ಕೇಳ್ದಂ ಬಹುಶ್ರುತನಲ್ಪಶ್ರುತನೆನ್ನದೆ ಆರ ಕಿವಿಗಂ ಸುಣ್ಣಿಂಪಿನೊಳ್ ಕೂಡೆ ಪಂಡಿತರುಂ ಮೂರ್ಖರುಂ ಎಕ್ಕೆಯಿಂ ಪೊಗಟಿ' ರಚಿತವಾದುದು. ನಂದಳಿಕೆಯವರಿಗೆ ತಮ್ಮ ಅಳವು ತಿಳಿದುದು ಇದನ್ನು ರಚಿಸುತ್ತಿರು

ವಾಗಲೆ. 'ಕನ್ನಡಗಬ್ಬಿಗರ ಮನೆಯೂಟಿಗದವನೊರ್ವಂ ಕನ್ನಡಿಗಂ ಪೇಟ್ದ'ನೆಂದು ಅದ್ಭುತ ರಾಮಾಯಣವನ್ನು ಹೊರಹಾಕಿದವರು, 'ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದು' ಎಂದು ಮಹಾಲಕ್ಷ್ಮಿ ನಾಮದಿಂದ ಶ್ರೀರಾಮ ಪಟ್ಟಾಭಿಷೇಕವನ್ನು ಹೊರಗೆಡವಿದವರು, ರಾಮಾಶ್ವಮೇಧದ ಕಾಲಕ್ಕೆ 'ಅರಮನೆಯಿಂ ಪ್ರೋಜನಮಡುವ ಕಬ್ಬಿಗರ ಬಲ್ಲಹ ಮುದ್ದಣ'ನಾದರು. 'ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚಿನೀವರ್. ನೀನೀವುದೇಂ?' ಎಂದು ಕೇಳುವಮಟ್ಟಿಗಾದರು. ಇಂತಹ ಕಾವ್ಯ ನೂರಾರು ಬರೆದೇನೆಂಬ ಆತ್ಮವಿಶ್ವಾಸ ಇವರಿಗೆ ಆ ಕಾಲಕ್ಕೆ ಬಂದಿತ್ತು. ಆದರೆ ಇವರ ಕವಿತೆಯ ಪರಿಪೂರ್ಣ ಪಕ್ವ ಫಲಗಳಿಗೆ ಕನ್ನಡ ಕೇಳಿಕೊಂಡು ಬಂದಿರಲಿಲ್ಲ.

ಶ್ರೀ ರಾಮಾಶ್ವಮೇಧ ಬಹುಶ್ರುತ ಅಲ್ಪಶ್ರುತರೆನ್ನದೆ ಎಲ್ಲರಿಗೂ ಪ್ರಿಯವಾಗುವುದು ಅದರ ರಾಮಾಯಣ ಕಥಾನಕ ಮಾತ್ರದಿಂದಲ್ಲ, ಅದರ ತಿರುಳ್ಗನ್ನಡಪ್ರೌಢದರಿಂದಲ್ಲ, ಅದರ ಹೃದ್ಯವಾದ ಗದ್ಯದಿಂದಲೇ ಅಲ್ಲ, ಇವೆಲ್ಲಕ್ಕೂ ಅತಿಶಯವಾಗಿ ಅದರಲ್ಲಿ ಮೂಡಿರುವ ಹೊಚ್ಚ ಹೊಸ ಹಾಸ್ಯ ಪದ್ಧತಿಯಿಂದ.

ಒಂದೆ ತಂತಿಯು ನೀವಿದೇತಕೆ ನುಡಿಸುತಿರುವಿರಿ ಸುಮ್ಮನೆ?
ನಾಲ್ಕು ತಂತಿಯು ಮೀಟಿ ಕೆರಳಿಸಿ ಎಲ್ಲ ತಾಳಕು ನುಡಿಯಿರಿ.
ನಯವು ನುಣುಪು ಸವಿಯು ಮೆಲುಪು ಬೇಸರಾಯಿತು, ನಿಲ್ಲಿಸಿ;
ಹಿರಿಯ ರಾಗದ ಮುದವ ಕೆರಳಿಸಿ ಗಂಡು ತಾನವ ನೊಳಗಿಸಿ.
ಒಡೆದ ಸರಸವ ಮುರಿದ ಮನಗಳ ಒಲಿದ ಜೀವದ ವಿರಹವ
ಕರಸಿ ತೋರಿಸಿ ತರಿಸಿ ಕಂಬನಿ ಧೈರ್ಯವೇತಕೆ ಮುರಿವಿರಿ?
ಸಡಿಲ್ವ ಮನಗಳ ಬಿಗುಪನೇರಿಪ ವೀರಭರವಸೆಯೂಡಿರಿ,
ಜೀವರಸಗಳನೆರೆದು ನೆನಸಿರಿ ಬಾಳುವಾಸೆಯು ಮೆರಸಿರಿ.
ಕೈಗಳೋಡಲಿ ಬೆರಳು ಹಾರಲಿ ನಾದ ಸೂವೆ ಸೂಡೆಗರೆಯಲಿ
ನಲಿಸಿ ಕೂಗಿಸಿ ಉಳಿಸಿ ನಗಿಸುವ ಗಾನವೈಸಿರಿ ಹಾಯಿಸಿ.
ಒಂದು ತಂತಿಯನೆಳೆದು ಸೆಳೆದು ಎದೆಯ ಸೀಳುವಿರೇತಕೆ?
ಎಲ್ಲ ತಂತಿಗಳೆಲ್ಲ ರಾಗದ ಎಲ್ಲ ಸಂತಸ ಸೂಸಿರಿ.

— ಎಂದು ಈಗಿನವರೊಬ್ಬರು ಹಾಡಿದ್ದಾರೆ. ನಮ್ಮ ಪ್ರಾಚೀನರು ಶೃಂಗಾರ, ಶಾಂತ, ಕರುಣಗಳಲ್ಲಿ ಅದ್ವಿತೀಯರು, ಎತ್ತಿದ ಕೈ. ಆಗಾಗ್ಗೆ ವೀರ ಚಿತ್ರಿಸುವುದೂ ಉಂಟು. ಶೃಂಗಾರಕ್ಕೆ ಅನುಸರಿಸಿ ಹಾಸ್ಯವೂ ಆಗಾಗ ಇಣಿಕುವುದೂ ಉಂಟು. ಆದರೆ ಅವರಲ್ಲಿ ಹಾಸ್ಯಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಅವರಲ್ಲೂ ರಾಮಾಶ್ವಮೇಧದಲ್ಲಿ ಕಾಣುವಂತಹ ಹಾಸ್ಯ ಅನ್ವರ್ಥವಾಗಿ ಅಪೂರ್ವ. ಕಂಡರೆ ರತ್ನಾಕರನೊಬ್ಬನಲ್ಲಿ ಕಾಣಬಹುದು, ಇದೇ ಆಳ ಅಗಲಗಳ ಹಾಸ್ಯ. ಆದರೆ ಅದು ಕೂಡ ಆ ಭರತೇಶ ವೈಭವದ ಬೃಹತ್ತಿನಲ್ಲಿ ಕುರಿತ ಹೊರತು ಕಾಣಸಿಗದು. *

ರಾಮಾಶ್ವಮೇಧ ಹೇಗೆ ನಂದಳಿಕೆಯವರ ರಸನಗೆಯಿಂದ ನಿರ್ಮಾಣವಾಯಿತೆಂದು ಹಿಂದಿನ ಲೇಖನದಲ್ಲಿ ಹೇಳಿದೆ. ಇವರ ರಾಮಾಯಣದ ರತ್ನತ್ರಯಗಳು ಮೈಸೂರ ಕಡೆ ಪ್ರಕಟವಾದುದು ಕೂಡ ಇವರ ಸ್ವಾಭಾವಿಕ ಹಾಸ್ಯಗುಣಕ್ಕೆ ಸಾಕ್ಷಿ.

ನಂದಳಿಕೆಯವರು ಲಕ್ಷ್ಮೀಶನನ್ನು ಓದಿದ್ದರು; 'ವಿನೂತನ ಕವಿತೆಯೆಂದು ಜರೆಯಬೇಡಿ. ಮತ್ಸರವನುಳಿದು ಆಲಿಸಿ' ಎಂದುದನ್ನು ಕೇಳಿದ್ದರು. 'ತೆಗಳಲ್ ಬಲ್ಲಂ ಖಳನೇಂ ನೆಗಳಲ್ ಬಲ್ಲನೆ ನವೀನ ಕೃತಿಯಂ' ಎಂಬ ಶಬರಶಂಕರವಿಲಾಸದ ಪದ್ಯ ಅವರಿಗೆ ತಿಳಿದಿತ್ತು. ಅದೇ ಷಡಕ್ಷರಿಯ

ಮೊದಲಕವೀಂದ್ರರೊಲ್ದೊರೆದ ಸತ್ಕೃತಿ ಸಂಚಯಮೀ ಧರಿತ್ರಿಯೊ
ಳ್ಪುದಿದಿರೆ ನೋಡಿ ತುಷ್ಟಿವಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ
ಗಡಿಸರೊ ಬೇರೆನುತ್ತೆ ನುಡಿವಟ್ಟಿ ಜಕಾರನವಂಗೆ ಪುತ್ರಸಂ
ಪದಮೊದವೇಕೆ ಬೇರೆ ಪರಪುತ್ರರಸೀಕ್ಷಿಪ ತುಷ್ಟಿಸಾಲದೇ

* ನಂದಳಿಕೆಯವರು ರತ್ನಾಕರನನ್ನು ಓದಿದ್ದಿರಬೇಕೆಂದು ನನಗೆನ್ನಿಸುತ್ತದೆ. ಇವರು 'ಶ್ರೀರಾಮ ಪಟ್ಟಾಭಿಷೇಕ'ದಲ್ಲಿ ಒಬ್ಬ 'ದಿಗಂಬರ ವಿಲಾಸ'ನನ್ನು ಸ್ಮರಿಸಿದ್ದಾರೆ. ಶ್ರೀ ರಾಮಾಶ್ವಮೇಧದಲ್ಲಿ 'ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆ'ಯ ಪ್ರಸ್ತಾಪ ಬಂದಿದೆ. ಇವಕ್ಕೂ ಹೆಚ್ಚಾಗಿ ಮುದ್ದಣ ಮನೋರಮೆಯರ ಸರಸ ಸಲ್ಲಾಪ ಓದಿದರೆ, ಭರತೇಶ್ವರನು ಕುಸುಮಾಜಿ, ಮಕರಂದಾಜಿ, ಪದ್ಮಿನಿಯರೊಡನೆ ಆಡಿದ ಸರಸ ನೆನಪಾಗುತ್ತದೆ.

ಎಂಬ ಪದ್ಯ ಇವರಿಗೆ ಗೊತ್ತಿದ್ದಿರಬೇಕು. ‘ಇಂದಿನವರಂದಿನವರ್ ಕೆಲರೆಂದು ಪಿಕ್ಕುವೀ ದಂಪುಗದಿಂಪಮೇನೆಮಗನಿಂದ್ಯ ಕವೀಂದ್ರರೆ ಪಂದ್ಯರಾವಗಂ’ ಎಂಬ ಮಧುರನ ಮಾತು ಇವರಿಗೆ ತಿಳಿಯದಿದ್ದಿರಬಹುದಾದರೂ ತಮ್ಮ ನಾಡಕಡೆಯವನೇ ಆದ ರತ್ನಾಕರನು

ತೊಡಗುವರ್ ತಾವು ಕವಿತ್ವವ ಕತೆಗಳು
ನಡೆಯುದು ಕಿವಿಗೆ ಶೋಭಿಸದು
ಬಿಡು ಹೊಸ ಕವಿತೆಯನೆಂಬುದು ಪೂರ್ವದ ಶಾಸ್ತ್ರ
ಗದಬಡೆ ಮಾಡುವರೊದವನೆ

ಎಂದು ಹೇಳಿದುದಾದರೂ ಇವರಿಗೆ ತಿಳಿದಿರಲಿಕ್ಕೂ ಸಾಕು. ರನ್ನನ ಗದಾಯುದ್ಧವನ್ನಂತೂ ಇವರು ಓದಿದ್ದುದರಿಂದ, ಅದರಲ್ಲಿಯ

ಕವಿಗಳೊಳಾ ಪುರಾಣಕವಿಪುಂಗವರೊಳ್ಳಿದರೀಗಳಿಲ್ಲ ಸ
ಕ್ಕವಿಗಳೆನಲ್ಕೆ ಪೇಡವರ ಪೋದೊಡವಂದಿರ ಕಬ್ಬಮಿನ್ನುಮಿ
ರ್ಪುವು ಗುಣದೋಷಮುಂ ಸಿಕಷಮಿಟ್ಟು ಪರೀಕ್ಷಿಸಿ ನೋಡೆ ತಾವೆ ಪೇ
ೞವೆ ಬುಧರಿರ್ಪು ನೋೞ್ಪುದು ಪುರಾತನ ನೂತನ ಕಾವ್ಯರೇಖೆಯಂ

ಎಂಬ ಪದ್ಯ ಇವರಿಗೆ ಹೃದ್ಗತವಾಗಿತ್ತು. ‘ಹೀಗೆ ಲಕ್ಷ್ಮೀಶ, ಷಡಕ್ಷರಿ, ರನ್ನ ಮೊದಲಾದವರಿಗೇ ಅವರ ಕಾಲದಲ್ಲಿ ಈ ಮಂಗಳಾರತಿಯಾಯಿತಾದರೆ, ಕುಸ್ತಿ ಮಾಸ್ತರನಾದ ನಾನು ಕನ್ನಡದಲ್ಲಿ, ಅದೂ ಹಳಗನ್ನಡದಲ್ಲಿ, ಕಾವ್ಯ ಬರೆದೆನೆಂದರೆ ಬೆಲೆ ಕೊಡುವವರು ಯಾರು ? ಬೆಲೆ ಹಾಗಿರಲಿ, ನಂಬುವವರು ತಾನೆ ಯಾರು ?’ ಎಂದು ಎನ್ನಿಸಿದ್ದಿರಬೇಕು ಇವರಿಗೆ. ‘ಮುಂತೆ ಸರಿಯಿಲ್ಲೆಂದು ಪೊಗೞ್ದವನ ಪೊೞ ಮಡಿಸಿ ಪಿಂತವನ ಕವಿತೆಯೇನೆಂದು ನಿಂದಿಸು’ವ ಮರ್ಯಾದೆ ‘ರಾಘವಾಂಕಪಂಡಿತನುಭಯಕವಿಶರಭಭೇರುಂಡ’ನಿಗೆ ದೊರಕಿರಬೇಕಾದರೆ ತನಗೆ ಏನು ತಾನೆ ದೊರಕದು !—ಎಂದು ಎನ್ನಿಸಿದ್ದಿರಬೇಕು ಇವರಿಗೆ. ಸಾಲದುದಕ್ಕೆ ‘ಕನ್ನಡ ಜಿಲ್ಲೆಯವರ ಕಾವ್ಯವೆಂದರೆ ಮಾನ್ಯವಾಗುವುದು ಪ್ರಯಾಸ. ಮೈಸೂರು ವಿದ್ವಾಂಸರಿಗೆ ನಮ್ಮ ಜಿಲ್ಲೆಯ

ಲೇಖಕರ ವಿಷಯವಲ್ಲಿ ಆದರವಿಲ್ಲ' ಎಂದೂ ಇವರಿಗೆ ಎನ್ನಿಸಿತ್ತು. ಈ ಕಾರಣಗಳಿಂದ ಇವರು ತಮ್ಮ ಹೆಸರಿನಲ್ಲಿ ಕಾವ್ಯ ಪ್ರಕಟಿಸಲು ಹಿಂದೆಗೆಯುತ್ತಿದ್ದರು.

ಆದರೆ, ಅಭ್ಯಾಸಕ್ಕಾಗಿ ಬರೆದ ಅದ್ಭುತ ರಾಮಾಯಣವನ್ನು ಮುಳಲಿ ಸುಬ್ಬರಾಯರು ಮೆಚ್ಚಿಕೊಂಡು, ಅದನ್ನು ಪ್ರಕಟಿಸುವ ಸುಲಭೋಪಾಯವನ್ನು ಸೂಚಿಸಿದರು. ಅವರ ಸೂಚನೆಯಂತೆ ಅದನ್ನು ನಂದಳಿಕೆಯವರು ಪ್ರಾಚೀನಕಾವ್ಯವೆಂಬ ಮುಸುಕಿನಲ್ಲಿ ಮೈಸೂರಿನ 'ಕರ್ಣಾಟಕ ಕಾವ್ಯ ಮಂಜರಿ'ಗೆ ಕಳಿಸಿದರು. ಮೈಸೂರಿನವರು ಅದರ ಪ್ರೌಢಿಮೆಗೆ ಮೆಚ್ಚಿ, ಇವರ ಮಾತನ್ನೆ ನಂಬಿ, ಸಿಪ್ಪೆ ಕೂಡ ಸುಲಿಯದೆ ಅದನ್ನು ನುಂಗಿಬಿಟ್ಟರು. ಅದನ್ನು ಅವರು ನುಂಗಿದುದು ತಡ, ನಂದಳಿಕೆಯವರು ಇನ್ನೊಂದು ಹಣ್ಣು ಸಿದ್ಧಪಡಿಸಿದರು. ಅದನ್ನು ಮಹಾಲಕ್ಷ್ಮಿಯೆಂಬ ಹೆಸರಿನಡಿ ನೀಡಿದರು. ಮೈಸೂರು ಅದನ್ನೂ ನಂಬಿ ನುಂಗಿತು. ಪುನಃ ಅದನ್ನು ನುಂಗಿದುದು ತಡ, ಸಿದ್ಧವಾಯಿತು ಇನ್ನೊಂದು. ಅದೆ ಇವರ ಕಡೆಯ ಕೃತಿ, ರಾಮಾಶ್ವಮೇಧ. ಅದು ಅಚ್ಚಿನಲ್ಲಿ ಕಣ್ಣು ತೆರೆಯುವ ಮೊದಲೆ ಇವರು ಕಣ್ಣುಮುಚ್ಚಿದರೂ ಇವರು ಇನ್ನೂ ಇರುವಾಗಲೆ ಅದನ್ನು ಮೈಸೂರು ಪುರಾತನಕೃತಿ ಯೆಂದು ಸ್ವೀಕರಿಸಿತ್ತು. ಹೀಗೆ ಒಂದಲ್ಲ, ಎರಡಲ್ಲ, ಮೂರು ಸಲ ನವೀನನೊಬ್ಬನ ಕೃತಿ ಪ್ರಾಚೀನವೆಂದು ಮಾನ್ಯವಾದುದನ್ನೂ ಮೈಸೂರು ವಿದ್ವಾಂಸರು ಕನ್ನಡ ಜಿಲ್ಲೆಯ ಲೇಖಕನೊಬ್ಬನನ್ನು ಆ ಜಿಲ್ಲೆಯವನೆಂದು ತಿಳಿಯದೆಯೆ ಪ್ರಾಚೀನರ ಪಟ್ಟಕ್ಕೆ ಸೇರಿಸಿದುದನ್ನೂ ಕಂಡು, ಮುದ್ದಣ–ಮನೋರಮಾ ಸೃಷ್ಟಿಕರ್ತರಾದ ನಂದಳಿಕೆಯವರಿಗೆ ಎಷ್ಟು ರಸನಗೆ ಉಕ್ಕಿರಬೇಡ! ಇಂತಹ ನಗೆಗಾರರನ್ನು 'ಸುಳ್ಳು ತಟವಟ ಹೇಳಿ ಮೋಸಮಾಡಿದನೆಂದು' ಆಕ್ಷೇಪಿಸುವುದು ಸಲ್ಲದು. ನಗೆಯ ನಾನಾ ನಿಲುವುಗಳನ್ನು ಬಲ್ಲವರು ಹೀಗೆನ್ನರು. ನೂತನ ಕವಿತೆ ಸ್ವೀಕರಣೀಯವಾಗದಿರಲು ಅದರ ನೂತನತ್ವವೊಂದೇ ಕುಂದೆಂದು ಣಿಸುವ ನಾಡಿಗರಿಗೆ ಏನು ಮಾಡಬೇಕು? ನೂತನವಾದುದಕ್ಕೇ

ಪ್ರಾಚೀನತೆಯ ಪಟ್ಟಿಹಚ್ಚಿ. ಅಂತೆಯೇ ಅವರು ಅದಕ್ಕೆ ಪೂಜೆಮಾಡುವ ಮೌಢ್ಯವನ್ನು ಕಂಡು ಕನಿಕರಿಸಿ ನಗಬೇಕು ತಾನೆ!

ಹೋಸ ಸಂಗ್ ಮಾಡುತ ಬೇಡತದ್ ಜಗತ್ತು.
ಅದಕೇನೆ ಘುಡದೀಸಿ ಪಟ್ಟಾಗ್ ಇಕ್ಕತ್ತು.
ಈ ಮಾದ್ರಿ ಹೋಸ
ಜಗದಣ್ಣ ದೋಸ.

ನಂದಳಿಕೆಯವರ ರಾಮಾಶ್ವಮೇಧದಲ್ಲಿ ಕಂಡುಬರುವುದು ಇವರ ಹಾಸ್ಯಪ್ರವೃತ್ತಿ ಮಾತ್ರವಲ್ಲ, ಹಾಸ್ಯವನ್ನೇ ಹಿರಿದಾಗಿ ಬಳಸ ಬೇಕೆಂದು ಇವರ ಬಯಕೆಯಿದ್ದಂತೆಯೂ ಕಂಡುಬರುವುದು. ರಾಮಾಶ್ವ ಮೇಧದ ನಗುವಿನ ಹೊನಲಿನಲ್ಲಿ 'ಕಾಮದೇವ ರತಿದೇವಿ' ಸಲ್ಲಾಪವೂ 'ಭವತಿ ಭಿಕ್ಷಾಂ ದೇಹಿ' ಮಂತ್ರೋಪದೇಶವೂ ಎರಡು ಮಡುಗಳು, ಬೇಕೆಂದೇ ತಯಾರಾದವು. ಇವುಗಳಲ್ಲಿ ಮೊದಲನೆಯದು ಅಶ್ವ ಮೇಧದ ಕತೆಗೆ ಏನೂ ಸಂಬಂಧವಿಲ್ಲದೆ ಹುಟ್ಟಿಬಂದುದು; ಮುದ್ದಣನು ಪ್ರಾಸಂಗಿಕವಾಗಿ 'ದೇವೀ' ಎಂದುದರಿಂದ ಹುಟ್ಟಿ ಬೆಳೆದುದು. ಈ ಶುದ್ಧ ಸರಸ ಸಲ್ಲಾಪ ಬೇರೇನೂ ಉದ್ದೇಶವಿಲ್ಲದೆ ಬಂದಂತೆ ಕಂಡರೂ ಕೊನೆಯ ಕೊಂಡಿ ಅದನ್ನು ಸ್ಪಷ್ಟಗೊಳಿಸುತ್ತದೆ. 'ಇಂತು ವ್ಯರ್ಥಾ ಳಾಪದಿಂ ಪೊಟ್ತಂ ಕಳೆವೆಮ್ಮಂ ಲೋಗರ್ ಪಳಿಯರೆ? ಪೋ ಮಾಣ್, ಶ್ರೀ ರಾಮಕಥೆಯನಿನ್ನೊರೆವೆಂ, ಕೇಳ್' ಎಂಬ ಮಾತಿ ನಲ್ಲಿ ಮುದ್ದಣ, ಪುರಾಣವಲ್ಲವೆಂಬ ಕಾರಣದಿಂದ ರಸವನ್ನು ದೂರ ಮಾಡಿ ಪುರಾಣವೆಂದೊಡನೆ ಕಸವಾದರೂ ಸರಿಯೆ ಅದನ್ನು ಕೊಳ್ಳು ವವರನ್ನು ನೋಡಿ ನಗುತ್ತಿದ್ದಾನೆ. ಎರಡನೆಯ ಹಾಸ್ಯ ರಸಸ್ಥಾನ ವಾದರೋ ಕಥೆಗೆ ಅಂಟಿಕೊಂಡೆ ಬರುತ್ತದೆ. ಇದಕ್ಕಾದರೂ ಕೊಂಡಿಯಿಲ್ಲದೆ ಇಲ್ಲ. ಮುದ್ದಣನ ಮಂತ್ರೋಪದೇಶವನ್ನು ಕೇಳಿದ ಮನೋರಮೆ 'ನಿನ್ನ ಸೊಗಸನೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾ ಡುವರಲ್ಲದೆ ಬಲ್ಲರೇನೊಲ್ಲರೆ?' ಎನ್ನುತ್ತಾಳೆ. ಬಲ್ಲವರು ಒಲ್ಲೆ ನೆಂದರೂ ಇದು ಅವರನ್ನು ಒಲಿಸಿಕೊಂಡೇ ತೀರುವುದೆಂದು ನಂದಳಿಕೆ

ಯವರ ನಂಬಿಕೆ ಇಲ್ಲಿ ನಗುತ್ತಿದೆ. ಮಾತ್ರವಲ್ಲ, 'ನೀಂ ಕಬ್ಬಿಗನೊ? ಸಬ್ಬವಕಾಱನೊ?' ಎನ್ನುತ್ತಾಳೆ ಮನೋರಮೆ. 'ಪರಿಹಾಸ ಮಾಡುವ ಸಬ್ಬವಕಾರನು ಕಬ್ಬಿಗನಾಗಲಾರನೇನು? ಶೃಂಗಾರ, ಶಾಂತ, ಕರುಣ, ವೀರಗಳು ಮಾತ್ರ ಕವಿಯ ಕ್ಷೇತ್ರವೇನು?' ಎಂದು ಸವಾಲು ಹಾಕುತ್ತಿದೆ ಇಲ್ಲಿ ನಂದಳಿಕೆಯವರ ನಗು. ಇದೆ ಸಂದರ್ಭದಲ್ಲಿ ಮುದ್ದಣ, ತನ್ನಂತಹ ಕಬ್ಬಿಗರು ಕೂಡ ಈ 'ಭವತಿ ಭಿಕ್ಷಾಂದೇಹಿ' ಎಂಬ ಸಪ್ತಾಕ್ಷರೀ ಮಂತ್ರದಿಂದ ಸಿದ್ಧಿಗಾಣುವರೆಂದು ಮುಗುಳು ನಗುತ್ತ ಹೇಳುವುದನ್ನು ಓದಿದರೆ, ಇದನ್ನು ಬರೆದ ನಂದಳಿಕೆಯವರ ೧೦–೧೫–೨೦ ರೂಪಾಯಿ ಸಂಬಳದ ಕತೆ ತಿಳಿದ ಯಾರ ಕಣ್ಣು ತೇವವಾಗಲಿಕ್ಕಿಲ್ಲ! 'ದುಕ್ಕ ಇದ್ರೆ ಇತ್ತಂತೇಳು. ಸಂತೋಸಾನ ಗಳ್ಸು' ಎಂದು ನಗುತ್ತ ಬದುಕಿದ ಗಂಡುಜೀವ ಇದು. ಆದರೆ, ಅಡಿಯಲ್ಲಿ ಏನೂ ಅನ್ಯ ಉದ್ದೇಶವಿರದ ಸ್ವಚ್ಛ ಸರಸಕ್ಕೆ ಒಂದು ಸಣ್ಣ ಮಾದರಿಯೂ ಇದೆ, 'ಹನೂಮತ್ಪರಾಜಯ'ದ ಪ್ರಾರಂಭದಲ್ಲಿ.

ಇಂತಹ ಸಿಗಿನಿಗಿ ನಗುವಿನ ರಾಮಾಶ್ವಮೇಧ ನಂದಳಿಕೆಯವರ ಒಂದು ಪ್ರಯೋಗ ಮಾತ್ರ. ಇದು ಇವರ ಹಿಂದಿನೆರಡು ಕೃತಿಗಳಿಂದ ತೀರ ಭಿನ್ನವಾದುದು. ಇದಕ್ಕೆ ಜನರಿಂದ ಏನು ಅಭಿಪ್ರಾಯ ಬರು ವುದೊ ನೋಡಿ ಮುಂದೆ ಇವರು ಅದಕ್ಕೆ ತಕ್ಕಂತೆ ತೊಡಗ ಬೇಕೆಂದಿದ್ದಂತೆ ಕಾಣುತ್ತದೆ. ರಾಮಾಶ್ವಮೇಧದಲ್ಲಿ ಪ್ರಸ್ತಾಪಿಸಿರುವ 'ಉಡುಗೊಱೆ'ಯ ಮಾತು ಕೇವಲ ಸತಿಪತಿಯರ ಸಲ್ಲಾಪದಂತೆ ಕಂಡರೂ ಅದರಲ್ಲಿ ಇನ್ನೂ ಹೆಚ್ಚಿನ ಅರ್ಥವಿದೆಯೆಂದು ತೋರುತ್ತದೆ. ಪುಸ್ತಕದ ಕೊನೆ ನೋಡಿ. ಮನೋರಮೆಯಾದರೂ ಮುದ್ದಣನಿಗೆ ಉಡುಗೊರೆ ಕೊಟ್ಟಿಲ್ಲ. 'ಅಂತಪ್ಪೊಡಿಂತಿದು' ಎಂದು ಏನೋ ಕೊಡುವುದಕ್ಕೆ ತೊಡಗಿ, ಅಷ್ಟರಲ್ಲೆ ತಡೆದು 'ನಿನ್ನೀ ಕಬ್ಬಮನೋ ದುವ ಜಾಣರೀವಗೆಯುಡುಗೊಱೆಯನೀಯೆಂಬರಾವಗೆಯ ಮೆಚ್ಚ ನೀವೆಂ' ಎಂದಿದ್ದಾಳೆ. ಮುದ್ದಣನಾದರೂ 'ಅಂತಾನುಮಕ್ಕೆ. ಪೋಪಂ' ಎಂದು, ಉಡುಗೊರೆ ತಡೆದುಬರಲೆಂದೇ ಒಪ್ಪಿದ್ದಾನೆ.

ಆದರೆ, ತನ್ನ ಕಾವ್ಯವನ್ನು ಓದುವ ಜಾಣರು ಯಾವ ಬಗೆಯ ಉಡುಗೊರೆ ಕೊಡುವರೊ ಕೊಡಿಸುವರೊ ಎಂಬುದನ್ನು ಕಾಣುವ ಮುನ್ನ ಕವಿಯನ್ನು ಕಾಲ ಒಯ್ದು. ನಂವಳಿಕೆಯವರು ಮುಂದೆ ಏನೇನು ಬರೆಯಬೇಕೆಂಮು ಕನಸು ಕಾಣುತ್ತಿದ್ದರೊ ! ಆ ಕನಸನ್ನು ನನಸಾಗಿ ಪಡೆಯುವ ಭಾಗ್ಯ ಕನ್ನಡ ಕೇಳಿಬರಲಿಲ್ಲ.

# ೨. ರತ್ನಾಕರ

' ಕವಿವಲ್ಲಭ 'ನೆನಿಸಿದ ನಂದಳಿಕೆ ಲಕ್ಷ್ಮೀನಾರಣಪ್ಪನವರು ಬಂದ ಆದೇ ಕನ್ನಡ ಜಿಲ್ಲೆಯಿಂದ ಅವರಿಗಿಂತ ಮೂರು ಶತಮಾನಗಳ ಹಿಂದೆ ಬಂದವನು ರತ್ನಾಕರ, ' ಭರತೇಶ ವೈಭವ 'ದ ಕರ್ತೃ. ಭರತೇಶ ವೈಭವದಲ್ಲಿ ಕವಿಯ ಆಶಯ ಆಗಮ ಅಧ್ಯಾತ್ಮಗಳನ್ನು ಅಳವಡಿಸುವುದು, ಭೋಗ ಯೋಗ ಶೃಂಗಾರಗಳನ್ನು ಚಿತ್ರಿಸುವುದು. ಇಷ್ಟರಿಂದಲೆ ಕವಿ ನಮಗೆ ಪ್ರಿಯನಾಗಲ್ಲ. ' ಪೆಱವುಳಿ ಉಳ್ಳುವು ಇಲ್ಲಿ ಒಳವು ; ಇಲ್ಲಿ ಉಳ್ಳುವಂ ಪೆಱವುಳಿ ಕಾಣಲಾಗದು ' ಎನ್ನುವಂತೆ ರನ್ನ ತನ್ನ ಅಜಿತ ಪುರಾಣದಲ್ಲಿ ಆಗಮಭಾಷೆ ಅಳವಡಿಸಿದ್ದಾನೆ. ರತ್ನಾಕರನಲ್ಲಿ ಕಾಣುವ ಶೃಂಗಾರದ ಅವಸ್ಥೆಗಳನ್ನು ' ಭೋಗಿ ಯೋಗಿಗಳೆದೆ ಜುಮ್ಮೆಂದಟ್ಟು'ವಂತೆ ನೇಮಿಚಂದ್ರ ಷಡಕ್ಷರಿಗಳೂ ಹೇಳಿದ್ದಾರೆ. ರತ್ನಾಕರನಲ್ಲಾದರೂ ನಾವು ಮೇಲಿಂದ ಮೇಲೆ ಕಾಣುವುದು ಸಂಭೋಗ ಶೃಂಗಾರ, ವಿಪ್ರಲಂಭವಲ್ಲ. ರತ್ನಾಕರ ನಮಗೆ ಪ್ರಿಯನಾಗುವುದು ಈ ಇತರರಲ್ಲೂ ಕಂಡುಬರುವ ಕೆಲವು ಗುಣಗಳಿಗಾಗಿಯಲ್ಲ, ಅದುವರೆಗಿನ ಇತರರಾರಲ್ಲೂ ಇಷ್ಟುಮಟ್ಟಿಗೆ ಕಂಡುಬರದ ಒಂದು ವಿಶೇಷ ಗುಣಕ್ಕಾಗಿ; ಆತನ ಶೃಂಗಾರಕ್ಕೆ ಸಹ-ಜವಾಗಿ ಸಹ-ಚರವಾಗಿ ಸಹ-ಕರವಾಗಿ ಬರುವ ಅಪೂರ್ವಹಾಸ್ಯದ ಹರವಿಗಾಗಿ. ರತ್ನಾಕರನ ಗುಣ ಏನೆಂದು ತಿಳಿಯಬೇಕಾದರೆ ಸಂಸ್ಕೃತ ಪೂರ್ವಪುರಾಣವನ್ನೂ ಕನ್ನಡ ಆದಿಪುರಾಣವನ್ನೂ ಓದಬೇಕು, ಇವನ ಭರತೇಶ ವೈಭವವನ್ನೂ ಓದಬೇಕು. ಪೂರ್ವಪುರಾಣ ಆದಿಪುರಾಣಗಳ ಭರತ ಸಮಸ್ತ ರಾಜರನ್ನೂ ಅಂಜಿಸಿ ಕಪ್ಪ ಕೈಕೊಂಡ ಚಕ್ರವರ್ತಿ; ಹುಂಡಾವಸರ್ಪಿಣೀ ವಿಳಸನಕ್ಕೆ ಸಿಕ್ಕಿ ಚಿಕ್ಕ ತಮ್ಮನನ್ನೂ ಯುದ್ಧಕ್ಕೆ ಕರೆದು, ' ಕ್ರಮದಿಂ **ಮೆಯ್ಯೊಣರ್ದು**, ಆಱದೆ, ಅಕ್ರಮದೆ ಮಾತಂ ಬಿಟ್ಟು, ತನ್ನ ಇಟ್ಟ **ಚಕ್ರಂ** ಅದುಂ ನಿಃಪ್ರಭಮಾಗೆ ಸಿಗ್ಗನೊಳಕೊಂಡು ' ಬುದ್ಧಿಕಲಿತ **ಉದ್ಧತ;** ಆದಿಜಿನೇಶ್ವರನ ಧರ್ಮ ಲೋಕಕ್ಕೆ ದೊರಕಲು ಕಾರಣನಾದ

ಆದಿತೀರ್ಥಕರಕ್ಷತ್ರಿಯ ; ತನ್ನ ಗುರುಗುಮ್ಮನೆಯ ಗಾಂಭೀರ್ಯದಿಂದ ಜಗತ್ತನ್ನು ಸ್ತಂಭಿಸತಕ್ಕವನು. ಆದರೆ ರತ್ನಾಕರನ ಭರತೇಶನೋ ಸಮಸ್ತ ರಾಜರನ್ನು ಬಗ್ಗಿಸಿ ಕಪ್ಪ ಕೈಕೊಂಡನಾದರೂ, ಅದೇ ಹಿಂದಿನ ಕಾವ್ಯಗಳಲ್ಲಿನ ಅದೇ ಗಾಂಭೀರ್ಯವುಳ್ಳವನಾದರೂ, ತಾವು ಅವನಿಗೆ ಸೋತುದೆ ಒಂದು ಭಾಗ್ಯವೆಂಬ ಚಿತ್ತವೃತ್ತಿಯನ್ನು ಸೋತವರಲ್ಲಿ ಉಂಟು ಮಾಡುವ ಸರಸಿ. ಇಲ್ಲಿಯ ಭರತೇಶ ಅಂತಃಪುರದವರಿಗೆ ರಮಣ, ಮಕ್ಕಳಿಗೆ ಪ್ರೀತಿಯ ತಂದೆ, ದಾಸದಾಸಿಯರಿಗೆ ವಿಶ್ವಾಸದ ಸ್ವಾಮಿ, ತಮ್ಮಂದಿರಿಗೂ ತಂಗಿಯರಿಗೂ ಹಿರಿಯಣ್ಣ, ಬಾಹುಬಲಿಗಂತೂ ಸವಿ ಮಾತಿನಿಂದಲೆ ಸೋಲಿಸಿದ ಧರ್ಮಗುರು, ಮೈದುನರಿಗೆ ಭಾವ, ತಾಯಿಗೆ ಮಗ, ಅತ್ತೆಗೆ ಅಳಿಯ, ಕವಿ ನಟ ನರ್ತಕ ಗಾಯಕ ಗಣಕ್ಕೆ ಪೋಷಕ, ಮುನಿಗಳ ಆರಾಧಕ, ಹಂಸನಾಥನ ಪಾದಸೇವಕ. ಹೀಗೆ ಅನೇಕಾಂತ ಮೂರ್ತಿವೆತ್ತಂತೆ ಅನೇಕರೂಪ. ಇದು ರತ್ನಾಕರನ ಸೃಷ್ಟಿ.

ಇಂತಹ ರತ್ನಾಕರಕೃತ ಭರತೇಶ್ವರ ಯಾರ ಪಾಲಿಗೆ ಏನೇ ಆಗಿರಲಿ, ನಮ್ಮ ಪಾಲಿಗಂತೂ ಆತನ ಅಂತಃಪುರದ ದಾದಿಯಾದ ಪಂಡಿತೆ ಹೇಳಿದಂತೆ, 'ನಗೆಕಾರ.' ಅವನ ಅರಸಿಯರಲ್ಲಿ ಒಬ್ಬಳಾದ ಕುಸುಮಾಜಿ ಹಾಡಿದಂತೆ

ನಗೆಯ ಚೆಲ್ವಿಕೆಯು ಮೋಹನಕಾಂತಿರಸವನು । ಮೊಗವೆತ್ತಲಲೆದುಪತ್ತತ್ತ
ಮೊಗೆದು ಮೊಗೆದು ಚೆಲ್ಲುವಂತೆ ರಾಯನ ಮುದ್ದು । ಮೊಗವೊಪ್ಪುತಿಹುದು....

ಭರತೇಶ ವೈಭವದಲ್ಲಿ ಸುಮ್ಮನೆ ಹಾಳೆ ತಿರುಗಿಸುತ್ತ ಹೋದರೂ ಸಾಕು. ಭರತ 'ವಿನೋದಾರ್ಥಿ,' 'ವಿನೋದಿಗಳರಸ,' 'ಆತ್ಮ ವಿನೋದಿ'; ಇಲ್ಲಿ 'ನಸುನಗೆ ಮೊಗದೊಳು,' ಅಲ್ಲಿ 'ಅರಸನಾನಂದಿಸು ತಿರ್ದನೆದೆಯೊಳು'; ಇತ್ತ 'ಎದೆಯೊಳಿನಿಸು ನಗು,' ಅತ್ತ 'ದರಹಾಸ ದಿಂದ ನುಡಿವನು'; ಒಮ್ಮೆ 'ಮಂದಸ್ಮಿತ ಮುಖನಾಗಿ ರಾಜೇಂದ್ರ ನಾನಂದಿಸುತಿದ್ದ,' ಇನ್ನೊಮ್ಮೆ 'ಎಳೆನಗೆ ಮಿನುಗೆ ನುಡಿದನೊಲ್ದು', ಮತ್ತೊಮ್ಮೆ 'ಅರಸುಬ್ಬಿ ನಗುವಾ'; ಹೀಗೆಯೆ ಹೆಜ್ಜೆ ಹೆಜ್ಜೆಗೂ. ಭರತ ಒಂದೆರಡು ಸಲ 'ಗಹಗಹಿಸುತ' ನಕ್ಕುದುಂಟು; ಒಂದು ಸಲ 'ತುಚ್ಛಗಾಣಿಸಿ ನಕ್ಕು ನುಡಿ'ದದ್ದೂ ಉಂಟು. ಭರತನಂತೆಯೆ

ಅವನ ಬಳಿಯವರಿಗು ಸಹ. ಅವರಿಗೆ ಸದಾ ‘ ನಸುನಗೆ ಮೊಗದೊಳು ’. ‘ ವಳವೇರುವುದು ನಗೆ ’ ಅವರಿಗೆ ಯಾವಾಗಲೂ. ಅವರು ‘ ಚೆನ್ನಾಗಿ ನಗುತ ನುಡಿವರು ’, ‘ ಅಟ್ಟಹಾಸವ ಮಾಡುತೊಬ್ಬರೊಬ್ಬರ ಮೈಯ ತಟ್ಟುತ ತೋರಿ ನುಡಿವರು ’. ಭರತನ ಅರಸಿಯರಲ್ಲಿ ಒಬ್ಬಳಾದ ಕುಸುಮಾಜಿ ಒಂದು ಸಲ

ಬಿಸಿನಗೆಯಾವುದು ತಣ್ಣಗೆಯಾವುದು । ಮುಸಿನಗೆ ಮುಗುಳುನಗೆಗಳು
ರಸನಗೆ ಯೆಳೆನಗೆಯೆಂಬವೆಂತಿಹುವೆಂದು । ನಸುನಗುತ...............

ಹಾಡಿದಳಂತೆ. ರತ್ನಾಕರನ ಭರತೇಶನನ್ನು ನೋಡಿದರೆ, ಈ ನಗೆಯ ನಾನಾ ರೂಪಗಳನ್ನು ಆಕೆ ಈತನಿಂದಲೆ ಕಲಿತಳೊ ಎನ್ನಿಸುತ್ತದೆ.

ಭರತೇಶನ ಸಹಜಸ್ಮಿತಕ್ಕೆ ವಿರಾಮ ಸಿಕ್ಕುತ್ತಿದ್ದುದು ಅವನ ಆಸ್ಥಾನದಲ್ಲಿ ಮಾತ್ರ. ಅಲ್ಲಿ ಮಾತ್ರ ‘ ಏಕೆ ನುಡಿಯನೊ ಇನ್ನೊಮ್ಮೆ ಎಂಬಂತೊಂದು ತೂಕದೊಳೆಸೆವನಾ ರಾಯ ’. ಅಲ್ಲಿ ಮಾತ್ರ ‘ ಕಿಂಮೆಸಬಾರದು ನಗಬಾರದತ್ತಿತ್ತ ನೆಮ್ಮಬಾರದು ಸಭೆಯೊಳಗೆ ’. ಅದೊಂದು ಸಂದರ್ಭ ಬಿಟ್ಟರೆ ಉಳಿದೆಲ್ಲ ಕಡೆ, ಉಳಿದೆಲ್ಲ ಹೊತ್ತು, ಉಳಿದೆಲ್ಲರೊಡನೆ ಸಹಜವಾದ ಸರಸವಾದ ಉಚಿತವಾದ ಮಿತವಾದ ನಗು. ಭರತೇಶ್ವರ ‘ ಸರಸವನಾಡ ; ಆಡಿದನಾದರೆ ಅದರಲ್ಲಿ ವಿರಸವ ಮೊಳೆದೋರಲೀಸ’.

ಮೋಹನಶೃಂಗಾರ ಮೋಕ್ಷಶೃಂಗಾರವೆಂ । ಡಾ ಹೇಮವರ್ಣಗುಂಟೆರಡು
ಮೋಹನಶೃಂಗಾರ ಸತಿಯರ ಮೆಚ್ಚು ನಿ । ರ್ಮೋಹಾಂಗ ಮೋಕ್ಷಶೃಂಗಾರಾ

‘ ಶೃಂಗಾರ ಸಹಕರೋ ಹಾಸ್ಯಃ ’ ಎಂಬ ಸೂತ್ರ ಭರತನ ಮೋಕ್ಷ ಶೃಂಗಾರವನ್ನೂ ಬಿಟ್ಟುದಲ್ಲ. ಆತ ಜಿನತತ್ತ್ವೋಪದೇಶಕ್ಕೆ ಕಿವಿಗೊಟ್ಟಾಗ ಕೂಡ ‘ ಎಡೆಗೊಮ್ಮೆ ನಕ್ಕರೆ ಧರ್ಮಸೋಂಕಿನ ನಗೆ ’. ಕಡೆಗೆ ಕೇವಲಜ್ಞಾನ ಪಡೆದು ಅಮೃತ ಶ್ರೀಕಾಂತೆ ತನ್ನನ್ನು ವರಿಸಬಂದಾಗಲೂ ಭರತ ‘ ಅದಕೂ ನಗುತ ನೋಡುತಿರ್ದ ’ನಂತೆ ! ಹೀಗೆ, ರತ್ನಾಕರನ ಭರತೇಶ ವೈಭವ ಮೊದಲಿನಿಂದ ಕಡೆಯವರೆಗೂ ಹಲವು ವಿಧದ

ನಗುವಿನ ರತ್ನಾಕರ. ಭರತೇಶನ ಮನೆಯವರು ಹಿಂದೆ ಎಂದೂ ಕಾಣದ ಕಡಲನ್ನು ಒಂದು ದಿನ ಕಂಡರಂತೆ. ಅಲ್ಲಿ ಅವರು

ಅಟ್ಟುವ ತೆರೆಯು ಮುಂಪೋಡುವ ತೆರೆಯು ಪೆ । ರ್ಚಟ್ಟಿದಂತೇಳ್ವ ತೆರೆಗಳಿ೦
ತುಂತುರು ತೆರೆ ನೊರೆ ಸುಳಿ ಘುಳುಘುಳುರವ । ತೂಂತಿಟ್ಟು ಪೊಳೆವ ವಾರಿಧಿಯಾ

ಕಂಡರಂತೆ. ಅವರು ಕಂಡ ಕಡಲಿನ ಈ ವರ್ಣನೆಯನ್ನು ರತ್ನಾಕರನಲ್ಲಿ ಕಾಣುವ ನಗುವಿಗೆ ಅನ್ವಯಿಸಬಹುದು. ಈ ರತ್ನಾಕರದ ಪೆರ್ಚಟ್ಟಿದಂಥ ತೆರೆಗಳಿಗೆ ಬರುವ ಮೊದಲು ತುಂತುರು, ನೊರೆ, ಸುಳಿ, ಘುಳುಘುಳು ರವಗಳನ್ನು ನೋಡೋಣ. ಕಡಲನ್ನು ಕಾಣುವುದಕ್ಕೆ ಕಂಡದ್ದೆ ಕ್ರಮ. ಇಲ್ಲಿಯೂ ಹಾಗೆಯೆ.

ಒಂದು ದಿನ ಭರತ ಉಪ್ಪರಿಗೆಯಲ್ಲಿ ಕುಳಿತು ಅರಸಿಯರನ್ನು ಕಾಣಬಯಸಿದ. ಅವರೆಲ್ಲ ಲೀಲೆಯಿಂದ ಸಿಂಗರಿಸಿಕೊಂಡು ಕೈಗಾಣಿಕೆ ಹಿಡಿದು ಮೇಲೇರಿದರು.

ನೋಡಿ ಬಾ ತಂಗಿ ಯೆಚ್ಚರಿಕೆ ಯಕ್ಕಾಜಿ ಕೈ । ಸೀಡಕ್ಕ ಕೋ ಹಿಡಿ ತಾಯಿ
ಓಡದಿರಕ್ಕ ಬಾ ಬಾ ತಂಗಿಯೆಂದು ಮಾ । ತಾಡುತೇರಿದರೊಲವಿನೊಳು

ಹರಿವುತಿದ್ದಪಳಿಗೆ ಹರಿಹರಿ ಮುಂದೆ ನಿ । ನ್ನ ರಸನೀವನು ಪೊಡ್ಡ ಮೆಚ್ಚು
ಬರಲಾರದವರೇನನಾಡರೆನುತ ತಾವು । ಸರಸವಾಡುತ ಪತ್ತುತಿಪರು

ತವಕಿಸಿ ನಡೆನಡೆಯೆನುತಿಪ್ಪಳಿವಳೆಷ್ಟು । ದಿವಸದಿಂ ಕಾಣಳೊ ಪತಿಯಾ
ನಿವಗೆ ಹಿತವ ಪೇಳ್ವುದೆನ್ನದು ತಪ್ಪು ಪೌ । ನವ ಮಾಳ್ಪೆನೆನುತೇರುತಿಹಳು.

ಸಾಕು ನಿಮ್ಮುಪಚಾರ ತಾವೇನು ಬರಲಾರ । ರಾಕೆಯಿಂ ಮುಂದೆ ನಡೆದರೆ
ಈಕೆ ಗಂಡನ ಕಾಣಹರಿವಳೆಂದಪರೆಂಬ । ವಾಕಿಗಳುಕಿ ಹಿಂದೆ ಬಹೆನು

ಮೌನವೀಕೆಗೆ ತನ್ನ ಗಂಡನಂತಾತ್ಮನ । ಜಾಸಿಸುತ್ತೈದುವ ಪರಿಯೊ
ಏನೆಂದು ತಿಳಿಯಬಾರದು ಹೇಳು ನಿನಗೆ ಸು । ಧ್ಯಾನವ ಕಲಿಸಿದನಾರೆ

ಧ್ಯಾನಗೀನವ ನೀವು ನಿಮ್ಮರಸನು ಬಲ್ಲಿ । ರಾನೇನ ಬಲ್ಲೆನಾ ಗುಸುಟಾ
ಈ ನಿಮ್ಮ ಸರಸಸಲ್ಲಾಪಕೆ ಮನದಲ್ಲಿ । ಆನಂದಿಸುತ ಬಂದೆನಕ್ಕಾ

ಹಿಂದುಳಿದರೆ ಮುಂದೆ ನಡೆದರೆ ಸುಮ್ಮನೆ । ಬಂದರೆ ಮಾತನಾಡಿದರೆ
ಒಂದೊಂದ ಕಲ್ಪಿಸುವಿರಿ ನಿಮ್ಮನುರೆ ಗೆಲು । ವಂದವನಾ ಚಕ್ರಿ ಬಲ್ಲ

ಹೀಗೆ ವಿನೋದ ವಿನಯದಿಂದ ಅವರೆಲ್ಲ ಅರಸನ ಬಳಿಗೆ ನಡೆದು ನಳಿತೋಳ ನೀಡಿ ಕಾಣಿಕೆ ಕೊಟ್ಟು ಕೈಮುಗಿದು ನಿಂದರು. ಪೊಂಬಣ್ಣಮೈಯಿನೊಬ್ಬಳು ಪೊಸ ನಿಂಬೆಹಣ್ಣು ಕೊಟ್ಟಳು. ನೀಲಾಂಗಿಯೊಬ್ಬಳು ನೀಲಾಂಬುಜ ತಂದಳು. ಕೆಂಪಿನೊಬ್ಬಳು ಸಂಪಿಗೆ ನೀಡಿದಳು. ಕರಿಯುಳೊಬ್ಬಳು ಸುರಗಿಯ ಮಾಲೆಯಿತ್ತಳು. ಬಟ್ಟಜವ್ವನೆಯೊಬ್ಬಳು ಬೆಟ್ಟದಾವರೆಯಿತ್ತಳು. ಆಗ ಅವರ ನಡುವೆ

ಮೈಯೊಡ್ಡಿ ಸಂಮುಖದೊಳು ನಿಲ್ಲದೆಲ್ಲರ | ಮೈಯ ಮರೆಗೆ ಸಾರುವವಳಾ
ಕೈಯ ಹಿಡಿದು ಕರೆತಂದೊರ್ವಳರಸಗೆ | ಕೈಯ ಕಾಣ್ಕೆಯ ಕೊಡಿಸಿದಳು

ಅಂಜುತಂಜುತ ಬಾಳೆ ಬಂದೊರ್ವಳರಸಗೆ | ಕೆಂಜಾಜಿ ಸರಗೊಡುವಾಗ
ಕೆಂಜಾಜಿ ಜಗುಳಿತು ಕಾಣಿಕೆಯುಲ್ಲ ಪು | ಷ್ಪಾಂಜಲಿಯೆಂದರಾಳಿಯರು

ಎಲ್ಲರ ಮುಂದೊರ್ವ ಮುಗ್ಧೆ ನಾಚುತ ಬಂದು | ಮಲ್ಲಿಗೆ ಸರಗೊಡುವಾಗ
ಮಲ್ಲಿಗೆ ಜಾರಿತು ಜಾರಿದರೇನದೆ | ಮ್ಮಲ್ಲಿಗೆಯೆಂದನು ನೃಪತಿ

ಪಾವರಿಯುರಲನೊರ್ವಳು ಕೊಡುತಿರೆ ಜಾರಿ | ಪಾದದೆಡೆಗೆ ಬಿದ್ದು ದವನ
ಪಾದದಿಂದೊದೆದನು ನೋತು ಕಾಣ್ಕೆರಗಿದ | ಪಾವರಿಯನು ನೂಕುವಂತೆ

ಪರದಾರಸೋದರನೊತ್ತಿಗೆ ಪಾವರಿ | ಬರಬಹುದೇ ಭರತೇಶಾ
ಚರಣದಿಂದೊದೆದುದದಾಂಸ್ತೆಂದು ಪಂಡಿತೆ | ಅರಸನ ನಸುನಗಿಸಿದಳು

ಕಡುಶೀಲವತಿಯೊರ್ವಳು ಸಿನ್ನ ಪೆಂಡಿರು ತಮ್ಮ | ಕದೆಗೊಬ್ಬ ಪಾವರಿ ಬರಲು
ಪಿಡಿತಂದು ನಿನಗೊಪ್ಪಿಸಿದರು ನೀನೊದೆದುದು | ಬೆಡಗಾಯ್ತು ಶೀಲನಿಧಾನಾ

ಮುಂದೆ, ಕಡೆಗಣ್ಣ ಪ್ರಭೆಯುವಳೊಬ್ಬಳು ಒಂದು ಮುಡಿವಾಳದರ್ಭುಲ್ಲಿ, ಭಾವೆಯೊಬ್ಬಳು ಮಾವಿನ ತಳಿರು,—ಹೀಗೇ ಕಾಣ್ಕೆಗೊಡುತ್ತಿರಲು

ಮುತ್ತಿನ ಮಣಿಯನೊರ್ವಳು ತಂದು ನೃಪನ ಕೈ | ಗಿತ್ತು ಕೈಮುಗಿದಳಂತವನು
ಒತ್ತಿನೊಳಿದ್ದ ಪಂಡಿತೆ ಕಂಡು ನುಡಿದಳು | ಮುತ್ತೊಂದು ಬಿನದದ ಮಾತಾ

ವದನ ವದನ ಸೋಂಕಿ ಮುತ್ತಕೊಡುವುದು ಲೋ | ಕದೊಳುಂಟು ಭರತಚಕ್ರೇಶಾ
ಇದು ಚಿತ್ರ ಕರಯುಗ ಸೋಂಕಿ ಮುತ್ತೀವುದೆಂ | ದೆದೆಯೊಳಿನಿಸು ನಗಿಸಿದಳು.

ಇನ್ನೊಂದು ಸಲ ಭರತೇಶ್ವರ ದಿಗ್ವಿಜಯಕ್ಕೆ ಹೊರಟು ಬೀಡು ಬಿಟ್ಟಿರುವಾಗ ದಾದಿಯೊಬ್ಬಳು ಅವನ ಮಗು ಅರ್ಕಕೀರ್ತಿಯನ್ನು ತಂದುಕೊಟ್ಟಳು.

ತೊಡೆಯ ಮೇಲಿಟ್ಟು ಮಗನ ನೋಡಿ ಮುಂಡೆಯ | ತಡವುತ ಮುತ್ತಕೊಡುವನು
ಒದನೆತ್ತಿಕೊಂಡೆದೆತುಂಬಲಪ್ಪುವನು ಬೊ | ಟ್ಟಿಡುವನು ಪಣೆಯೊಳಾ ನೃಪತಿ

ತಂದೆಯ ಕೊರಳನೆಪ್ಪಪ್ಪುವ ಕಿರುಬೆರ | ಳಿಂದ ಕೊರಳ ಮಣಿಗಳನು
ಒಂದೆಂಟು ಪತ್ತೆರಡೆಂದು ತಪ್ಪೆಣಿಸುವ | ನಂದದಕರಸುಬ್ಬಿ ನಗುವಾ

ಮೀಸೆಯ ತಿದ್ದುವ ಗಲ್ಲವ ತಡವಿ ವಿ | ಲಾಸದಿ ನಗುವನಾ ತರಳಾ
ಆ ಸುಕುಮಾರನ ಮೊಳೆವಲ್ಲ ಕಂಡಣ್ಣ | ಲೇಸು ಲೇಸೆಂಬನಾ ತಂದೆ

ಆದಿತೀರ್ಥಂಕರ ಎನ್ನರ್ಕಕೀರ್ತಿಯೆಂ | ದೋದಿಸುವನು ತನ್ನ ಮಗಗೆ
ಆದಿಂಕರನೆಂಬನಾ ಬಾಲನದಕೆ ವಿ | ನೋದದಿ ನಗುವನಾ ರಾಯಾ

ಅಣ್ಣ ಚಿದಂಬರಪುರುಷ ಎನ್ನೆಂದಾಗ | ಬಣ್ಣಿಸಿ ಕಲಿಸಿ ಕೊಡುವನು
ಚಿಣ್ಣ ಚಿಂಬರಪೂಸ ಎಂಬನದಕೆ ಹೊಟ್ಟೆ | ಹುಣ್ಣಾಗೆ ನಗುವನಾ ಚಕ್ರಿ

ಗುರುನಿರಂಜನಸಿದ್ಧ ಎನ್ನಪ್ಪಯೆಂದು ಭೂ | ವರ ತನ್ನ ಮಗನಿಗೋದಿಸುವಾ
ತರಳನದಕೆ ನಿಂಜಸಿದ್ಧಯೆಂಬನು ರಾಯ | ಮುರಿದಪ್ಪಿ ನಗುತ ಚುಂಬಿಸುವಾ

ನೋಡಣ್ಣ ಮುಂದಿದ್ದರಾರೆಂದು ದೊರೆಗಳ | ಕೂಡೆ ತೋರುವನು ಬಾಲಕಗೆ
ನೋಡುತ ಶಿಶು ಹಸ್ತದೊಳು ತೋರದೆದಗಾಲ | ನೀಡಿ ತೋರುವುದು ಭೂಭುಜರಾ

ಪಾದದೂಳಿಗದವರೆಂದು ನಮ್ಮೆಲ್ಲರ | ಪಾದಪದ್ಮದಿ ಸೂಚಿಸಿದನು
ಆದಿಚಕ್ರಿಯ ಸುತಗದು ಜಾತಿ ಸಹಜವೆಂ | ದಾ ದೊಡ್ಡ ದೊರೆಗಳಾಡಿದರು

ಏಕಾಂತಗೈವಂತೆ ತಂದೆಯ ಕಿವಿಯೊತ್ತಿ | ಗಾ ಕುಮಾರಕ ಮೊಗವಿಟ್ಟಾ
ಸಾಕಿನ್ನು ನಮಗೇಕೆ ಸುಪ್ರಭಾಸಿಕೆಯೆಂಬ | ನಾ ಕಾಲವರಿದೊಲ್ದು ಮಂತ್ರಿ

ಅದೆ ಸಮಯದಲ್ಲಿ, ರಾಜರೆಲ್ಲರು ಒಲವಿನಿಂದ ಮಗುವಿಗೆ ಕಾಣಿಕೆ ಯಿಕ್ಕಿದರು. ದೊರೆಯ ಮುಂದೆ ಒಂದು ಚಿನ್ನದ ರಾಶಿಯಾಯ್ತು. ಆಗ ಭರತ

ಕಳುಹಣ್ಣ ನಿನಗೆ ಕಾಣಿಕೆಯಿಕ್ಕಿ ಕೈಮುಗಿ | ದೆಳಸಿ ನಿಂದಿರ್ದರನೆಂದಾ
ತಲೆಯೊಲೆದೊಲೆದು ಕೈಯಾಡಿಸಿ ಕಳುಹಿತಾ | ಯೆಳೆಗೂಸಿಗದು ಜಾತಿಸಹಜ

ಅಂತಲ್ಲವಣ್ಣ ವೀಳೆಯವ ಕೊಟ್ಟೆಲ್ಲರ | ಸಂತೋಷದೊಳು ಕಳುಹೆಂದಾ
ತಾಂ ತೆಗೆದವರ ಮೇಲಲೆಯ ಚೆಲ್ಲಿತು ಶಿಶು | ಮುಂತೆಲ್ಲ ಕುಳಿತರರ್ತಿಯೊಳು

ಈ ರಾಶಿಯೊನ್ನಸಿನ್ನಾಗ್ರೀವವಣ್ಣಯೆಂ | ದಾರಯ್ದನಾ ಪುತ್ರನೊಳಗಾ
ಸಾರೆ ಸಂದಿರ್ದ ಸೇವಕರ ತೋರಿತು ಶಿಶು | ಭೂರಾಜು ವಿಸ್ಮಯಬಟ್ಟ.

ಮತ್ತೊಂದು ಸಲ ಭರತೇಶ ಅರಸಿಯರೊಡನೆಯೂ ಮಕ್ಕಳೊಡನೆಯೂ ಭೋಜನ ಶಾಲೆಗೆ ಬಂದ. ಅಲ್ಲಿ ಭರತನ ತಾಯಿ ಯಶಸ್ವತಿ ಉಯ್ಯಾಲ ಮೇಲೆ ಗದ್ದುಗೆಯಲ್ಲಿದ್ದಳು. ತಾಯನ್ನು ಪೂಜಿಸಬೇಕೆಂದು ಭರತ ಅಲ್ಲಿಗೊಂದು ಸಿಂಹಾಸನ ತರಿಸಿ ಅಲ್ಲಿಗೆ ಚಿತ್ತೈಸಬೇಕೆಂದ. ಅದರೆ ತಾಯಿ ತನಗೇಕೆ ಪೂಜೆಯೆಂದು ಒಲ್ಲೆನೆಂದಳು. ತಾಯನ್ನು ಸಿಂಹಾಸನಕ್ಕೆ ತರುವ ಸುಲಭೋಪಾಯ ಏನೆಂದು ಭರತ ಅರ್ಕಕೀರ್ತಿಯನ್ನು ಕೇಳಿದ. ಗದ್ದುಗೆ ಒಡಿಪೆತ್ತಿ ತರುವೆನೆಂದ ಅರ್ಕಕೀರ್ತಿ. ಇನ್ನೊಬ್ಬ ಮಗ ಆದಿರಾಜನನ್ನು ಕೇಳಿದರೆ, ಅವನು ಪೂಜೆ ಅಲ್ಲಿಯೆ ಮಾಡೋಣವೆಂದ. ಉಳಿದ ಮಕ್ಕಳು ತಂದೆಗಿಂತ ತಾವೇನು ಬಲ್ಲೆವೆಂದರು. ಆಗ ಭರತ ' ಈ ತಂತ್ರಗಳೇಕೆ ? ಒಂದು ಮಂತ್ರದಿಂದಲೆ ನಾನು ಇದನ್ನು ಸಾಧಿಸುವೆ 'ನೆಂದ.

ಏಳಿ ಪೂಜಾಸನಕಮ್ಮಾಜಿಯೆಂದನು | ಹೇಳಬೇಡೆಂದಳಾ ಮಾತ
ಹೇಳುವುದಿಲ್ಲೊಂದು ಮಂತ್ರಶಕ್ತಿಯು ನೀವು | ಲಾಲಿಸಬೇಡವೆಂದಾ

ಓಂ ಮಹಾಹಂಸನಾಥಾಯ ನಮಃ ಸ್ವಾಹಾ | ಅಮ್ಮಾಜಿಯೇಳಿಯೇಳದಿರೆ
ನಿಮ್ಮಯ್ಯ ಭರತಣ್ಣನಾಣೆ ಸ್ವಾಹಾಯೆಂದ | ಜುಮ್ಮನಿಳಿದು ನಿಂದಳಾಕೆ

ಹಣ್ಣುಹಣ್ಣನೆ ನಡೆಯುತಿ ನಿಮ್ಮಯ ಚಕ್ರ | ದಣ್ಣನಾಣೆ ಸ್ವಾಹಾಯೆಂದಾ
ಅಣ್ಣ ಬಿಡಾಣೆಯನೆನುತಾಕೆ ನಡೆದಳು | ಹೆಣ್ಣುಗಳ್ನಗೆ ತಾನು ನಗುತ

ನೀವು ಪೇಳ್ವರಸಣ್ಣನಾಣೆ ಸ್ವಾಹಾ ವಿಷ್ಟ | ರಾವಲಂಬನವೇರಿದೆಂದಾ
ಭಾವೆಯರೆಲ್ಲರು ನಗುತ ಕೈಮುಗಿಯಲಾ | ದೇವಿ ಕುಳಿತಳೇರಿ ಮಣೆಯಾ

ನಿಮ್ಮ ದೊಡ್ಡಣ್ಣನಾಣೆಮ್ಮ ದೊಡ್ಡಣ್ಣನಾ | ಣೆಮ್ಮಯ ಚಿಕ್ಕಣ್ಣನಾಣೆ
ನಿಮ್ಮಯ ಚಿಕ್ಕಣ್ಣನಾಣೆ ಸ್ವಸ್ಥದೊಳಿರಿ | ಅಮ್ಮ ಸ್ವಾಹಾಶತಯೆಂದಾ

ಭರತೇಶ ಭುಜಬಲಿಗಳನಾಕೆ ವಿನಯದಿ | ಕರೆವ ಮಾತುಗಳವು ಮತ್ತೆ
ಭರತೇಶ ತಾನರ್ಕಕೀರ್ತ್ಯಾದಿರಾಜರ | ಕರೆವ ಮಾತುಗಳು ಸ್ವಲ್ಪಗಳೆ

ಗೊಳ್ಳನೆಲ್ಲರು ನಗುತಿದ್ದರು ಮಗನೆ ನೀ | ನೊಳ್ಳಿತ ಕಲಿತೆ ಮಂತ್ರವನು
ಇಲ್ಲವಿನ್ನಾಣೆಯು ನನ್ನಾಣೆಯೆನಲಾಕೆ | ಯಿಲ್ಲಿಲ್ಲ ಸ್ವಾಹಾಹಿಯೆಂದಾ

ಮತ್ತೊಂದು ಸಲ, ಭರತೇಶ ಭುಜಬಲಿಯ ಮೇಲೆ ನಡೆದು ಪಾಳೆಯ ಬಿಟ್ಟಿರುವಾಗ, ಒಂದು ರಾತ್ರಿ ಆ ಕಟಕದಲ್ಲಿ ಭಾವಮೈದುನರಿಬ್ಬರು ಸೈನಿಕರು ಮಾತಾಡಿಕೊಂಡರಂತೆ:

ಮಸಿಗೂಡಿ ಮಳ್ಳ ನಾಡೊಡಗೂಡಿ ಮಗ್ಗವಂ | ಬಸುರಿನೊಳ್ಳಿದೆಗೂಡಿ ಚಕ್ರ
ಘನತೆವೆತ್ತನು ಸೇನೆಯೊರತಾಮರಿವನೊಬ್ಬ | ಮನುಜನಲ್ಲವೆಯೆಂದರವರು

ಅಮುದಮುಮಾನೆ ಕುಮರಿ ಮೊಮಲಾಮ ಸಂ | ಗ್ರಮದೋರಿ ಜಗವನಂಜಿಸಿದಾ
ಸಮಜಶಕ್ತಿಯು ನೋಡಲೀತಗೇನುಂಟಾಮ | ಮುಟಿಮು ನಮ್ಮ ತೆಂದರೊದನೆ

ಭರತ ಇದನ್ನು ಕೇಳಿದ. ಅವನಿಗೆ ವಿನೋದ ಮಾಡಬೇಕೆನ್ನಿಸಿತು. ಮಾರನೆಯ ಬೆಳಗ್ಗೆ ಕಿರುಬೆರಲನ್ನು ಸಟಿಗೆ ಡೊಂಕುಮಾಡಿ ನೊಂದಂತೆ ಕುಳಿತ. ಮಂತ್ರಿ, ಮಕ್ಕಳು ಬಂದು ಮುಟ್ಟಿದರೆ ಸಟೆಗೆ ನರಳಿದ. ರಾಜವೈದ್ಯರು ಬಂದರು, 'ಪರಮೂಲಿಕಾಸಾರ ಸಿದ್ಧ ತೈಲವ ಪೂಸಿ ಸರಿತ ಮಾಡುವೆ'ವೆಂದರು. ದಿವ್ಯ ಮಂತ್ರವಾದಿಗಳು ಬಂದರು, 'ಮಂತ್ರಿಸಿ ನೇರಮಾಡುವೆವಿದ' ನೆಂದರು. ಯಂತ್ರ ಸಿದ್ಧರು ಬಂದರು, 'ಇದಕೆ ಬೀಜಾಕ್ಷರ ಮಂತ್ರವ ಬರೆದು ಕಟ್ಟಿದರೆ ಜಂತ್ರ ಪರಿದ ಬಿಲ್ಲು ನಿಮಿರಿದಂತಪುದು' ಎಂದರು. ಜೆಟ್ಟಿಗಳು ಬಂದರು, 'ನಾವೊಯ್ಯನೆ ನೆಟ್ಟಗೆದೆಗೆವೆ'ವೆಂದರು. ಕವಿಗಳಾದರೂ ಹಿಂದೆ ಬೀಳಲಿಲ್ಲ, 'ಹೊಸಕೃತಿವೇಳ್ದು ನಾಂ ನೆಟ್ಟಗಾಗಿಪೆವು' ಎಂದರು. 'ಜಲವ ಹೊಕ್ಕಾವು ಮಂತ್ರಿಸಿ ನೇರಮಾಳ್ಪೆವೆಂದುಲಿದರು ಬಂದ ಭೂಸುರರು.' ಹೀಗೆ 'ಪಲಬರು ತಂತಮ್ಮ ಕಲಿತ ವಿದ್ಯಾರ್ಥದ ಬಲುಹ ಸೂಚಿಸುತ್ತಿದ್ದರಾಗ.' ಆದರೆ ಭರತ ಜೆಟ್ಟಿಗಳು ನೆಟಿಗೆ ತೆಗೆಯಲೆಂದ. ಬಂದ ಜೆಟ್ಟಿ ಬಾವಲಿಯಂತೆ ಬೆರಳಿಗೆ ಜೋತು ಬಿದ್ದರೂ ಬೆರಳು ಹಾಗೆಯೆ ಇತ್ತು. ಹಲವರು ಜೆಟ್ಟಿಗಳು ಬಂದೆಳೆದರು. ಅರಸ ಅವರನ್ನು ಅಕ್ಷಮಾಲೆಯಂತೆ ಎತ್ತಿದ. ಆದರೂ ಬೆರಳು ನೇರವಾಗಲಿಲ್ಲ. ಆಗ ಭರತನ ಸೂಚನೆಯಂತೆ ಆ ಬೆರಲಿಗೆ ಚಿನ್ನದ ಸರಪಣಿ ತಗುಲಿಸಿ ಕಟಕವೆಲ್ಲ ಹಿಡಿದು ಎಳೆಯಿತು. ಇರುವೆಗಳು ಎಣ್ಣೆ ಸೋಕಿದ ನೇಣ ಮುತ್ತುವಂತೆ ಮುತ್ತಿ ಎಳೆಯಿತು. **ಆದರೂ ಬೆರಳ**

ಕೊಂಕುಬಿಡಲಿಲ್ಲ. ಹೀಗೆ ಹಲ್ಲು ಕಚ್ಚಿ ಉಳ್ಳ ಶಕ್ತಿಯೆಲ್ಲ ಬಿಟ್ಟು ಸೇನೆ ತುಯ್ಯುತ್ತಿರುವಾಗ ಅರಸ ತನ್ನ ಮಡಿಸಿದ ತೋಳನ್ನು ಕೊಂಚ ನೀಡಿದ. ಕಟಕವೆಲ್ಲ ಹೊಟ್ಟೆ ಮೇಲಾಗಿ ಕೆಳಗೆ ಕೆಡೆಯಿತು. ಅದನ್ನು 'ರಾಯ ನಿಟ್ಟಿಸುತಿದ್ದನು ನಗದೆ.'

ಏಳಬೇಳೇಕೆ ಬಿದ್ದರು ನಾನು ಸುಕ್ಕಿದ ತೋಳ | ನೀಡಿದೆನ್ನೈಸೆ ನನ್ನ
ವಾಲಿಪಂಗುಲಿಯಿನ್ನು ನೇರವಾಯ್ತೆಲ್ಲೆಂದ | ಮೇಲೆಲ್ಲರೆದ್ದರಾ ಕ್ಷಣವೆ

ಪುನಃ ಎಳೆದರು. ಅರಸ ಅವರನ್ನು ತನ್ನತ್ತ ತುಯ್ದ. ಅವಕ್ಕೆ 'ಮೂಗಡಿಯಾಗಿ ಬಿದ್ದುದು ಸೇನೆ ಸಾಷ್ಟಾಂಗವಾಗಿ ವಂದಿಸುವಂತೆ ತನಗೆ.'

ನರನಾಥ ತಲೆವಾಗಿ ನಸುನಕ್ಕನಾಗ ಖಿ | ತ್ರರು ಹುಸಿರೋಗವೆಂದಂದು
ಪರರಿಂದ ಮಾಣದೊಡೆಯ ನೀನೆ ನಿನ್ನ ನು | ಜ್ಜಿರಳ ಮಾಣಿಪುದೆಂದರೊಸೆದು

ಸರಸಣಿವೆಗೆವೆಡಗೈಯಿಂದ ತನ್ನ ನು | ಜ್ಜಿರಳನೊತ್ತುತ ಪಿಸೋದಾರ್ಧ
ಗುರುಹಂಸನಾಥಾಯ ಸ್ವಾಹಾಯೆಂದನು ಕೂಡೆ | ಸರಿತವಾಗಿದ್ದುವಾ ಬೆರಳು

ಸರಸಾರ್ಥಿಪನೇಕೆ ನೆನೆದೆ ಚಕ್ರೇಶಯಿಂ | ದುರುಮುದದೊಳು ಮಂತ್ರ ಕೇಳ್ವಾ
ಗಿರುಳೆಬ್ಬರಾದಿದ ನುಡಿಗಿಂತು ನೆನೆದೆನೆಂ | ದರಸನಾ ಸ್ತುತಿಯ ಪೇಳಿದನು

ಇವು ಈ ರತ್ನಾಕರದ ನಾಲ್ಕು ಸಣ್ಣ ಅಲೆ.

**ಕುಸುಮಾಜಿಯ ಕಾವ್ಯಸನ್ಮಾನ** ಎಂದು ಈಗ ನಾನು ಕರೆಯುತ್ತಿರುವ ಇದು ರತ್ನಾಕರನಿಂದ ತೆಗೆದ **ಒಂದು ದೊಡ್ಡ ಅಲೆ.** ಒಂದು ಸಲ

ಪೆಂಡಿರೋಲಗದೊಳಗಭಿನವಕುಸುಮಾ ಕೋ | ದಂಡನಾ ನೃಪನೊಪ್ಪುವಾಗ
ಪಂಡಿತೆಯೊಡನೊರ್ವ ಗಾಯಕಿ ಕಿವಿಗಚ್ಚಿ | ಕೊಂಡು ನುಡಿದಳೊಂದು ಮಾತ

ಆ ಮಾತು ಕೇಳಿ, ಪಂಡಿತೆ ಗರಗರನೆ ಎದ್ದು, ಅರಸನಿಗೆ ಬಿನ್ನಹವೆಂದು ನಗುತ್ತ 'ಒಂದು ಹೊಸ ಕಾವ್ಯವುಂಟು, ಅವಧರಿಸಬೇಕು' ಎಂದಳು. ಅರಸ 'ಯಾರು ಹೇಳಿದುದು? ಆರ ವರ್ಣನೆ? ಅದನ್ನು ತಿದ್ದಿದವರಾರು?' ಎಂದು ಕೇಳಿದ. 'ಪರರು ಹೇಳಿದುದಲ್ಲ. ಪರರ ವರ್ಣನೆ

ಯಲ್ಲ. 'ತಿದ್ದುವ ದಕ್ಷರು ಪರರಿಲ್ಲ. ಅರಸ, ಇದು ನಿನ್ನ ಅರಮನೆ ಯಲ್ಲಾದ ಕೃತಿ. ನಿನ್ನ ಚರಿತ. ನೀನೇ ತಿದ್ದಬೇಕು' ಎಂದಳು ಪಂಡಿತೆ. 'ಅರಮನೆಯೊಳಗಾದುದು ಎಂದರೆ ಆರೆಂದು ನಿರ್ಧರಿಸ ಬಹುದು. ಹೊಸ ಕೃತಿಯ ವಿರಚಿಸಿದಾಕೆಯ ಹೆಸರ ಹೇಳು' ಎಂದು ದರಹಾಸದಿಂದ ಭೂವರನೆಂದ. ಅದಕ್ಕೆ ಪಂಡಿತೆ "ನಿನ್ನ ಅರಗಿಳಿ ಯೊಡನೆ ಕುಸುಮರಾಜಿಯರು ಒಲಿದು ಸರಸದಿಂದ ನುಡಿದಾಡಲು, ಅದನ್ನು ನೆರೆಮನೆಯಲ್ಲಿದ್ದ ಸುಮನರಾಜಿಯರು ಕೇಳಿ ಚರಿತೆ ಮಾಡಿ ದರು. ನಿನ್ನ ಸುಮನರಾಜಿಯರ ನಿಲಯಕ್ಕೆ ವಿನೋದಕ್ಕಾಗಿ ಅಮರರಾಜಿ ಯರು ಬಂದು, ಆಕೆ ಅನೃತವಾಚಕನೆಂಬ ಗಿಳಿಯೊಡನೆ ನುಡಿವುದನ್ನು ಕೇಳಿದರು. 'ಕುಸುಮರಾಜಿ ನುಡಿದದ್ದು ಚೆನ್ನಾಯಿತು. ಸುಮನರಾಜಿ, ನೀನಿದನ್ನು ಹೊಸಕೃತಿಮಾಡು. ನಾನು ಇದನ್ನು ಬರೆಯುವೆನು' ಎಂದು ಅಮರರಾಜಿಯವರು ಬರೆದು ಹೇಳಿಸಿದ ಕಾವ್ಯ, ರಾಯ" ಎಂದಳು. ಅರಸ ಆ ಕಾವ್ಯ ಓದಿಸಲು ಅಪ್ಪಣೆ ಕೊಟ್ಟ. ಒಬ್ಬ ತಳೋದರಿ ಓದಲು ಪುಸ್ತಕ ಹಿಡಿದು ಇದಿರಲ್ಲಿ ಕುಳಿತಳು. ಆಗ

ಘಗಿಲನೆದ್ದಳು ಕುಸುಮರಾಜಿ ಕೈಮುಗಿದು ನಿಂದು | ಮಗ ತೊಂದು ನೋಂಪಿಯುಂಟೆನಗೆ
ಸುಗತನಿವಾಸಕೆ ಪೋಪೆನೆಂದಳು ರಾಯ | ನಗುತ ಸುದತಿಯಾಕೆಗಿಂತು

ಲೇಸಾಯಿತ್ತು ಪೋಗು ಕಂಕಣ ಬೇಡವೆ ನೋಂಪಿ | ಗೀ ಸುವರ್ಣದ ಕಂಕಣವನು
ಕೋ ಸುಮ್ಮನೇಕೆ ಪೋದಪೆ ಹಿಡಿಯೆಂದು ವಿ | ಲಾಸದಿ ಕೈಯ ನೀಡಿದನು

ನಿಜವೆಂದು ರಾಯನ ಕರದ ಕಂಕಣಕೆ ವಾ | ರಿಜಮುಖಿ ಕೈಯ ನೀಡಿದಳು
ಗಜ ತನ್ನ ಕರಿಣಿಯ ಕರ ಹಿಡಿವಂತೆ ಭೂ | ಭುಜ ಹಿಡಿದನು ಕೈಯನವಳ

ಅರ ಚಾಳಿಸುವಾ ನಿನಗೆ ನಾನರಿಯೆನೆ | ತಾರಿತ್ತರಿಂದು ನೋಂಪಿಯನು
ಸಾರಿ ಕುಳ್ಳಿರು ಸಾಕು ಸನ್ನಾಹವೆಂದು ಪೊತ್ತ | ಗಾರಾಯನೊಯ್ದನಾಕೆಯನು

ಓಗೆ, ಹೊರಟ ಕುಸುಮರಾಜಿಯನ್ನು ಹಿಡಿದು ಕುಳ್ಳಿರಿಸಿ,

ಕಂಡೆಯ ಪಂಡಿತೆ ಕುಸುಮರಾಜಿ ಕುಸುಮದ | ಚೆಂಡಿನಂತಪ್ಪ ಲಂಘನವಾ.......
ಅದಕಲ್ಲ ನೋಡೊಂದು ನೋಂಪಿಯೆಂದೆನ್ನ ನೊ | ಪ್ಪದಿ ಚಾಳಿಸುವೊಂದು ಬಗೆಯಾ

ಎಂದು ಸರಸವನಾಡಿ, ಇತರ ಮಹಿಳೆಯರೊಡನೆ ಕುಳ್ಳಿರು ಹೋಗೆಂದು ಸಹಜದಿಂದ ಅವಳನ್ನು ಬೀಳ್ಕೊಟ್ಟನು.

ಬಳಿಕ ಅರಸನ ಅಪ್ಪಣೆ ಪಡೆದು ಹಾಡುವ ಕನ್ಯೆ ಪೊತ್ತಗೆ ಹಿಡಿದು ಹಾಡಿದಳು. ಕುಸುಮರಾಜಿ ತನ್ನ ಮುದ್ದಿನ ಗಿಳಿ ಅಮೃತ ವಾಚಕನಿಗೆ ಭರತೇಶನ ಸರ್ವಾಂಗಶೋಭೆಯನ್ನು ಬಣ್ಣಿಸಿ ನುಡಿದುದನ್ನೂ, ಲೀಲಾರ್ಥವಾಗಿ ಗಗನದಲ್ಲಿ ಹೋಗುತ್ತಿದ್ದ ವ್ಯಂತರಕನ್ಯೆಯೊಬ್ಬಳು ಆ ವರ್ಣನೆ ಕೇಳಿ ಅರಗಿಳಿಯ ಮೈಯಲ್ಲಿ ನಿಂತು ಕುಸುಮಾಜಿಗೆ ಉತ್ತರಕೊಟ್ಟುದನ್ನೂ ನಿರವಿಸಿದ ಆ ಕವಿತೆಯನ್ನು ಹಾಡಿದಳು.

ಹಾಡಿಯಾದ ಮೇಲೆ, ಭರತೇಶ್ವರ ಆ ಕಾವ್ಯರಚನೆಯನ್ನು ತನ್ನ ಎದೆಯಲ್ಲಿ ಭಾವಿಸಿ ನೋಡಿ ಮೆಚ್ಚಿ 'ಕೃತಿ ಚೆನ್ನಾಯಿತು. ಆದರೆ ಒಂದು ವಿಚಾರವುಂಟು. ಇದು ಸುಮನಾಜಿಯ ಕವಿತೆಯಲ್ಲ, ಅಮರಾಜಿ ಹೇಳಿದ ಕೃತಿ' ಎಂದ. ಅದ ಕೇಳಿ ಅವರಿಬ್ಬರೂ ನಕ್ಕು ಒಬ್ಬರೊಬ್ಬರ ಮುಖ ನೋಡಿದರು. 'ಆಗಲೆ ಹೇಳಿದೆ, ಅಕ್ಕ, ನೀನು ನನ್ನ ಮೇಲೆ ಈ ಗುಟ್ಟು ಹೊರಿಸದಿರೆಂದು. ಈಗ ಆಯಿತೆ!' ಎಂದು ಸುಮನಾಜಿ ನಕ್ಕು ನುಡಿದು, 'ತಂಗಿ, ನೀನು ಇದ ಕೃತಿಮಾಡು-ಎಂದಳು. ಈ ಕಾವ್ಯದ ಅಂಗ ನನಗೆ ಬಿರಿಸು ಎಂದೆ. ಅಮರಾಜಿ ಸಂಗತಿ ಮಾಡಿದಳು. ನಾನು ಅದನ್ನು ಅಂಗೀಕರಿಸಿ ಬರೆದೆ. ನಾನು ಹೇಳಿದೆನೆಂಬುದು ಏನಕ್ಕ, ನಿನ್ನ ಅಭಿಧಾನವೆ ಅಲ್ಲಿರಲಿ, ಎಂದೆ. ಅವಳು ಕೇಳಲಿಲ್ಲ, ಮರಸಿ ಹೇಳಿದಳು. ಆದರೆ ಎಲ್ಲರ ಚಿತ್ತದ ಓರೆಕೋರೆ ಬಲ್ಲವರ ಮುಂದೆ ಯಾರೇನು ಮರಸಲಾದೀತು!' ಎಂದಳು. ಅದಕ್ಕೆ ಅರಸನು ನಗುತ್ತ 'ಮೊದಲರ್ಧ ಅವಳ ಕವಿತ್ವ. ಕಡೆಯರ್ಧ ನಿನ್ನ ಸುಕವಿತ್ವ' ಎಂದ. ಅಮರಾಜಿ ಅದಕ್ಕೆ ನಗುತ್ತ 'ಹೌದು. ಹೌದು. ನೀನು ಹೇಳು ತಾಯಿ—ಎಂದರೆ ಒಲ್ಲದಾದಳು. ಅದಕ್ಕೆ ನಾನೊಂದು ಉಪಾಯ ನೆನೆದೆ. ನಾನು ಸ್ವಲ್ಪ ಹೇಳಿ, ಓಗೆ ಹೇಳು ಎನ್ನಲು, ಬಳಿಕ ಹೇಳಿದಳು. ಆದಿಮಂಗಲ ನನ್ನದು. ಅಂತ್ಯಮಧ್ಯದೊಳಾದ ಮಂಗಲ ಆಕೆಯದು' ಎಂದು ಒಪ್ಪಿದಳು. ಅರಸನು ತಮ್ಮ ಅಂತರಂಗದ ಸುಕ್ಕುಸುಳುಹನ್ನು ಅಂತರಿಸದೆ ಹೇಳುತ್ತಿದ್ದುದಕ್ಕೆ ಕಾಂತೆಯರೆಲ್ಲ ನಲಿದರು.

ಅರಸ ಅಮರಾಜಿ ಸುಮನಾಜಿಯರ ಕೃತಿಗೆ ಮೆಚ್ಚಿ ಮೆಚ್ಚುಗೊಡ ಬಯಸಿದಾಗ ಅವರು ಆಭರಣ ಬಂಗಾರ ಸ್ವೀಕರಿಸಲು ಒಪ್ಪಲಿಲ್ಲ.

ಮುಟ್ಟಿತಿವರಸೋಲೆ ನನಗರ್ತಿ ನಾನೊಂದ | ಕೊಟ್ಟಪೆನೆನಲೊಲ್ಲರಿವರು
ಕೊಟ್ಟಿಲ್ಲವೆನ್ನುಬ್ಬು ಸಿಲ್ಲದಿಸ್ಸಿದಕೇನು | ತಿಟ್ಟವೆಂಪೆದೆಯೊಳು ನೆನೆದಾ

ಬಂಗಾರವನೊಲ್ಲದಿರೆ ಮಾಣಲಿವರನಾ | ಲಿಂಗಿಸಿಯಾದರು ಬಿಡುವಾ
ಪಾಂಗಾವುದೊತ್ತಿಗೆ ಬಾರರೆಂದೆಣಿಸಿ ತಂ | ತ್ರಾಂಗವನೊಡನೊಂದ ಕಂಡಾ

ಅವರಿಗೆ ಬಾ ಸುಮನೆ ಬಾ ಕುಸುಮಾಜಿ ಚಿತ್ತವಿ | ಭ್ರಮದೊಳಿದ್ದ ಪಳವಕೊಂದು
ಕ್ರಮವನೇಕಾಂತದೊಳಗೆ ಪೇಳ್ವೆನೆಂದು ಭೂ | ರಮಣ ತನ್ನೊತ್ತಿಗೆ ಕರೆದಾ

ನಡೆದು ಸಮೀಪಕೆ ಬಂದ ಪೆಂಗಳನೆಡ | ಗಡೆ ಬಲಗಡೆಯೊಳು ಇರಿಸಿ
ನುಡಿವಂತೆ ಕಿವಿಗೆ ಮೋರೆಯ ತೋರುತಿಬ್ಬರ | ನೊಡನಪ್ಪಿಕೊಂಡನಾ ನೃಪತಿ

ಬೆದರಿದಂತಾದರು ಪೆಂಗಳತ್ತಿತ್ತ ಮ್ಮೆ | ಯೊದರಿಕೊಂಬರು ಅಲ್ಲಿಯಿಂದ
ಅದಿರದಂತಾ ರಾಯನವುರ್ದಪ್ಪಿಕೊಂಡು ಮೆ | ಚ್ಚಿದೆನೆಂದು ಬಿಟ್ಟನಾಕ್ಷಣದೆ

ಗೊಳ್ಳನೆ ಸತಿಯರೆಲ್ಲರು ನಕ್ಕರದಕೆ ಭೂ | ವಲ್ಲಭ ತಾ ನಸುನಕ್ಕಾ
ಒಳ್ಳಿತಂತಾಯ್ತಾಗಬೇಕೆಂದು ಕುಸುಮಾಜಿ | ಗೆಲ್ಲವಡೆದು ನಕ್ಕಳೊಡನೆ

ಕೋಣೆಯೊಳಾನೊಂದ ನುಡಿವಾಡಲದ ತಂದು | ಕ್ಷೋಣೀಶಗರಿಕೆ ಮಾಡಿದಿರಿ
ಕಾಣದೆ ದೈವವಿಲ್ಲವೆ ನಿವಗಾಫಲ | ಕಾಣಿಸಿತಿಂತು ಕಣ್ಣಾರೆ

ಒಬ್ಬರ ಗೂಢಚರಿತ್ರವ ಬಾಹ್ಯಕೆ | ಪಬ್ಬಿಸಿ ನಗುವಾ ಎಂಬವರಾ
ತಬ್ಬಿ ದೈವವೆ ನಗಿಸುವುದೆಂಬ ನುಡಿಗೆ ನೀ | ವಿಬ್ಬರೆ ಗುರಿಯಾದಿರಕ್ಕ

ಸೆರಗ ಮೊಗಕೆ ಸಾರ್ಚಿ ನಗುವಳು ಕಂಬದ | ಮರೆಗೆ ಪೋಪಳು ಕೂಡೆ ಬಹಳು
ಎರೆಯನಿದಿರೊಳಿಪ್ಪು ನಾಣ್ಚುತ ನಗುತ ಮೊ | ನ್ಮರಿದಾಡುತಿರ್ದಳಾ ತರುಣಿ

ಅರಸ ಕಿಕ್ಕಣ್ಣಿಂದ ನೋಡುವನಾಕೆಯ | ಸರಸಲೀಲೆಗೆ ಒಗ್ಗಿ ನಗುವ
ಶಿರಬಾಗಿಕೊಂಡಿದ್ದಳೀಗಳುಬ್ಬಿದಳೆಂದು | ಪರುಷವೈದಿದನೆದೆಯೊಳಗೆ

ಹೀಗೆಯೆ ಅರಸಿಯರಲ್ಲಿ ತನುತಮಗೆ ಸರಸ ನಡೆದ ಮೇಲೆ ಎಲ್ಲರೂ ಅರಸನಿಗೆ ಆಭರಣದ ನಿವಾಳಿ ತೆಗೆದರು.

ಮಮತೆಯೊಳಬಲೆಯರೆಲ್ಲರು ಕೂಡಿ ಸಂ | ಭ್ರಮದಿ ನಿವಾಳಿಸುವಾಗ
ಅಮರೆ ಸುಮನೆ ಕುಸುಮೆಯರ ಜಗಳವೆತ್ತ | ಗಮಿಸಿತೆಂದನು ನರನಾಥ

ಅದಕ್ಕೆ ಪಂಡಿತೆ ಹೀಗೆಂದಳು :

ರಾಜ ಬಿನ್ನಹ ಸುಮನಾಜಿಯೊಳಗೆ ಕುಸು | ಮಾಜಿಯೊಳಗೆ ನೋವು ಬಹುದೆ
ಆಜಿಯೆಂದರೆ ಕದನಕೆ ಹೆಸರೆಂದರಿ | ದಾ ಜಾಣ್ಮೆಗರಸ ಮೆಚ್ಚಿದನು

ಅಹುದೆ ಚೆನ್ನಾಯ್ತಿದು ಖಡ್ಗದಾಜಿಯೊಳು ನೋ | ವಹುದೈಸೆ ಹೂವಿನಾಜಿಯೊಳು
ಮಹಿಯೊಳಗಾರು ನೊಂದವರುಂಟೆನುತ ರಾಯ | ಗಹಗಹಿಸುತ ಮೆಚ್ಚಿ ನುಡಿದ

ಅಸುರಾಜಿಗುಂಟು ಕರ್ಕಶವಸುರಾಜಿಯೊ । ಳೆಸೆವುದೆ ಕರ್ಕಶವರಸ
ಹೊಸತಾಯ್ತು ಸುರರಿಗೆ ಕಡನಸಿಲ್ಲೊಮ್ಮೆ ಸಂ । ಧಿಸಿದನು ಮೃದುಪೆಂಪೆಂಬುತ್ತಿ

ಆಗ ಭರತ ಅಲ್ಲಿದ್ದ ಲಲನೆಯರನ್ನು ನೋಡಿ, 'ಪಂಡಿತೆ, ನಾವು ಇಂದು ನಮ್ಮ ಮನೆಯಲ್ಲಿ ಉಂಡರೆ ಲೇಸೊ ? ನಮ್ಮ ಹೆಂಡಿರೊಬ್ಬಳ ಮನೆಗೆ ಹೋದರೆ ಲೇಸೊ ? ಹೇಳು ' ಎಂದ. ಅರಸನ ಚಿತ್ತ ಕುಸು ಮಾಜಿಯಲ್ಲಿ ಎರಕವಾಯ್ತೆಂದು ಪಂಡಿತೆಗೆ ತಿಳಿಯಿತು. 'ಇಂದಿಗೆ ಆರೋಗಣೆ ದೇವರ ಗೃಹದಲ್ಲಿ ಚೆಂದವಲ್ಲ. ಒಬ್ಬಳ ಮನೆಗೆ ಸಂದರೆ ಉತ್ತಮ ' ಎಂದಳು. ಅರಸನಿಗೆ ಮನಸಿನ ಗಂಟೆ ತುರಿಸಿದಂತಾಯ್ತು. 'ಆರ ಮನೆಗೆ ಹೋಗಬಹುದು, ಹೇಳು ?' ಎಂದ ಭರತ. ಪಂಡಿತೆ ಆಲೋಚಿಸಿ ಚಿನ್ನವಿಸುವೆನೆಂದು ಕುಟಿಲ ಮೌನ ತಾಳಿ, ಮೂಗಿನ ಮೇಲೆ ಬೆರಳನ್ನಿಟ್ಟು ಕಣ್ಮುಚ್ಚಿ ತಲೆಯನ್ನು ಒಂದಿಷ್ಟು ತೂಗಾಡಿ, ಯೋಗಿಗಳಂತೆ ಧ್ಯಾನಿಸಿ, ಕಣ್ತೆರೆದು 'ಒಡೆಯ, ಕುಸುಮಾಜಿಯವರ ಮನೆಗೆ ಅಡಿಯಿಟ್ಟರೆ ಉತ್ತಮ ' ಎಂದಳು. 'ಅದು ಹೇಗೆ ಉತ್ತಮ ? ಹೇಳು ' ಎಂದು ಭರತ ಅವಳಿಂದ ಹೇಳಿಸಿದ. ಅದಕ್ಕೆ ಪಂಡಿತೆ 'ಈ ಹೊಸ ಕಾವ್ಯ ಆದುದು ಮೂವರಿಂದ. ಇಬ್ಬರನ್ನು ನೀನು ಮನ್ನಿಸಿದೆ. ಇನ್ನೊಬ್ಬಳಿಗಿಲ್ಲ. ಅವಳ ಮನೆಗೆ ಹೋಗಿ ಅವಳನ್ನು ಮನ್ನಿಸುವುದು ಉಚಿತ ' ಎಂದಳು.

ಅದು ಲೇಸುಲೇಸಂತುಟಾಗಬೇಕೆಂದು ತ । ಪ್ಪದೆ ಪೆಣ್ಗಳಿಲ್ಲರಾಡಿದರು
ಎದೆಯೊಳಾನಂದ ಮುಗುಳೊಳಿಸ್ಸು ಮಾಂಪ್ಸಭಾ । ವದೊಳೊದಬಟ್ಟ ನಾಕುಂಠಲ

ಇದಾಯಿತು. ಅರಸನ ಆರೋಗಣೆಗೆ ಸಿದ್ಧಗೊಳಿಸಲು ಕುಸುಮಾಜಿ ತನ್ನ ಅರಮನೆಗೆ ತೆರಳಿದಳು. ಭರತ ಅಲ್ಲಿಯುವರೆಗೆ ತನ್ನ ಅರಮನೆಗೆ ಇರಲು ಹೋದ. ಉಳಿದವರು ತಮ್ಮ ತಮ್ಮ ಎಡೆಗೆ ಹೋದರು. ಆರೋಗಣೆಯ ಸಮಯವಾದಾಗ, ಕುಸುಮಾಜಿಯ ತಂಗಿ ಮಕರಂದಾಜಿ ಯೆಂಬವಳು ಭರತನನ್ನು ಕರೆಯಲು ಬಂದಳು. ಅವಳಿಗೆ ಪ್ರಾಯಕ್ಕೆ ಅರೆ ವರುಷ ಕಡಿಮೆ. ಆಕೆ ಬಂದು ಭಾವನಿಗೆ ಮಲಯಜವೀಟಿ ಕಾಕ್ಷತೆ ಕೊಟ್ಟು

**ಅನುಕೂಲವಾದುದಾರೋಗಣೆಗಿನ್ನೆಮ್ಮ । ಮನೆಗೇಳು ಭಾವಾಜಿಯೆಂದು**
**ತನುಮಧ್ಯೆ ನುಡಿದಳದಕೆ ರಾಯ ನಗುತ । ನಾದುನಿಯೊಳು ನುಡಿದನಿಂತೆಂದು**

ಇಂದಾನು ನಿನ್ನ ಮನೆಗೆ ಬರುದುಚಿತವೆ | ಬಂದರೆ ವರುಷದ ಮೇಲೆ
ಬಂದು ನೀನೆನ್ನ ಕರೆದರಾನು ಬರೆನು ಹೋ | ಗೆಂದನು ನೃಪತಿ ನಾರಿಯು

ಅಕ್ಕಾಜಿಯರವಮನೆಗೇಳೆಂದೆ ನೀನಿಂತು | ತಕ್ಕಿನ ಮಾತನಾಡಿದೆಯು
ತಕ್ಕು ಕಾತಿಂದೆ ನಿನ್ನ ಮನೆಗೆಂದೆನ್ನ್ಯೆಸೆ ನಿ | ನ್ನಕ್ಕನ ಹೆಸರ ಹೇಳಿದೆಯು

ಅಕ್ಕನ ಹೆಸರ ಹೇಳುವನಾಕೆ ಪತಿದರೆ | ಮಕ್ಕಳು ಪೇಳ್ವುವು ಮುಂದೆ
ದಿಕ್ಕಿನೊಳಿನಗೇನು ಸಂಬಂಧ ನಾರೀಳು | ಸಿಕ್ಕಿನ ಮಾತನಾದರಿರು

ನಾಕೇಳು ಸಲಹೇಳು ನೀನೆಂದು ತಾನೆನ್ನ | ನಾಕರುಷಣ ಮಾಡುತಹಳೆ
ಈಕೆ ತಾನೇನು ಕಾತರೆಂಬೊಂದೆಂದನು ರಾಯ | ನಾ ಕಾಂತೆ ತಲೆವಾಗಿ ನಗಲು

ಕಾತರಗೇತರವನು ನೀವ್ವು ನಿಮ್ಮಂಬು | ಜಾತಾಕ್ಷಿಯರು ಬಲ್ಲಿರೈಸೆ
ಆ ತಕ್ಕಬಕ್ಕಿಯು ನಾವೇನ ಬಲ್ಲೆವು | ಮಾತು ನಾಕಿನ್ನೇಳು ಭಾವಾ

ಆಗ ‘ಅತಿ ಸರಸಗಳಾಗದೆಂಬುದ ನೆನೆದು’ ಆ ರಾಯನು ‘ಕುಸುಮ ವಿದ್ದೆಡೆಗೆ ಮಧುವ್ರತ ಪೋಪಂತೆ ಕುಸುಮಾಜಿಯರ ಮನೆಗಾಗಿ’ ನಡೆದನು. ಅವನು ಬರುವುದನ್ನು ಕೇಳಿ, ಕುಸುಮಾಜಿ ತಾನೇ ಇದಿರಾಗಿ ಬಂದು ಸತ್ಕರಿಸಿ ಅವನನ್ನು ಒಳಕ್ಕೆ ಒಯ್ದಳು. ಅವನು ಮನೆಯೊಳಕ್ಕೆ ಬಂದಾಗ, ಅಲ್ಲಿಯ ರಾಜಕೀರ ‘ಅಕ್ಕಕ್ಕ, ಭಾವ ಬಂದನು ನಮ್ಮ ಮನೆಗೆ. ಬೇಗ, ಗದ್ದುಗೆಯಿಕ್ಕು, ಮನ್ನಿಸು’ ಎಂದಿತು. ‘ಇವನೆ ಅಸ್ಪೃತವಾಚಕನು!’ ಎಂದು ಅರಸನು ಬೆಸಗೊಳ್ಳುತ್ತ ಅಲ್ಲಿದ್ದ ಗದ್ದುಗೆಯೇರಿ ಕುಳಿತನು. ಆಗ

ಬಂದೆಯ ಭಾವ ಬಂದೆಯ ಸುಪ್ರಭಾವ ಐ | ತಂದೆಯ ಸುಗುಣಸ್ವಭಾವ
ಬಂದುದು ಲೇಸು ಮಹಾನುಭಾವಾಂದೆಂದು | ದಂದು ನುಡಿದ್ದನ ರಾಜಕೀರ

ಘರಿಯನಾಳಿದೆನೆಂಬ ಗರ್ವದಿಂ ನಮ್ಮಕ್ಕ | ನರಮನೆಗಡಿಗಡಿಗೇಕೆ
ಬರಲೊಲ್ಲೆ ಬಂದಿನ್ನು ಪೋಪೆಯ ನಿನ್ನ ಕಾ | ಲ್ಗರುಲಸಿಕ್ಕುವೆನೆಂದುವಾಗ

ಸುಳಿಗುರುಳೆಂಬುದುಬುಂಟು ನಮ್ಮಕ್ಕನ | ನಳಿತೋಳ ಪಾಶಗಳುಂಟು.......
ಪಂಕಜಾಕ್ಷಿಯ ಕಡೆಗಣ್ಣ ಕಾಂತಿಯ ಬೆಳ್ಳಿ | ಸಂಕಲೆಗಳಸಿಕ್ಕಿಸುವೆನು.......

ಇದೇ ಮುಂತಾಗಿ ಆ ಗಿಳಿ ಸರಸ ವಚನಗಳಾಡಿ

ಈ ನುಡಿಗಳು ನಿನಗುಚಿತಗಳಹುದಿನ್ನು | ಮಾನಿಸಿಯಾಸ್ಯದೊಳೊಂದು
ಜೇನೆಯ್ದ ಕೊಡನುಂಟು ನಿನಗದೆಂತಹುದದು | ಜೈನನಲ್ಲವೆ ಭಾವ ನೀನು

ಗಿಳಿ ಹೀಗೆನ್ನಲು, ಅರಸನು ನಕ್ಕು, ‘ಈ ನುಡಿ ಗಿಳಿಯ **ಯೋಚನೆ**ಯಲ್ಲ. ಯಾರೊ ಇದಕ್ಕೆ ವಿನೋದಕ್ಕೆ ಕಲಿಸಿರಬೇಕು’ **ಎಂದುಕೊಂಡ.**

ಕಲಿಸಿದವಳು ನಾಡುನಿಯೆಂದು ತಿಳಿದ. ಅವಳನ್ನು ತಕ್ಕೈಸುವ ಅರ್ತಿಯಾಯಿತು. ಕರೆದರೆ ಬಾರಳೆಂದು ಒಂದು ತಂತ್ರ ತೆಗೆದ. ‘ಆ ಚೆಂದದ ಗಿಳಿಯನ್ನು ಕೊಂಡು ಬಾ, ಮಕರಂದಾಜಿ’ ಎಂದ. ಅವಳು ತಂದು ಕೊಡುವಾಗ ‘ಆನಂದದೊಳಮರ್ದಪ್ಪಿಕೊಂಡ. ಮುತ್ತಕೊಟ್ಟ. ಕೊರಳಿಗೆ ಕಂಠಮಾಲೆಯ ಸುತ್ತಿ ಮೆಚ್ಚಿದೆನೆಂದು ಬಿಟ್ಟ.’ ಅದನ್ನು ಕಂಡು ಕುಸುಮಾಜಿ ನಗುತ್ತ ‘ಗಿಳಿಗೆ ಹೀಗೆ ಕಲಿಸಬೇಡ. ಕಲಿಸಿದರೆ ಹೀಗೇ ಆಗುತ್ತದೆ – ಎಂದು ನಾನು ಆಗಲೆ ಹೇಳಲಿಲ್ಲವೆ, ತಂಗಿ?’ ಎಂದಳು. ಅದಕ್ಕೆ ಮಕರಂದೆ ‘ಅಕ್ಕನನ್ನು ನೋಡೋಣವೆಂದು ಬಂದರೆ ಒಳ್ಳೆಯ ಫಲವಾಯಿತು. ನನ್ನ ಮಾನಭಂಗವಾಯಿತು’ ಎಂದು,

ಅಳುವಂತೆ ಮೊಗದ ಕಿರಿದು ಮಾಡಿಕೊಂಡಾಗ | ತಲೆವಾಗಿ ಕಣ್ಣನೊರಸಿದಳು
ಒಳಗೆ ಸಂತಸವುಂಟು ಕಣ್ಣ ನೀರಿಲ್ಲ ಬಿ | ಕ್ಕಳಿಸುತ ನುಡಿದಳು ಸಖಿಗೆ
ನೋಡುವಳೊಡನೋರೆಗಣ್ಣಿಂದ ಭಾವದ | ಕೂಡದಷ್ಟು ಮೋರೆದೆಗೆದಳು
ನೋಡುವಾಗಿಷ್ಟು ಚಿಂತೆಯ ತೋರಿ ಮೊಗವಟ್ಟ | ಮೂಡಿಕೊಂಡರೆ ನಗುತಿಹಳು
ತಿರುಗುವವನು ಮುಗುಳ್ನಗುವವನು ಕುಸುಮಾಜಿ | ಗರಸ ಕಣ್ಸನ್ನೆ ದೋರುವನು

ಆ ಮುಳ್ಳಿನ ಅಳುವಿಕೆಗೆ ಬೆರಗಾಗಿ, ಕುಸುಮಾಜಿ ‘ಏಕಿಷ್ಟು ವ್ಯಾಕುಲ, ಮಕರಂದೆ? ತೀವಿದ ನಿನ್ನ ಕಂಗಳ ನೀರ ಕಂಡದೆ ನೋಡುತಿದ್ದನು ರಾಯ’ ಎಂದಳು.

ಎನಲೊಡನವಳಾಗಳೆ ಕಣ್ಣ ತಿಕ್ಕುತೊ | ಯ್ಯನೆಯುವೆಸ್ಕೊಂಡವರಳ್ವರಿಂದೆ
ಅಸಿತದೊಳಗೆ ಕಣ್ಣ ನೀರೊಕ್ಕುವುದ ಕಂಡು | ಜನನಾಥ ಭಾವಿಸಿದ ನಗುತ
ನನ್ನರಸನ ಮುಂದೆ ದುಡುಕುದ ಕಣ್ಣೀರು | ಬೆನ್ನಕ್ಕಳಿಗೆ ಬಾರದೆಲಗೆ
ಸುಮ್ಮಾನದಿಂದ ಕಣ್ಣೀರುಂಟು ನಿನಗೀಗ | ಕುಮ್ಮಾದಶ್ರುಗಳು ಲೇಸಲ್ತೆ

ಹೀಗೆಂದು ಕುಸುಮಾಜಿ ಹೇಳಲು, ಮಕರಂದಾಜಿ

ಬರಿಯುಕ್ಕಿಯಾಟದ ತೊರೆದಳು ತಲೆವಾಗಿ | ಕಿರುನಗೆ ನಗುತಿಪ್ಪಳೊಡನೆ

ಭರತ ಎಂಜಲು ಕೊಟ್ಟ. ಅವಳು ಥೂ ಥೂ ಎಂದು ಉಗುಳಿ ತುಟಿ ತೊಡೆದು ಅವನಿಗೆ ಕಾಣುವಂತೆಯೆ ಬಾಯಿ ಮುಕ್ಕುಳಿಸಿ, ಜಿನಯೆಂದು ಜಪಿಸಿ,

ಕಣ್ಣುಮುಚ್ಚುವಳಿಷ್ಟು ಜಾರಿಸುವಳು ತುಟಿ | ಬಣ್ಣ ಮಿಡುಕಿ ಜಪಿಸುವಳು
ಕಣ್ಣುದೆರೆದು ಭಾವನ ನೋಡುವಳು ನಾಣ್ಚಿ | ಹೆಣ್ಣು ಬಾಗುವಳಾಗ ತಲೆಯ

ಆಗ ಕುಸುಮಾಜಿ ‘ ಎಲಗೆ, ಎಮ್ಮರಸನ ಎಂಜಲು ಸೋಂಕಿದಾಗ ನಿನ್ನ ಕುಲಕೋಟಿ ಪಾವನ ’ ವೆಂದಳು. ಅದಕ್ಕೆ ಮಕರಂದೆ,

ಮೆಚ್ಚಿರುತಿಹಳು ಭಾವನ ರೂಪು ಕುಲಶೀಲ | ಹೆಚ್ಚೆಂದು ತನ್ನೆದೆಯೊಳಗೆ
ಒಚ್ಚೆಯುಗೊಡದಾಗ ತವರೂರ ಮೇಲಣ | ಹೆಚ್ಚುಗಾರಿಕೆಗಾಡುತಿಹಳು

ಏನು ನುಡಿವೆಯಕ್ಕ ನೀನೀತಗುರೆ ಸೋತು | ಓಸರೋರುವೆ ತವರೂರ
ಈ ನೃಪನಾಳ್ವಷ್ಟು ನೆಲನಿಲ್ಲ ನಮ್ಮವ | ಗೇನು ಕಡಿಮೆ ವಂಶದಲ್ಲಿ

ಮೇಳೆಯುಮೊಳಗೆ ಮುದ್ದುಂಟೊ ನಿನ್ನರಸನ | ತೋಳೊಳುಂಟೊ ವಶ್ಯಯಂತ್ರ
ಬೇಳುವೆಯುಂಟೊ ತಿಲಕದೊಳಲ್ಲದಿರೆಂತು | ಬೇಳಾಗಿ ನೀನು ಸಿಕ್ಕುವೆಯು

ಮಾನಹಾನಿಯು ನೆನೆದತ್ತರು ಕಣ್ಣೀರು | ತಾನು ಬಾರದು ನನಗಾಗ
ಏನ ಹೇಳುವೆ ನಿನ್ನ ಗಂಡನ ಮಾಯವ | ನೀನೊಲಿದುದು ಚೋದ್ಯವಲ್ಲ

ಮಕರಂದೆ ಈ ಮಾತನ್ನೆಲ್ಲ ಎಲ್ಲಿ ಕಲಿತಳೆಂದು ಅರಸ ಬೆರಗಾಗಿ ನೋಡುತಿದ್ದ. ನೋಡುತ್ತಿದ್ದು

ನೊಂದವಳದುದು ದಿಟ ಕುಸುಮಾಜಿ ಕರೆ ಮಕ | ರಂದಾಜಿಯುದು ಮನ್ನಿಸುವೆನು
ಎಂದನವಳಿಗೆ ತಂಗಿ ಬಾರೆಂದಳರಸಿ ಹೋ | ಗೆಂದು ಕೋಪಿಸಿದಳಾ ತರುಣಿ

ಜಗುಳ್ದ ಸೆಂಗಳನೆತ್ತಿ ತಕ್ಕಿಸಿ ಮೊಗವದ್ದ | ದೆಗೆಯು ಚುಂಬಿಸುತಿಹ ನಿನ್ನ
ಬಗೆಯು ಕಂಡರೆ ಮುಚ್ಚುನಗೆ ಬರುತಿಹುದೆಂದು | ನಗುವಳೊಡನೆ ಕಿಲಕಿಲನೆ

ಅಡ್ಡಮೋರೆಯನಿಕ್ಕಿ ನಗುವಳು ನೋಡುವ | ಳೊಡ್ಡೊಡ್ಡಿ ನುಡಿದೇಡಿಸುವಳು
ದೊಡ್ಡತನವೆ ಭಾವ ನಿನಗಿದೆಂಬಳು ರಾಯ | ನಡ್ಡಮಾಡದೆ ಕೇಳುತಿಹನು

ಎಲೆ ಧೂರ್ತೆ ನಿನಗೆ ಮನ್ನಣೆಯೀವೆನೆಂದರೆ | ಹಳಿವುದೇಕೆಮ್ಮ ನೀನೆಂದ
ಬಲುಧೂರ್ತ ಹೋಗು ಮನ್ನಣೆ ನಿನಗಿರಲೆಂ | ದುಳಿದಳದಕೆ ರಾಯ ನಕ್ಕ

ಅಹುದೆ ಅಹುದೆ ನಾನು ಧೂರ್ತ ನೀನೆ ಧೂರ್ತೆ | ಯದುದಾದರರ್ಥವೇನಾಯ್ತು
ಬಹುದೊ ನೋಡಿದರದು ಕಡೆಗೆಂದನುರೆ ಗಹ | ಗಹಿಸಿದಳವಳೋರೆಮೊಗದಿ

ಹೀಗೆಯೆ ಹುಸಿಜಗಳವಾಡುತ್ತ ಆಡುತ್ತ ಅರಸನೆಂದನು :

ಅರುದಿಂಗಳಿನ್ನು ಸೈರಿಸು ಮಕರಂದೆ ನಿ | ನ್ನರುಬಿನಾಟವ ನಿಲಿಸುವೆನು
ಬಿರುಬೆದರಾರಿಗೆ ಭಾವ ನೀನುರೆ ಕಂಡ | ತೆರನೇನು ಹೇಳು ಹೇಳೆನಗೆ

ಒಕ್ಕಿ ಹೇಳಲೆಬೇಕೆ ಬೇಕು ಕೇಳ್ ಸನ್ನಸಿ | ಪುತ್ರಿಕ್ಕಗೆ ಸವತಿ ಮಾಡುವೆನು
ನಕ್ಕಳೋಡಿದಳು ಕಂಬವ ಮರೆಗೊಂಡಳು | ಜಕ್ಕುಲಿ ಸಂತೋಷಗೊಳುತ

ಕುಸುಮಾಜಿಗೂ ಹರುಷವಾಯಿತು.

ಮಂಗಳೋತ್ಸವವಾದುದೆಂದು ನಗುತ ತನ್ನ | ತಂಗಿಯೊತ್ತಿಗೆ ತಾನೇ ಹೋಗಿ
ಅಂಗನೆ ಪುರುಷಗುತ್ತರವಿತ್ತ ಬೋಧವ | ಹಿಂಗಿಸೆಂದೊರೆದಳೋಜೆಯೊಳು

ಒಲ್ಲದಂತತ್ತಿತ್ತಲೊರೆವಳು ನಾಚ್ಚುವ | ಅಲ್ಲಲ್ಲಿ ನಿಲ್ಲುತಾ ಕನ್ನೆ
ಬಲ್ಲಿತಾಗಿರಲಕ್ಕ ತೆಗೆದರೆ ಬಂದಂತೆ | ಮೆಲ್ಲನೆ ಬಂದಳುಬಳಿಗೆ

ಪಾದಕೆರಗು ನಡೆಯೆಂಬಳೊತ್ತಿಗೆ ಹೋಗ | ಬಾರದಿಲ್ಲೆರಗೆಂಬಳಕ್ಕೆ
ಆದರಿಸುತ ನಿಲ್ಲಳೊತ್ತಿ ಬಗ್ಗಿಸಿದಂತೆ | ಮೇಡಿಸಕೊಡನೆರಗಿದಳು

ತಪ್ಪ ಕಾಲಿಸ್ತುದೆನ್ನು ತಂಗಿಯೆಂದಳು ಹೋಗು | ತಪ್ಪನಗಿಲ್ಲ ನಿಶ್ಚಿಸಿಯು
ತಪ್ಪದ ಗಿಳಿಯು ತಂತ್ರವ ಪೇಳ್ದರೆರಗಿದೆ | ಸೊಪ್ಪುಗೊಳ್ಳಿಸುತೆಪ್ಪಳೊಡನೆ

ಆ ವೇಳೆಗೆ

ಸಾಲದೆ ಇವಳೊಡನಾಟ ಭೋಜನಕಿನ್ನು | ವೇಳೆ ಮಿಗ್ಗಳಿಸಿದೆ ದೇವ
ಮೇಲಣ ನೆಲೆಯ ಮಾಳಿಗೆಗೆ ಚಿತ್ತೈಸೆಂದು | ಲೋಲಾಕ್ಷಿ ಬಿನ್ನವಿಸಿದಳು

ಅರಸನು ಪಕ್ಕದಲ್ಲಿದ್ದ ಅಮೃತವಾಚಕನ ಮೃತದವಿ ಮೇಲೆದ್ದ. ಆಹಾರವಾಯಿತು. ವಿಶ್ರಾಂತಿಯಾಯಿತು. ಬಳಿಕ ಕುಸುಮಾಜಿ

ಕನ್ನಡಿಯೊಳು ಮೊಳೆದೊಳೆದು ಮೊಗವ ನೋಡಿ | ಚೆನ್ನಾಗಿ ತಿಲಕವ ತಿದ್ದಿ
ಭಿನ್ನ ಕುಂತಳವ ಸಾಗಿಸಿಕೊಳುತೊಯ್ಯನೆ | ತನ್ನ ತಾ ನಕ್ಕಳುಬ್ಬಿನೊಳು

ನಗುತ ಭೂಪತಿಯೆಡೆಗೆ ನಲ್ಲಿಂದ ಮುಂದಣ | ಬಗೆಗದನವರೆ ಬಲ್ಲರದರ
ಸೊಗಸನುತಿಂತೆಂದು ನುಡಿದೆನಾದರೆ ಬಲು | ಹಗರಣವಹುದದಂತಿರಲಿ

—ಇಲ್ಲಿಗೆ ಇದು, 'ರಾಜಲಾವಣ್ಯಸಂಧಿ' ಮೊದಲಾಗಿ 'ಸನ್ಮಾನಸಂಧಿ' ಕಡೆಯಾಗಿ ಐದು ಸಂಧಿಗಳಲ್ಲಿ ಹರಡಿಕೊಂಡಿರುವ ಒಂದು ಹಿರಿಯುಲೆಯ ಕಿರಿಯ ಪರಿಚಯ.

**ಭರತ ಸುಭದ್ರಾ ದೇವಿಯನ್ನು ತನ್ನ ಸ್ತ್ರೀರತ್ನವಾಗಿ ಸಂಪಾದಿಸಿದುದು** ಕೂಡ ಈ ರತ್ನಾಕರದ **ಒಂದು ದೊಡ್ಡ ಅಲೆ;** ನಿಮಿಷ ನಿಮಿಷಕ್ಕೆ ಹೊಸ ನಗು ಚೆಲ್ಲುವ ನಿಲ್ಲದ ಅಲೆ.

ಭರತನ ತಾಯಿ ಯಶಸ್ವತೀ ದೇವಿ ಕಚ್ಛ ಮಹಾರಾಜನ ತಂಗಿ. ಕಚ್ಛ ಮಹಾರಾಜನ ಹೆಂಡತಿ ಯಶೋಭದ್ರಾ ದೇವಿ. ಈಕೆಯ ಮಕ್ಕಳೆ ಅಣ್ಣ ತಮ್ಮಂದಿರಾದ ನಮಿ ವಿನಮಿ ರಾಜರು, ಅವರ ತಂಗಿ ಸುಭದ್ರಾ ದೇವಿ. ಈಕೆಯನ್ನು ಭರತನಿಗೆ ಮದುವೆ ಮಾಡಿಕೊಡ ಬೇಕೆಂದು ಮೊದಲಿಂದ ತಾಯಿಗೂ ಇಷ್ಟ, ನಮಿ ವಿನಮಿಗಳಿಗೂ ಇಷ್ಟ. ಆದರೆ ಭರತ, ಚಕ್ರರತ್ನ ದೊರಕೊಂಡ ಮೇಲೆ, ಪೂರ್ವ ಸಾಗರ ಮೊದಲಾಗಿ ದಿಗ್ವಿಜಯಕ್ಕೆ ಹೊರಟು, ಮಾಗಧ ವರತನು ಪ್ರಭಾಸಾಮರರನ್ನು ಗೆದ್ದು, ವಿಜಯಾರ್ಧ ಪರ್ವತದ ವಜ್ರಕವಾಟ ವನ್ನು ಮುರಿದು, ಅಲ್ಲಿಯ ಬೆಂಕಿ ಆರುವವರೆಗೆ ಸೇನೆಯನ್ನು ಮ್ಲೇಚ್ಛ ಖಂಡಗಳ ಮೇಲೆ ಕಳುಹಿಸಿದಂತೆಲ್ಲ ನಮಿ ರಾಜನಿಗೆ ಚಿಂತೆ ಹೆಚ್ಚಾ ಯಿತು; ತನ್ನ ತಂಗಿಯನ್ನು ಭರತನಿಗೆ ಮದುವೆ ಮಾಡಿಕೊಡುವ ಮನಸ್ಸು ಹಿಂದಾಯಿತು. ಭರತೇಶ್ವರನ ವಿಜಯವನ್ನು ಕಂಡು ನಮಿ ರಾಜನಿಗೆ ಅಸಹನೆಯೆಂದಲ್ಲ. ಹೆಣ್ಣು, ಕೈ ಹಿಡಿದ ಮನೆಯಲ್ಲಿ ಸುಖ ವಾಗಿ ಬಾಳಬೇಕಾದರೆ ಬೀಯಗರು ಬೀಯಗರು ಸಮಾನ ಸಿರಿವಂತ ರಾಗಿರಬೇಕೆಂದು ಅವನಿಗೆ ಗೊತ್ತು. ರಾಜನಾದ ಭರತ ಮೊದಲು ತನಗೆ ಸಮಾನಸ್ಕಂಧನಾಗಿದ್ದ. ಈಗ ಭರತ ಚಕ್ರೇಶ್ವರನಿಗೆ ತಾನು ಕಾಣಿಕೆಯಿಕ್ಕಿ ಜೀಯಾ ಎನ್ನಬೇಕು; ಅವನಿಂದ ನೀನು, ತಾನು ಎನ್ನಿಸಿಕೊಳ್ಳಬೇಕು; ಇದುವರೆಗೆ 'ನಮಿರಾಜ'ನೆಂದೆನ್ನಿಸಿಕೊಳ್ಳು ತ್ತಿದ್ದವನು ಇನ್ನು ಮುಂದೆ ಕೇವಲ 'ನಮಿನಾಮ'ನೆನ್ನಿಸಿಕೊಳ್ಳಬೇಕು. ಇಂತಹ ಸ್ಥಿತಿಯಲ್ಲಿ ಹೆಣ್ಣನ್ನು ಕೊಡುವುದು ಒಣ್ಣವಲ್ಲವೆಂದು ನಮಿ ರಾಜ ನಿರ್ಧರಿಸಿದ. ಆದರೆ ಚಕ್ರವರ್ತಿಗೆ ಕಪ್ಪ ಕಟ್ಟದೆ ಬೇರೆ ದಾರಿ ಯಿಲ್ಲ. ಆದ್ದರಿಂದ ತಮ್ಮ ಖಚರ ನಗರಗಳ ದಕ್ಷಿಣ ಭಾಗದ ಖಚರ ಕುಮಾರಿಯರಲ್ಲಿ ಲಕ್ಷಣ ರೂಪವತಿಯರು ಹಲವರನ್ನು ದಾಕ್ಷಿಣ್ಯ ವಿನಯದಿಂದ ಒಯ್ದು ಅವನಿಗೆ ಧಾರೆಯೆರೆಯಿರೆಂದು ನಮಿರಾಜ ತನ್ನ

ತಮ್ಮ ವಿನಮಿಗೂ ಮಂತ್ರಿ ಸುಮತಿಸಾಗರನಿಗೂ ಆಜ್ಞೆಮಾಡಿ, ತಾನು ಮನೆಯಲ್ಲಿಯೇ ಉಳಿದ.

ವಿನಮಿಗೆ ಭರತ ಚಕ್ರೇಶ್ವರನಾದರೂ ತನ್ನ ಭಾವಾಜಿಯೆಂದು ತುಂಬ ಅಭಿಮಾನ. ಆದರೆ ಅವನಿಗೆ ರಾಜಾಂಗದ ಅರಿವಿಲ್ಲವೆಂದು ನಮಿರಾಜ ನುಡಿದು ಅವನ ಅಭಿಮಾನವನ್ನು ಅದುಮಿದ್ದ. ಆದರೆ ಅಣ್ಣನ ಆಜ್ಞೆಯಂತೆ ಖಚರ ಪುತ್ರಿಯರನ್ನು ಕೊಂಡು ಭರತನನ್ನು ಕಾಣಹೋದಾಗ, ' ಭಾವನ ಸಿರಿಗರ್ತಿಪಡುತ—ಮಾವನ ಮಗನ್ಸೈಸೆ–ತಡೆ ಯಿಲ್ಲದೊಳಗಣ ಚಾವಡಿಯನು ಪೊಕ್ಕನೊಡನೆ. ಉಡೆ ಸುತ್ತಲಿಲ್ಲ, ಸಾಷ್ಟಾಂಗವೆರಗಲಿಲ್ಲ ; ನಡೆದು ಬಂದೊಂದು ರತ್ನವನು ಬೆಡಗಿಂದ ಕಾಣ್ಕೆಯನಿತ್ತರ್ತಿಪಡುತ ಕೈ ಮುಗಿದನಾ ಸರಸ '. ಭರತನೋ ಅವ ನಿಗೆ ಒತ್ತಿನಲ್ಲೆ ಆಸನ ಕೊಡಿಸಿ ಕುಳ್ಳಿರಿಸಿದ. ಸುಮತಿಸಾಗರ ಮಂತ್ರಿ ಸಾಷ್ಟಾಂಗವೆರಗಿ ನಮಿರಾಜನ ಕಾಣ್ಕೆಯನ್ನು ನಿವೇದಿಸಿದ. ಭರತ ನಮಿರಾಜನ, ಅವನ ಮನೆಯವರ ಕುಶಲ ಕೇಳಿದ. ' ನಮಿರಾಜನೂ ಬರುತ್ತಿದ್ದ. ಆದರೆ ದೇವರು ಬರುವ ಮೊದಲು ಆತ ಒಂದು ಭ್ರಮರೀ ವಿದ್ಯೆ ಸಾಧಿಸತೊಡಗಿದ್ದ. ಆದ್ದರಿಂದ ಪಯಣ ಸ್ತಿಮಿತವಾಯಿತು. ಆತನಿಗೆ ಹೇಳಿ ನಾನೂ ಮಂತ್ರಿಯೂ ಬಂದೆವು ' ಎಂದು ವಿನಮಿ ತಂತ್ರ ದಿಂದ ನುಡಿದ. ಭರತನಿಗೆ ಆ ತಂತ್ರ ಗೊತ್ತಾಯಿತು. ಆದರೂ ಸುಮ್ಮನಿದ್ದ.

ನಮಿರಾಜ ಕಳುಹಿಸಿದ ಖೇಚರಿಯರೊಡನೆ ಭರತನ ವಿವಾಹ ವಾಯಿತು. ಕೆಲವು ದಿವಸ ವಿನಮಿಯನ್ನು ಅಲ್ಲಿಯೆ ಇರಿಸಿಕೊಂಡಿದ್ದು, ಕೊನೆಗೆ ಕಳುಹಿಸಿಕೊಡುವ ದಿವಸ ಪ್ರಧಾನಿ ಸಹಾಯರ ಸಭೆಗೆ ಅವನನ್ನು ಭರತ ಬರಮಾಡಿಕೊಂಡ. ಬರಮಾಡಿಕೊಂಡು, ' ವಿನಮಿ, ಈ ನಮಿನಾಮಧೇಯ ತನ್ನ ಪ್ರೌಢಿಮೆಯನ್ನು ನನ್ನಲ್ಲಿ ತೋರಿಸು ವನಲ್ಲವೆ ! ನನ್ನನ್ನು ಯಾರೆಂದು ತಿಳಿದನೊ ! ಅವನ ಭ್ರಮರೀ ವಿದ್ಯೆಯೂ ಈ ನಿನ್ನ ಸಟೆಯ ವಿನಯವೂ ಸಾಕು. ಮಾವನ ಮಗ ನಾದುದರಿಂದ ನಾವು ಸರಿಸಮಾನರೆಂಬ ವಿಚಾರ ಅವನಿಗೆ ಬೇಡ. ವ್ಯಂತರಿಗರನ್ನು ಅಟ್ಟಿ ಅವನಿಗೆ ಬುದ್ಧಿ ಕಲಿಸಬಲ್ಲೆ. ಆದರೆ ಅದೇನು

ದೊಡ್ಡ ಕೆಲಸವಲ್ಲ. ನಿನಗೆ ತಿಳಿದಿರಲಿ ಎಂದು ಹೇಳಿದೆ' ಎಂದ. ಅದಕ್ಕೆ ವಿನಮಿ ಸಲುಗೆಯಿಂದ

ಮತ್ತೇನು ದೇವರ ಸಾಮರ್ಥ್ಯ ನಮ್ಮನೆ । ವೊತ್ತಬೇಕ್ಕೆಸೆ ಸೋದರರ
ಅತ್ತೆಯ ಮಗನಿಂದ ಹರುಷಿಸಿ ನಗಬಾರ । ದತ್ತೆ ವೆಂದೆನಿಸಬೇಕೆಂದಾ

ಅದಕ್ಕೆ ಭರತೇಶ್ವರ 'ಹೋ, ವಾಕ್ಯಪ್ರೌಢಿಯಿಂದ ನಮ್ಮನ್ನು ಚಾಳಿಸಬಂದೆಯಲ್ಲವೆ ?

ನಮಿಯೆಂದು ವಿನಮಿಯೆಂದೆಂದು ಮಾವಾಜಿಯು । ರಮರಿಸಿ ಪೆಸರಿತ್ತರರಿಯ
ನಮಿಸಬೇಡವೆ ನೀವು ನನಗೆ ನಿಮ್ಮಯ್ಯಂದಿ । ರಮಳ ವಾಕ್ಯಗಳ ಮೀರುವರೆ

ಭರತೇಶನೆಂದೆನಗಪ್ಪಾಜಿ ನಾಮವ । ಕರುಣಿಸಲಾತನೆಂದಂತೆ
ಭರತೋರ್ವಿಯೆಲ್ಲವನಾಳ್ವೆನ್ನೆ ನೋಡು ನೀ । ವರರೆ ಬಾಹಿರರಾದಿರೆಂದಾ

ನೀನು ನಮ್ಮವನೇ, ವಿನಮಿ. ನಿನ್ನ ಅಣ್ಣ ಮಾತ್ರ ನಮಗೆ ಅನ್ಯ. ಅವನಿಗೆ ಏನು ಮಾಡುವೆನೆಂದು ಈಗಲೆ ಹೇಳಬಾರದು. ಮುಂದೆ ತಿಳಿಯುತ್ತದೆ' ಎಂದು ಹೇಳಿ, ತನ್ನ ಸಖರಾದ ನಾಗರ ದಕ್ಷಿಣ ವಿಟ ವಿದೂಷಕಾದಿಗಳ ಅಭಿಮತವನ್ನೂ ಕೇಳಿದ. 'ನಿನ್ನ ಮಾತು ಯಾರಿಗೆ ತಾನೆ ಒಪ್ಪಾಗದು? ಇಂದು ಬಾರದ ನಮಿರಾಜ ನಾಳೆ ಬರುವನು. ಸೈರಿಸು' ಎಂದ ನಾಗರ. 'ವಿನಮಿ ರಾಜನಿಗೆ ಅವರ ಅಣ್ಣನ ಇರವನ್ನು ದೇವರು ಸೂಚಿಸಿದ ಮೇಲೆ ಅವನು ಬರದೆ ಹೋಗುವನೆ!' ಎಂದ ಅನುಕೂಲನಾಯಕ. 'ನಮ್ಮಲ್ಲೇನು ಉಡಿಗೆ ತೊಡಿಗೆಗಳಿಲ್ಲವೆ? ಸರಿಯಾದ ಉಡುಗೊರೆ ಕಳುಹಿಸಬಾರದಾಗಿತ್ತೆ ನಮಿರಾಜ?' ಎಂದ ವಿಟ. 'ಜೀವರತ್ನಗಳಲ್ಲಿ ಉತ್ತಮವಾದುದನ್ನು ಕಳುಹಿಸದೆ ನಿರ್ಜೀವ ರತ್ನ ಕಳಿಸಿದುದು ಅಕ್ರಮ' ಎಂದ ವಿಟನ ಮಾತು ಕೇಳಿ, ವಿನಮಿಗೆ ಸ್ತ್ರೀರತ್ನದ ಸೂಚನೆ ಅರ್ಥವಾಯಿತು. 'ನಮಿರಾಜನಿಗಲ್ಲ, ವಿನಮಿಗೇ ಪಟ್ಟ ಕಟ್ಟಬೇಕು' ಎಂದ ಶಠನಾಯಕ. ವಿನಮಿಯ ಚಿತ್ತ ಬೆದರಿತು. 'ಹಿತಮಾಡುವವನೆ ಬಂಧು, ಬಂಧುವಾದರು ಅತಿನೋಯಿಸುವವನು ವೈರಿ. ವೈರಿಯನ್ನು ಚ್ಯುತಮಾಡಬೇಕು' ಎಂದ ಶಠ. ಕುಟಿಲನಾಯಕ 'ಠಕ್ಕಿನ ನಂಟನಿಗೆ ಠಕ್ಕೇ ಮಾಡಬೇಕು. ಅವನನ್ನು ಒಂದು ದಿಕ್ಕಿಗೆ ತೆಗೆದಿಕ್ಕಬೇಕು' ಎಂದು ವಿನಮಿಯ ಸೊಕ್ಕೋಡುವಂತೆ ನುಡಿದ.

‘ ನೆಲದ ಮೇಲಿದ್ದುದರಿಂದ ಅವನಿಗೆ ಬಲುಬೆಟ್ಟದಂತೆ ಸೊಕ್ಕು, ಅವನನ್ನು ನೆಲದೊಳಗೆ ಇರಿಸಬೇಕು ’ ಎಂದ ಪೀಠಮರ್ದಕ. ಅದಕ್ಕೆ ವಿದೂಷಕ ‘ ತೆಗೆಯಲೂ ಬೇಡ, ಇರಿಸಲೂ ಬೇಡ. ಈಗ ಅವನು ಕೂತ ಭೂಮಿಗೂ ಭೂಮಿ ಸೋಂಕಿದ ಆಸನಕ್ಕೂ ತೆಗೆಯಬಾರದ ಹಾಗೆ ಮಂತ್ರಿಸಿದರೆ ಸಾಕು ’ ಎಂದ. ಅದಕ್ಕೆ ಅದುವರೆಗು ಸುಮ್ಮನಿದ್ದ ದಕ್ಷಿಣನಾಯಕ ‘ ಏನು ಕರ್ಕಶ ಹೇಳುತ್ತಿದ್ದೀರಿ, ನೀವು ? ನಮಿರಾಜ ನಮ್ಮ ಅರಸನಿಗೆ ಎರವೆ ? ನೀವು ಹೀಗೆ ವಿರಸ ನುಡಿಯುವುದು ಉಚಿತವೆ ? ನಾಳೆ ಬಾರದೆ ಇರನು. ಸುಮ್ಮನಿರಿ. ಇಂದು ಪ್ರೀತಿಯಿಂದ ತಮ್ಮನನ್ನು ಕಳುಹಿದ. ನಾಳೆ ಸಂತೋಷದಿಂದ ತಾನೇ ಬರುತ್ತಾನೆ ’ ಎಂದ. ಅದುವರೆಗೆ ಎದೆ ನೀವಿಕೊಳ್ಳುತ್ತಿದ್ದ ವಿನಮಿಯ ಎದೆ, ಈ ಮಾತುಕೇಳಿ, ಹಸಹಸನಾಯಿತು. ಪುನಃ ದಕ್ಷಿಣನು ‘ ಇದುವರೆಗೆ ರಾಜರು ತಂದ ಸಾರವಸ್ತುಗಳನ್ನು ಹಿಂದಿಕ್ಕಿಡಿ. ನಾಳೆ ನಮಿರಾಜ ಉತ್ತಮ ವಸ್ತುವನ್ನು ತಂದುಕೊಡುವನು’ ಎಂದ. ಅದಕ್ಕೆ ಶಠ ‘ ನಮ್ಮ ಚಕ್ರೇಶನಿಗೇನು ವಸ್ತುವಿನಾಸೆಯೆ ? ಏನು ಸುಮ್ಮನೆ ವಿಸ್ತರಿಸುವೆ ’ ಎಂದು ಸುಳ್ಳುಜಗಳ ತೆಗೆದ. ಅದಕ್ಕೆ ಭರತ ‘ ನಿಮ್ಮ ಮಾತು ನಿಲ್ಲಿಸಿರಿ. ಅವನು ಕೊಡುವುದೇನು ? ನಾವು ಕೊಂಬುದೇನು? ಅವನು ಬಂದರೆ ಸರಿ. ಬರದಿದ್ದರೆ ನಮಗೆ ನೋವು ’ ಎಂದ.

ಖೇಚರಮಂತ್ರಿಗೆ ರಾಯನ ಅಂತಸ್ಥ ಅರ್ಥವಾಯಿತು. ‘ದೇವರು ಹೇಳುವುದು ನ್ಯಾಯ. ತಾವು ವಿನಯಾರ್ಥ ಅರಸನನ್ನು ಕಾಣಬೇಕೆನ್ನುವಿರಿ. ವಸ್ತುವಿನದೇನು ಘನತೆ ? ನಾನೆ ಅವನ್ನು ಬೇಗ ಅನುಬಂಧಿಸುತ್ತೇನೆ ’ ಎಂದ. ವಿನಮಿ ಕೂಡ ‘ ಭಾವಾಜಿ, ನಿನ್ನ ಚಿತ್ತವನ್ನು ನೋಯಿಸುವುದು ಏನು ಬಲ್ಲವಿಕೆ ? ನಿನಗೆ ಸಂತೋಷವಾಗುವಂತೆ ನಾವು ಮಾಡುವೆವು ’ ಎಂದ. ಅದಕ್ಕೆ ಭರತ ‘ಅದಕ್ಕಲ್ಲ, ವಿನಮಿ. ನಿನ್ನಣ್ಣ ತನ್ನ ಹೆಮ್ಮೆ ನನ್ನಲ್ಲಿ ತೋರಬೇಕೆ ? ನಿನ್ನ ತಾಯಿ ನನ್ನನ್ನು ಚಿಕ್ಕಂದಿನಲ್ಲಿ ಎತ್ತಿ ಮುದ್ದಾಡಿದಳು. ಆ ಅತ್ತ್ಯಾಜಿಗಾಗಿ, ನಮ್ಮ ಮಾವಾಜಿಗಾಗಿ ನಾನು ನಿನ್ನಣ್ಣನ ಅವಿನಯವನ್ನು ಸೈರಿಸುತ್ತೇನೆ ’ ಎಂದ. ಆ ಮಾತನ್ನೇ ಹಿಡಿದರು, ವಿಟಶಠಾದಿಸಖರು :

‘ ಇದಕ್ಕಿಂತ ನಿಮಗೆ ಇನ್ನೇನು ತೇಜಬೇಕು, ವಿನಮೀಂದ್ರ? ಅತ್ತ್ಯಾಜಿ ಮಾಪಾಜಿಯರೆಂಬ ಗೌರವದ ಸಂಬೋಧನೆ ಬೇರಾವ ಹೆಣ್ಣು ಕೊಟ್ಟ ವರಿಗೂ ಬಂದುದಿಲ್ಲ. ಇಂಥವನಿಗೆ ನೀವು ಎರವಾಗಬಹುದೆ ? ’ ಎಂದರು. ಅದೇ ಸಮಯದಲ್ಲಿ ಭರತನ ಮಂತ್ರಿ ‘ ನಮಿರಾಜನಿಗೆ ನಾನು ಬಿನ್ನವಿಸಿದೆನೆನ್ನು. ಅಥವಾ ಅದು ಕ್ರಮವಲ್ಲ, ಮಮತೆಯಿಂದ ಬಂದು ತನ್ನ ಭಾವನನ್ನು ಕಾಣಹೇಳು ’ ಎಂದ. ಅದೆ ಮಾತನ್ನು ಹಿಡಿದು ಆ ಲೋಲಸಖರು, ‘ ತನ್ನ ಒಡೆಯನಿಗೆ ದೊರತು ಇತರರಿಗೆ ಬಿನ್ನಹವೆನ್ನನು, ಈ ಮಂತ್ರಿ. ನಿಮ್ಮಣ್ಣನಿಗೆ ಇದಕ್ಕಿಂತ ಅಧಿಕ ಇನ್ನೇನು ಬೇಕು ? ಕೊಟ್ಟೊ ಕೊಂಡೂ ಹೊಸದಾಗಿ ಅನ್ಯರು ಬೀಯಗತನಕ್ಕೆ ಬರುತ್ತಿದ್ದರೆ, ನೀವು ಹುಟ್ಟುಬೀಯಗರು ಹೀಗೆ ಹೊರಗಾಗಬಹುದೆ ? ’ ಎಂದರು. ಭಾವಾಜಿಯ ಮನಸ್ಸಿಗೆ ಸಂತೋಷ ವಾಗುವಂತೆ ಮಾಡುವದಾಗಿ ವಿನಮಿ ಮಾತುಕೊಟ್ಟ. ಭರತ ಅವನನ್ನು ವಿಶ್ವಾಸದಿಂದ ಒತ್ತಿಗೆ ಕರೆದು, ಉಡುಗೊರೆ ಕೊಟ್ಟು, ನಮಿಗೂ ಯಶೋಭದ್ರಾದೇವಿಗೂ ಉಡುಗೊರೆಗಳನ್ನು ಕೊಟ್ಟು, ಅವನನ್ನು ಆಲಿಂಗಿಸಿದ. ಅದನ್ನು ಕಂಡು ಭರತನ ಸಖರು ‘ ಈ ಭಾಗ್ಯ ಸಾಲದೆ? ಭರತ ಹೀಗೆ ಬೇರೆ ರಾಜರನ್ನು ಆಲಿಂಗಿಸುವನೆ ? ಈ ಲೇಸಿಗೆ ಅಧಿಕ ಲೇಸನ್ನು ನೀವು ಎಸಗಿ ’ ಎಂದರು. ವಿನಮಿ ಕೈಮುಗಿದ. ಖೇಚರ ಮಂತ್ರಿ ಅಡ್ಡಬಿದ್ದ. ಇಬ್ಬರೂ ವಿಮಾನವೇರಿ ಹೊರಟರು. ‘ ಸುಭದ್ರಾ ದೇವಿಯನ್ನು ಮದುವೆಮಾಡಿ ಕೊಡದೆ ಚಕ್ರಿ ಬಿಡುವಂತಿಲ್ಲ. ನಮಿರಾಜ ನನ್ನು ಒಡಂಬಡಿಸಬೇಕು ’ ಎಂದು ಮಾತನಾಡಿಕೊಳ್ಳುತ್ತ ಹೋದರು.

ಅವರು ಅತ್ತ ಹೋದಮೇಲೆ ಭರತ ತನ್ನ ಸಖರನ್ನು ನಿಟ್ಟಿಸಿ ‘ ಚೆನ್ನಾಗಿ ಅಂಜಿಸಿದಿರಿ ! ಅವರೂ ಚೆನ್ನಾಗಿ ಅಂಜಿದರು ! ’ ಎಂದು ಅವರನ್ನು ಮನ್ನಿಸಿದ. ಅವರು ಕೂಡ ‘ ನಂಟುತನದ ಸಲುಗೆಯ ಮೇಲೆ ಕುಂಟಣಿಕೆಯಿಂದ ಕಾರ್ಯ ಗಂಟಿಕ್ಕಿಕೊಂಡಿರಲು ಅಂಜಿಸಿ ನುಡಿದೆವು ’ ಎಂದು ಇದ್ದುದನ್ನು ಇದ್ದಂತೆ ಹೇಳಿದರು. **ಹೇಳಿ,** ‘ ಬಂದ ದಿನವೆ ವಿನಮಿಯನ್ನು ಬೆದರಿಸದೆ ಗುಟ್ಟಿಂದ ಮುಚ್ಚಿಕೊಂಡಿದ್ದು ಮದುವೆಯಾದ ಮೇಲೆ ಈ ಹೊತ್ತು ಹೇಳಿದನಲಾ ! **ನಮಿರಾಜನ**

ತಂಗಿಯ ಮೇಲೆ ತನಗೆ ಒಲ್ಲುಮೆಯಾದರೂ, ಹೆಣ್ಣೆಂಬ ಹೆಸರು ಹೇಳದೆ ಆ ಹೆಣ್ಣು ಬರುವಂತೆ ಮಾಡಿದನಲಾ!' ಎಂದು ಮೆಚ್ಚಿದರು.

ಇತ್ತ ಭರತ ತನ್ನ ದಿಗ್ವಿಜಯವನ್ನು ಮುಂದುವರಿಸುತ್ತಿರಲು, ಅತ್ತ ವಿನಮಿಯೂ ಸುಮತಿಸಾಗರನೂ ಚಕ್ರಿಗೆ ತನ್ನ ತಂಗಿಯನ್ನು ಕೊಡು ವಂತೆ ನಮಿರಾಜನಿಗೆ ಹೇಳತೊಡಗಿದರು. ತನ್ನ ತಂಗಿಯನ್ನು ಭರತ ನಿಗೆ ಕೊಡಲು ನಮಿಯದೇನೂ ಅಭ್ಯಂತರವಿದ್ದಿಲ್ಲ. ಆದರೆ ಹೆಣ್ಣನ್ನು ಕೊಂಡೊಯ್ದು ಕೊಡುವುದು ತನ್ನ ರಾಜಗೌರವಕ್ಕೆ ಕಡಿಮೆ, ಆತನೆ ತನ್ನೂರಿಗೆ ಬಂದರೆ ಕೊಡಬಹುದು—ಎಂದು ಅವನ ಮನಸ್ಸು. ಇತರ ರಾಜರು ತಮ್ಮ ಮಾನಹಾನಿಯನ್ನು ಎಣಿಸದೆ ಕನ್ಯೆಯರನ್ನು ಕೊಂಡೊಯ್ದರೇನು, ತಾನು ಅಂತು ಕೊಡೆನೆಂದು ಅವನ ಹಟ. ತಮ್ಮನೊಡನೆಯೂ ಮಂತ್ರಿಯೊಡನೆಯೂ ಅವನು ಕಳುಹಿಸಿದ ಬೆದ ರಿಕೆಯ ಮಾತುಗಳಿಗೇನಂತೆ! ಅವನು ಬಂದಾಗ ನೋಡಿಕೊಳ್ಳೋಣ!- ಎಂದು ಅವನ ದೃಢ. ತಮ್ಮನೂ ಮಂತ್ರಿಯೂ ಅಲ್ಲದೆ ಆಪ್ತರೂ ಎಷ್ಟೋ ಹೇಳಿದರು, ನಮಿರಾಜ ಜಗ್ಗಲಿಲ್ಲ. ಕಡೆಗೆ ಯಶೋಭದ್ರೆಯೇ ಅವನನ್ನು ಕರೆಕಳುಹಿದಳು, ಭರತನಿಗೆಂದೇ ಬೆಳೆದ ಹೆಣ್ಣನ್ನು ಕೊಡ ಬೇಕೆಂದಳು. ಅವನು ಎಷ್ಟಾದರೂ ಚಕ್ರಿ, ಅವನಲ್ಲಿಗೇ ತಾವು ಹೋಗಬೇಕೆಂದು, ತಾಯಿ. ಅವನು ಇಲ್ಲಿಗೇ ಬಂದು ತಾಳಿ ಬಂದಿ ಯಾದ ಹೊರತು ತಂಗಿಯನ್ನು ಕೊಡುವುದಿಲ್ಲೆಂದು, ನಮಿ. ತಾಯಿ ಎಷ್ಟೆಷ್ಟೋ ಹೇಳಿದಳು, ಕಡೆಗೆ ತಪಸ್ಸಿಗೆ ಹೋಗುವೆನೆಂದು ಹೆದರಿಸಿ ದಳು. ನಮಿ ಕೂಡ, ತಂಗಿಯನ್ನು ಭರತನಲ್ಲಿಗೇ ಒಯ್ದರೆ, ತಾನು ತಪಸ್ಸಿಗೆ ಹೋಗುವುದಾಗಿ ಹೆದರಿಸಿದ. ಕಡೆಗೆ ತಾಯೇ ಸೋತಳು. 'ಭರತೇಶ್ವರ ಇಲ್ಲಿಗೆ ಬಾರ. ಆದರೆ ಇಲ್ಲಿಗೆ ಆಪ್ತರನಟ್ಟಿ ತಾಳಿಬಂದಿ ಕಟ್ಟಿಸಿದರೆ ತಂಗಿಯನ್ನು ಕೊಡುವೆಯ?' ಎಂದಳು. ಅಷ್ಟಾದರೂ ಸಾಕು, ಎಂದು ನಮಿರಾಜ ಒಪ್ಪಿದ. ಆಗ ಯಶೋಭದ್ರೆ ಭರತನನ್ನು ಚಿಕ್ಕ ದಿನದಿಂದ ಬಲ್ಲ ಕಾಳಿಂದಿಗೂ ತನ್ನ ಮಗಳ ಮೇಳದ ಮಧು ವಾಣಿಗೂ ಹೇಳಬೇಕಾದುದನ್ನು ಹೇಳಿಕೊಟ್ಟು ಸುಮತಿಸಾಗರನೊಡನೆ ಭರತನಲ್ಲಿಗೆ ಕಳಿಸಿದಳು.

ಬಂದ ಕಾಳಿಂದಿಯನ್ನು ಭರತ ಗುರುತಿಸಿದ. ಕಾಳಿಂದಿ ಅವನಿಗೆ ಮಧುವಾಣಿಯ ಪರಿಚಯ ಮಾಡಿಕೊಟ್ಟಳು. ಕಾಳಿಂದಿ ಮಧುವಾಣಿಯರಿಬ್ಬರೂ ಭರತ ಕೇಳಿದ ಕುಶಲದ ಪ್ರಾತನ್ನೆ ಮೂಲ ಮಾಡಿಕೊಂಡು, ಸುಭದ್ರಾದೇವಿಯ ಗುಣಕಥನಮಾಡಿ, ಅವಳನ್ನು ಭರತನಿಗೆ ಕೊಡುವ ವಿಷಯವಾಗಿ ನಮಿರಾಜನಿಗೂ ಯಶೋಭದ್ರೆಗೂ ನಡೆದುದನ್ನು ತಿಳಿಸಿದರು. ನಮಿರಾಜನ ರಾಜಾಂಗರೂಢಿಗೂ ತನ್ನ ಅತ್ತ್ಯಾಜಿಯ ಗುಣಕ್ಕೂ ಮೆಚ್ಚಿದ, ಭರತ. ಆದರೂ ಅದನ್ನು ಹೊರಗೆ ತೋರದೆ, 'ಮೊದಲು ಎಲ್ಲರೂ ಕೊಟ್ಟಂತೆ ಹೆಣ್ಣು ಕೊಡಲಿ. ಈ ಬಿನ್ನಾಣ ಸಲ್ಲದು' ಎಂದ. 'ಈ ಮಾತು ಕೇಳಿದರೆ ನಿನ್ನ ಅತ್ತೆಯ ಮುಖ ಖಿನ್ನವಾಗದೆ?' ಎಂದಳು ಕಾಳಿಂದಿ. 'ಹಾಗಾದರೆ, ಅತ್ತೆಯವರ ಮಾತ ಮುರಿಯುವೆನೆ? ಸಂತತಿಭೂಪರನ್ನು ಕಳಿಸಿ ತಾಳಿ ಬಂದಿ ಕಟ್ಟಿಸುತ್ತೇನೆ' ಎಂದ ಭರತ. ಅವರು ಆ ಸಂತಸದ ಸುದ್ದಿ ತೆಗೆದುಕೊಂಡು ಹಿಂದಿರುಗಿದರು.

ತಾಳಿಬಂದಿ ಕಟ್ಟಲು ಬಂದ ಸಂತತಿಭೂಪರನ್ನು ನಮಿರಾಜ ಯಥೇಷ್ಟವಾಗಿ ಉಪಚರಿಸಿದ. 'ಇಷ್ಟೇಕೆ ತವಕ? ಇನ್ನೊಂದು ನಾಲ್ಕು ದಿನ ಇರಿ' ಎಂದು ಹದಿನಾರು ದಿನ ಅವರನ್ನು ತಡೆದು ತಣಿಸಿದ. ಬಳಿಕ ವರಲಗ್ನದಲ್ಲಿ, ಭರತೇಶ ಕಳುಹಿಸಿದ ಉಂಗುರ, ತೊಂಡಿಲು, ಬಂದಿ, ಹೊಂಗರೆಯಂಬರ ಎಂಬ ನಾಲ್ಕನ್ನು ಆ ಪುಣ್ಯಾಂಗನೆಗೊಪ್ಪಿಸಿದರು. 'ದೊರೆಗಳಿಂದೆಲ್ಲ ಕಪ್ಪ ಕೊಂಡ ಚಕ್ರಿ ನಿನ್ನ ತಂಗಿಗೆ ಕಪ್ಪ ಅಟ್ಟಿದ. ಮೊನೆಗಾರ ನೀನೊ? ನಮ್ಮರಸನೊ?' ಎಂದು ನಮಿರಾಜನನ್ನು ವಿನೋದಮಾಡಿದರು, ಭರತನ ಸಖರು. 'ನಿನ್ನ ಛಲ ನಿನಗೆ ದಕ್ಕಿತು' ಎಂದ, ಚಕ್ರಿಯ ಮಂತ್ರಿ. ಉಂಗುರು ಡಿಗೆಯಾಯಿತು, ಇನ್ನು ಭರತನಲ್ಲಿಗೆ ಹೋಗಬಹುದಲ್ಲ—ಎಂದರು ಎಲ್ಲರೂ. ಅದಕ್ಕೆ ನಮಿ 'ನಾಳೆ ವಿನಮಿ ಬಂದು ಮದುವೆ ಮಾಡಿ ಕೊಡುತ್ತಾನೆ. ನೀವು ಈ ಹೊತ್ತು ಹೊರಡಿ' ಎಂದ. 'ಆದರೆ ಹದಿನಾರು ದಿನ ನೀನು ಹೇಳಿದಂತೆ ಇಲ್ಲಿದ್ದು ಈಗ ನೀನಿಲ್ಲದೆ **ಹೋದರೆ** ರಮ್ಯವೆ?' ಎಂದರು ಭರತನವರು. '**ನಾನು ಹೇಗೆ ಬರಲಿ? ಭರತ**

ನನ್ನನ್ನು ಕಂಡರೆ ನಮಿಯೆಂದು ಹೆಸರಿಟ್ಟು ಕರೆಯುವನು, ನೀನು ತಾನೆನ್ನುವನು. ಷಟ್ಖಂಡಪರಸನಿಗೆ ಕಾಣಿಕೆ ಬೇಕಾದರೆ ಕೊಡುತ್ತೇನೆ. ಆದರೆ ನನ್ನನ್ನು ನಮಿರಾಜನೆಂದು ಕರೆಯಬೇಕು, ನೀವು ತಾವೆನ್ನಬೇಕು' ಎಂದು ನಮಿರಾಜ ಹೇಳಿದ. ಮಂತ್ರಿಗಳು 'ಈ ಛಲ ಬೇಡ, ಭರತನ ಗಂಭೀರಕ್ಕೆ ಯಾರು ಸಾಟಿ' ಎಂದು ಎಷ್ಟೆಷ್ಟೋ ಹೇಳಿದರು. ಕಡೆಗೆ 'ಪ್ರೀತಿಯಿಂದ ನಮಿರಾಜ ಎಂದು ಕರೆದರೆ ಸಾಲದೆ? ನೀವು ತಾವೆಂಬ ನುಡಿ ಸಾಕು. ಬಾ' ಎಂದರು. ಹಾಗೂ ಆಗಲಿ ಎಂದು ನಮಿರಾಜ ಒಪ್ಪಿದ. ಹಿಂದೆ ತಾಯಿಯ ಮಾತಿಗೆ ಅರ್ಘ ಇಳಿದುಬಂದಂತೆ ಈಗಲೂ ಹಿತವರ ಮಾತಿಗೆ ಬಾಗಿದ. ನಮಿರಾಜ ನಾಳೆ ಬರುವನೆಂದು ಭರತನ ಕಡೆಯವರು ಸುಭದ್ರಾದೇವಿಯೊಡನೆ ಹಿಂದಿರುಗಿದರು.

ಇತ್ತ ನಮಿರಾಜ ತಾಯ ಬಳಿ ಹೋಗಿ 'ಅಮ್ಮಾಜಿ, ಭರತನಿಗೆ ತಂಗಿಯನ್ನು ಕೊಡು ಎಂದಿರಲ್ಲ. ಹೀಗೆ ದೊಡ್ಡ ದೊಡ್ಡವರು ಬಂದು ಉಂಗುರುಡಿಗೆ ಮಾಡಿದಾಗ ದೊಡ್ಡದಾಗಿ ಹೆಣ್ಣು ಕೊಡದೆ, ಅಡ್ಡೆಯ ಹೊರೆಯಂತೆ ಕೊಂಡೊಯ್ದು ಕೊಡಲು ಕಷ್ಟಾಯದ ಒಡವೆಯೆ, ಹೆಣ್ಣು? ಹೀಗೆ ಅಲ್ಲದೆ, ಏಕಾಂತದಲ್ಲಿ ಚಕ್ರಿಗೆ ಹೆಣ್ಣು ಅಟ್ಟಿದ್ದರೆ ನನ್ನ ತಂಗಿಯನ್ನು ಮಿಕ್ಕ ಹೆಂಗಸರಿಗಿಂತ ಹೆಚ್ಚು ಕಾಣುತ್ತಿದ್ದನೇನು? ಹತ್ತು ರೊಳಗೆ ಹನ್ನೊಂದಾಗಿ ಕಾಣುತ್ತಿದ್ದ. ಈಗ, ಲೆಕ್ಕವಿಲ್ಲದ ಸವತಿಯರ ನಡುವೆ ನನ್ನ ತಂಗಿ ಹೊಕ್ಕು ಬಾಳುವಾಗ, ಕಕ್ಕಸದ ಮಾತು ಬಂದಾಗ ನಾಲಗೆ ಸಿಕ್ಕುವಂತೆ ಮಾಡಿದ್ದೇನೆ. ನೀವು ಇದನ್ನು ನೋಡದೆ, ಭರತ ನಿಗೆ ಹೆಣ್ಣು ಕೊಡದಿದ್ದರೆ ಮನೆ ಬಿಟ್ಟು ಹೋಗುವೆನೆಂದಿರಲ್ಲ. ಈಗ ಸಮ್ಮೋದವಾಯಿತೆ?' ಎಂದ. ಅದಕ್ಕೆ ಯಶೋಭದ್ರಾದೇವಿ ನಕ್ಕು 'ಹೌದಣ್ಣ. ಹೆಣ್ಣಿನ ಬುದ್ಧಿ ಬೂದಿಯ ಕೂಡಿತೆಂಬ ಸುದ್ದಿಯಂ ತಾಯಿತು. ನೀನು ನಮ್ಮ ವಂಶವನ್ನು ಉದ್ಧರಿಸಿದೆ' ಎಂದಳು.

ಇತ್ತ ಭರತನ ಮಂತ್ರಿ ಮುಖ್ಯರು ಬಂದು, ಅಲ್ಲಿ ನಡೆದುದನ್ನೆಲ್ಲ ತಿಳಿಸಿ 'ನೀವು ತಾವೆನಿಸಬೇಕೆಂದನು. ಅದನ್ನು ನಾವು ಬಿಡಿಸಿದೆವು. ಅವನನ್ನು ನೀನು ನಮಿರಾಜ ಎಂದು ಕರೆಯಲು ಒಪ್ಪಬೇಕು' ಎಂದರು.

ಕ್ಷತ್ರಿಯರ ಕುಲಮೋಜೆಯನ್ನು ಕಾಪಾಡುತ್ತಿದ್ದ ನಮಿರಾಜನ ಗುಣಕ್ಕೆ ತಾನು ಮೆಚ್ಚಿದರೂ ಭರತ ಅದನ್ನು ಹೊರಗೆ ತೋರಲಿಲ್ಲ, ಅವನನ್ನು ರಾಜನೆಂದು ಕರೆಯಲು ಒಪ್ಪಲಿಲ್ಲ. 'ರಾಣಿಯ ಅಗ್ರಜನಿಗೊಂದು ತೇಜ ಕೊಟ್ಟರೆ ಊನವಿಲ್ಲ'ವೆಂದರು ಸಖರು. ಕಡೆಗೆ ಭರತ 'ಕೊಡ ಬಾರದು. ಆದರೆ ನಿಮ್ಮ ನುಡಿಗಳ ಕೆಡಿಸಬಾರದು. ಇದೊ ಕೊಟ್ಟೆ' ಎಂದ. ಎಲ್ಲರಿಗೂ ಸಂತೋಷವಾಯಿತು.

ಮೂರನೆಯ ದಿನ ನಮಿರಾಜ ಬಂದ. ತನ್ನನ್ನು ಭರತೇಶ ಸರಿ ಗಾಣ, ತನ್ನ ಅರಸಿಯರನ್ನು ಭರತನರಸಿಯರು ಸರಿಗಾಣರು, ಎಂದು ಹೆಮ್ಮಕ್ಕಳನ್ನು ಮನೆಯಲ್ಲೆ ಉಳಿಸಿ ಬಂದ. ಬರುವಾಗ ಉದ್ದಕ್ಕೂ ಚಕ್ರವರ್ತಿಯ ಪಾಳೆಯದ ವಿಸ್ತಾರವನ್ನೂ ವೈಭವವನ್ನೂ ನೋಡಿ ನೋಡಿ, ಅವನ ವಿಷಾಯ ನುಚ್ಚುನೂರಾಯ್ತು, ಅವನಿಗೆ ಮಂಕು ಬಡಿಯಿತು, ವಿಸ್ಮಯವಾಯಿತು. 'ನನ್ನ ಮೂಳಗರ್ವವನ್ನು ಸುಡ ಬೇಕು' ಎಂದು ಎದೆಯೊಳಗೆನ್ನಿಸಿತು. 'ಕಂಡಲ್ಲದೆ ಯಾವುದೂ ಸೊಗಸಲ್ಲ. ಗಂಡೆಂದರೆ ಇವನಲ್ಲದಿಲ್ಲ. ಇವನೊಡನೆ ಸರಿತೇಜವೆಂದು ನಾನು ಛಲಿಸಿದುದು ಸಲ್ಲ' ಎಂದು ಗರ್ವವನ್ನು ಬಿಟ್ಟು, ನಮಿರಾಜ ವಿನಯದಿಂದ ಭರತನ ಆಸ್ಥಾನಕ್ಕೆ ಬಂದ. 'ನಮಿರಾಜ' ಬಂದನೆಂದು ವೇತ್ರಧರರು ವಿಜ್ಞಾಪಿಸಿದರು. ನಮಿರಾಜ ಬಂದು ಕಾಣಿಕೆಯಿಕ್ಕಿ ಕೈಮುಗಿದ. ಭರತ ಅವನನ್ನು ತೆಗೆದಪ್ಪಿ ಪಕ್ಕದಲ್ಲೆ ಪುಟ್ಟಗದ್ದುಗೆ ಕೊಡಿಸಿ, ಕೈ ಹಿಡಿದು ನಗುತ್ತ ಕುಳ್ಳಿರಿಸಿ, 'ನಿನ್ನನ್ನು ಕಂಡು ಹಲವು ದಿವಸವಾಯಿತು, ನಮಿರಾಜ' ಎಂದ. ನಮಿರಾಜನಲ್ಲಿ ಉಕ್ಕಿದ ಹರುಷ ಹೇಳಲಳವಲ್ಲ. ಹಿಂದಿನ ಹಮ್ಮು ಹೋಗಿತ್ತು. ಭರತನನ್ನು ಮಾತ ನಾಡಿಸಬೇಕಾದರೆ ಆಯ್ದಾಯ್ದು ಸವಿನುಡಿಯಾಡುತ್ತಿದ್ದ. ಅವನ ವಿನಯ ಎಲ್ಲರಿಗೂ ಮೆಚ್ಚಾಯ್ತು. ಭರತೇಶ್ವರ ಕೂಡ "ಕಚ್ಛಮಹಾ ಕಚ್ಛ ಮಾವಾಜಿಯರ ಮಹಾಸ್ವಚ್ಛಗರ್ಭಗಳಲ್ಲಿ ನೀವು ಸ್ವೇಚ್ಛಾಚಾರಿ ಗಳುದಯಿಸಿದಿರಿಯೆಂದು ತುಚ್ಛಗಾಣಿಸಿ ನಕ್ಕುನುಡಿ'ದಿದ್ದವನು ತಾನೇ

ಮಾವಾಜಿಯರ ಬಸುರೊಳು ಬರತಕ್ಕನೈ । ಭಾವಜ್ಞನೈ ಗುಣಾನ್ವಿತನೈ
ಸಾವಿರ ಮಾತೇನು ನಮಿರಾಜ ನೀನೆ ರಾ । ಜಾವಲಂಬನ ದಕ್ಷನೆಂದಾ

ನಮಿರಾಜನನ್ನು ಬೀಳ್ಕೊಡುವಾಗ, ಅವನು ಅರಸಿಯರನ್ನು ಕರೆತರಲಿಲ್ಲವೆಂದು ಭರತನಿಗೆ ತಿಳಿಯಿತು. ನಮಿರಾಜನನ್ನು ಏಕಾಂತದಲ್ಲಿ ಕೇಳಿದ. ಅದಕ್ಕೆ 'ಅಮ್ಮಾಜಿಯಿದ್ದಾಳೆ. ನಾನಿದ್ದೇನೆ. ತಮ್ಮನಿದ್ದಾನೆ. ನಮ್ಮ ಬಂಧುಗಳಿದ್ದಾರೆ. ಹೆಮ್ಮಕ್ಕಳೇತಕ್ಕೆ?' ಎಂದು ತೇಲಿಸಿದ ನಮಿರಾಜ. 'ಕಡೆಗೂ ನಿನ್ನ ಪ್ರಪಂಚವನ್ನು ಬಿಡೆಯಲ್ಲ! ನಿಮ್ಮವರೆಲ್ಲ ಬಂದರೂ ನನ್ನ ತಂಗಿಯರು ಬಾರದೆ ಹೀಗೆ ಎರವಾಗಲು ನಾನು ನಿನಗೆ ಮಾಡಿದ ನೋವೇನು? ಬೇಡ, ಅವರನ್ನು ಕರೆಸು' ಎಂದು ಚಕ್ರಿ ನೊಂದು ನುಡಿದ. 'ಬೀಡುಬಿಟ್ಟೆಡೆಗೆ ಇವರೇಕೆ ಎಂದು ಹಿಂದುಳಿಸಿ ಬಂದೆ. ಈ ರಾತ್ರಿಯೆ ಕರೆಸುವೆನು' ಎಂದು ನಮಿರಾಜ ತನ್ನ ರಾಣಿವಾಸವನ್ನು ಆ ರಾತ್ರಿಯೆ ಕರೆಸಿದ. ಮುಂದೆ ಮದುವೆ ನಡೆಯಿತು.

—ಹೀಗೆ ಭರತ ತನ್ನ ಸ್ತ್ರೀರತ್ನವನ್ನು ಪಡೆದು ಸರ್ವಸುಖಗಳ ನಡುವೆ ಅವಳನ್ನು ಮದುವೆಯಾದ.

ಮೇಲಿನದು ಈ ಅಲೆಯ ರೇಖೆ ಮಾತ್ರ.

ಇಂಥ ಅಲೆಗಳು, ಸಣ್ಣವು, ದೊಡ್ಡವು, ಪುಟ್ಟಪುಟ್ಟವು ಈ ರತ್ನಾಕರದ ಉದ್ದ ಅಗಲಗಳಲ್ಲಿ ಯಥೇಚ್ಛವಾಗಿ ಹರಡಿಕೊಂಡಿವೆ. ಪಾತ್ರದ ಹೆಂಗಳಾದ ರೂಪಾಣಿ ಪದ್ಮಿನಿಯರ ಮುನಿಸನ್ನು ಭರತ ಶಾಂತಗೊಳಿಸಿದ್ದು, ಮಗು ಆದಿರಾಜ ಅಣ್ಣ ಅರ್ಕಕೀರ್ತಿಯಂತೆ ಅಯ್ಯನ ಸೇವೆಗೆ ಇಚ್ಛೈಸಿದ್ದು, ಗಂಗಾದೇವಿ ಸಿಂಧುದೇವಿಯರು ಸುಭದ್ರಾದೇವಿಯ ಧ್ವನಿ ಕೇಳಲು ಮಾಡಿದ ತಂತ್ರ, ಅವರೇ ಮರು ದಿವಸ ಅವಳೊಡನೆ ಆಡಿದ ಸರಸ, ಭರತ ತನ್ನ ಮಗಳು ಮಧುರಾಜಿಯೊಡನೆ ಆಟವಾಡಿದ್ದು, ಯುದ್ಧಮಾಡದೆ ನಯದ ನುಡಿಯಿಂದಲೇ ಭರತ ಬಾಹುಬಲಿಯನ್ನು ಗೆದ್ದುದು, ವಿಮಲರಾಜ ಭಾನುರಾಜರು ಭರತನ ಅಪ್ಪಣೆಯಿಲ್ಲದೆ ಅವನ ಮಕ್ಕಳಿಗೆ ಮದುವೆ ಮಾಡಿದುದು—ಇವು ಇಲ್ಲಿಯ ಇನ್ನು ಕೆಲವು ಅಲೆಗಳು. ತುಂತುರು, ನೊರೆ, ಗುಳುಗುಳು ರವಕ್ಕಂತೂ ಲೆಕ್ಕವಿಲ್ಲ.

ಭರತೇಶ ವೈಭವಕ್ಕೆ ಬದಲಾಗಿ ನಿಲ್ಲಬೇಕೆಂಬುದು ಈ ಲೇಖನದ ಉದ್ದೇಶವಲ್ಲ, ಹಾಗೆ ನಿಲ್ಲುವುದು ಸಾಧ್ಯವೂ ಇಲ್ಲ. ಸುಮಾರು ೯೫೦೦ ಸಾಂಗತ್ಯಗಳ ಈ ಬೃಹತ್ತಿಗೆ ಬೆದರಿ ಹಿಂದೆಗೆಯುವವರಿಗೆ, ಇದರ ಅನೇಕ ಮುಖವಾದ ಸವಿಯ ಈ ಒಂದುಮುಖದ ಏಕದೇಶ ವನ್ನು ಕಾಣಿಸಿ, ಒಳಗೆ ಪ್ರವೇಶಿಸುವ ಆಸಕ್ತಿಯುಂಟುಮಾಡುವುದೆ ಇಲ್ಲಿಯ ಆಶಯ. ಇದಕ್ಕೆ ಮೇಲೆ ಕೊಟ್ಟಿರುವ ಆರು ಉದ್ಧಾರಗಳು ಸಾಕಾದಾವು. ರತ್ನಾಕರನ ನಗೆಯ ಪದ್ಧತಿಯನ್ನು ತಿಳಿಯುವುದಕ್ಕಂತೂ ಇಲ್ಲಿ ಕೊಟ್ಟಿರುವಷ್ಟು ಸಾಕು.

# ೩. ನಗೆಗಾರರಿವರಿಬ್ಬರೇ.

ಕೇಶಿರಾಜ ತನ್ನ ಶಬ್ದಮಣಿದರ್ಪಣದ ತದ್ಧಿತ ಪ್ರಕರಣದಲ್ಲಿ

> ಇವಱೊಳ್ ವ್ಯವಹರಿಪಂ ಮಾ
> ಡುವಸಿವನೆಂಬಲ್ಲಿ ಕಾಱ ಗಾಱಂಗಳ್ ಸಂ
> ಭವಿಕುಂ . . . .

ಎಂದು 'ಕಾರ–ಗಾರ' ಪ್ರತ್ಯಯಗಳಿಗೆ ಅರ್ಥವ್ಯತ್ಯಾಸ ಕಾಣಿಸಿದ್ದಾನೆ. ಈ ಅರ್ಥದ ದೃಷ್ಟಿಯಿಂದ, ಇಪ್ಪತ್ತನೆಯ ಶತಮಾನಕ್ಕೆ ಹಿಂದಿನ ಕನ್ನಡ ಸಾಹಿತ್ಯದಲ್ಲಿ **ನಗೆಗಾರರು ಎಂದರೆ ಇವರಿಬ್ಬರೇ : ರತ್ನಾಕರ ಮತ್ತು ನಂದಳಿಕೆ ನಾರಣಪ್ಪ**. ಎಂದರೆ, ಇವರು ನಗೆಯನ್ನು 'ಮಾಡಿ'ದಂತೆ, ಸೃಷ್ಟಿಸಿದಂತೆ, ಬೆಳೆಸಿದಂತೆ ಇನ್ನಾವ ಕನ್ನಡ ಕವಿಯೂ ಅದುವರೆಗೆ ಮಾಡಿರಲಿಲ್ಲ. ಉಳಿದ ಕನ್ನಡ ಕವಿಗಳಲ್ಲಿ – ಎಲ್ಲರಲ್ಲಿಯೂ ಎಂದು ಬೇಕಾದರೆ ಹೇಳಬಹುದು — ನಗೆಯ 'ವ್ಯವಹಾರ'ವನ್ನು ನಾವು ಕಾಣಬಹುದು, ಸ್ವಲ್ಪ ಶ್ರಮಪಟ್ಟು ಹುಡುಕಿದರೆ. ಹೀಗೆ **ನಗೆಯ ಎಳೆ**ಯನ್ನು ನಾವು ಎಲ್ಲಾ ಕನ್ನಡ ಕವಿಗಳಲ್ಲೂ ಕಾಣಬಹುದಾದರೂ **ನಗೆಯ ಬೆಳೆ** ನಮಗೆ ಅನಾಯಾಸವಾಗಿ ಗೋಚರವಾಗುವುದು ಇವರಿಬ್ಬರಲ್ಲಿ ಮಾತ್ರ : ರತ್ನಾಕರನಲ್ಲಿ, ಹಾಗೂ ನಂದಳಿಕೆಯವರಲ್ಲಿ. ಇವರ ನಗೆಗಾರಿಕೆಯಂತೆ ಪ್ರಭಾವಶಾಲಿಯಾದ, ಪರಿಣಾಮಕಾರಿಯಾದ ನಗೆಗಾರಿಕೆ ಕನ್ನಡದಲ್ಲಿ ಬೇರೊಂದು ಕಾಣಸಿಗದು. ಈ **ನಗೆಗಾರಿಕೆ**ಯ ವಿಶೇಷತೆಯನ್ನು ತಿಳಿಸುವ ಮುಂಚೆ ಕನ್ನಡ **ನಗೆಕಾರಿಕೆ**ಯನ್ನು ಕುರಿತು ಎರಡು ಮಾತನಾಡಿದರೆ ಅನುಚಿತವಾಗದು.

ಮೊದಲು ನಮ್ಮ ಆದಿಕವಿಯಾದ ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ನಗುವಿನ ತಾಣಗಳನ್ನು ತೆರೆದು ನೋಡೋಣ.

ದ್ರೋಣನು ಪರಶುರಾಮನಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ತನ್ನ ಚಿಕ್ಕಂದಿನ ಗೆಳೆಯನಾದ ದ್ರುಪದನು ಛತ್ರಾವತಿಯಲ್ಲಿ ಅರಸುಗೆಯ್ಯುವನೆಂದು ಕೇಳಿ ಅಲ್ಲಿಗೆ ಬಂದನು. ದ್ರುಪದನಾದರೋ

ರಾಜ್ಯಮದಿರಾಮದೋನ್ಮತ್ತನಾಗಿ ತನ್ನ ಮುನ್ನಿನ ಗೆಳೆಯನನ್ನು ಆದರಿಸದೆ,

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಚಿಂತೆನಗೆ ಕೆಳೆಯನೇ ನೂಂ
ಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ.

ನುಡಿದುದು ಮಾತ್ರವಲ್ಲ, ನೂಕಿಸಿಯೂ ಆಯಿತು. ಆಗ ದ್ರೋಣ "ಈ ಸಭಾವಳಯದೊಳ್ ಎನ್ನನ್ ಏಳಿಸಿದ ನಿನ್ನನ್ ಅನಾಕುಳಂ ಎನ್ನ ಚಟ್ಟರಿಂ ತಳವೆಳಗಾಗಿ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆ ವೊತ್ತೆನೇ" ಎಂದು ಪ್ರತಿಜ್ಞೆಯನ್ನು ಎತ್ತಿಕೊಂಡು ನಾಗಪುರಕ್ಕೆ ಬಂದು ತನ್ನ ಭಾವನಾದ ಕೃಪನ ಮನೆಯಲ್ಲಿ ಇಳಿದನು. ಅಲ್ಲಿ ಒಂದು ದಿನ ಪಾಂಡವರೂ ಕೌರವರೂ ಊರ ಹೊರಗೆ

ನೆರೆದಿಸುತಿರೆ ತೋಲ್ವುಲ್ಲೆಯ
ಸಿರದಮ ಬಿಟ್ಟೊಡೆ ಪುರಾಣಕೂಪದೊಳದಸಿ
ನ್ನರಿದು ತೆಗೆವಂದಮೆಂಪವ
ರಿರೆ ಬಳಸಿಯುಮಲ್ಲಿ ಕಂಡು ನಕ್ಕಂ ದ್ರೋಣಂ

ಭರತಕುಳತಿಳಕರಿರ್ ವರ
ಶರಾಸನವ್ಯಗ್ರಹಸ್ತರಿರ್ ಬಳಯುತರಿರ್
ನೆರೆದಿಸಿಬರುಮೀ ಲಕ್ಷ್ಯಮ
ಸಿರದಕ್ಕಟ ಸರದೆ ತೆಗೆಯಲಾರ್ತಿರುಮಿಲ್ಲಾ

ಎಂದು ನಕ್ಕು, ತನ್ನ ಮಗ ಅಶ್ವತ್ಥಾಮನನ್ನು ಕರೆದು ಪುಂಖಾನುಪುಂಖ ವೆಂಬ ಶರಸಂಧಾನಕ್ರಮದಿಂದ ಅದನ್ನು ತೆಗೆಸಿದನು. ಆಗ ಭೀಷ್ಮಾದಿ ಗಳು ದ್ರೋಣನನ್ನು ಆರಾಧಿಸಿ, "ಈ ಕೂಸುಗಳ್ ಯೋಗ್ಯರಪ್ಪುದನ್ ಇನ್ನೊಲ್ವೊಡೆ ಶಸ್ತ್ರವಿದ್ಯೆಗೆ ಒವಜಂ ನೀನಾಗು ಕುಂಭೋದ್ಭವಾ" ಎಂದು ಪ್ರಾರ್ಥಿಸಲು, ದ್ರೋಣನು ಹಾಗೆಯೆ ಆಗಲೆಂದು ಒಪ್ಪಿ,

ಈ ನೆರೆದಿಸಿಬರುಮೆಂದುದ
ನೇಸೇವಿರೆ ಪೇೞಿಮೆಂದೊಡನಿಬರುಮಿರ್ದರ್ಆ
ಮೌನವ್ರತದೆ ಗುಣಾರ್ಣವ
ನಾಸೇವೆಂ ನಿಮ್ಮ ಬಯಸಿ ಬೇೞ್ಪುದನೆಂದಂ

ದ್ರೋಣನು ಆ ಮಾತಿಗೆ ಮೆಚ್ಚಿ ಅರ್ಜುನನನ್ನು ತೊಡೆಯ ಮೇಲೇರಿಸಿ ಕೊಂಡು ಭೀಷ್ಮನನ್ನು ಕುರಿತು

ಇನಿಬರೊಳಗೀತನೊರ್ವನೆ
ಧನುರಾಗಮದೆಡೆಗೆ ಕುಶಲನಕ್ಕುಮದರ್ಕೆಂ
ಕಿನಿಸದಿರಿಂ ಮುನ್ನಱಿಪಿದೆ
ನೆನೆ ಭೀಷ್ಮನಲಂಪು ಮಿಗೆ ಮುಗುಳ್ನಗೆ ನಕ್ಕಂ

ಬಳಿಕ ದ್ರೋಣನು ಅರ್ಜುನನನ್ನು ಸರ್ವಶಸ್ತ್ರಕಳಾಧರನನ್ನಾಗಿ ಮಾಡಿ "ತನ್ನ ಪಗೆವನಪ್ಪ ದ್ರುಪದನಂ ಈತನ್ ಅಮೋಘಂ ಗೆಲಲ್ ನೆಱೆಗುಂ ಎಂದು ನಿಶ್ಚೈಸಿ", ದ್ರುಪದನನ್ನು ಕೋಡಗಗಟ್ಟು ಕಟ್ಟಿ ತರುವಂತೆ ಅರ್ಜುನನನ್ನು ಬೇಡಿದನು. ಅರ್ಜುನನು ಗುರು ಕೇಳಿದ ದಕ್ಷಿಣೆಯನ್ನು ಸಲ್ಲಿಸಿದನು. ಆಗ ದ್ರೋಣನು ದ್ರುಪದನನ್ನು ತನ್ನ ಮಂಚದ ಕಾಲಿಗೆ ಕಟ್ಟಿಸಿ, ಅವನ ತಲೆಯ ಮೇಲೆ ತನ್ನ ಕಾಲನ್ನು ಅವಷ್ಟಂಭದಿಂದ ನೀಡಿ,

ಸಿರಿಮೆಯ್ಯೊಳಗಂದಱಿವಿರೆ
ನೆರವಿಯೊಳಾರಱಿವರೊರ್ವ ಕಂಡರನಱಿಯು
ಲ್ಕರಿದೆಮ್ಮಂ ಬಡಪಾರ್ವರ
ನರಸರೆ ನೀಮೀಗಳಱಿವಿರಱಿಯಿರೊ ಪೇೞಿಂ

ಎಂದು 'ಸಾಯೆ ಸರಸ'ವನ್ನು ನುಡಿದನು.

—ಇದು ಪಂಪನು ಚಿತ್ರಿಸಿರುವ ಒಂದು ಪ್ರಕರಣದ ಸಂಗ್ರಹ.

ಇನ್ನೊಂದು ಕಡೆ, ದ್ರೌಪದೀ ಸ್ವಯಂವರದ ಪ್ರಕರಣದಲ್ಲಿ, ಧನುಸ್ಸನ್ನು ಏರಿಸಲು ಎದ್ದುಬಂದಾಗ

ಪಿಡಿದಾರ್ಪ ಭರದಿನೆತ್ತ
ಲ್ಕೊಡರಿಸಿದೊಡೆ ನೆಲದಿನಣಮೆ ತಳರದೆ ಬಿಲ್ ನಿ
ಲ್ತೊಡೆ ಗುಡು ಗುಡು ಗುಡು ಗೊಳ್ಳೆಂ
ದೊಡನಾರೆ ಸುಯೋಧನಂ ಕರಂ ಸಿಗ್ಗಾದಂ

ಮುಂದೆ ಶಿಶುಪಾಲವಧೆಯ ವೃತ್ತಾಂತದಲ್ಲಿ ತುಂಬಿರುವ ಮೂದಲೆಯ ನಗು ಎಲ್ಲರಿಗೂ ತಿಳಿದದ್ದೇ. ಶಿಶುಪಾಲನ ಆ ನಗು ಅವನು ಸತ್ತಮೇಲೂ ನಿಲ್ಲಲಿಲ್ಲವಂತೆ :

ಮುಳಿದು ತನಗಘ್ರ್ಯವೆತ್ತಿದ
ತಳಿಗೆಯೊಳಿಡೆ ತಿಱಿದ ತೆರದೆ ತಲೆ ಪಱಿದಾಗಳ್
ಕಳಕಳಿಸಿ ನಗುತುಮಿರ್ದುದು
ತಳಿಗೆಯ ಮೇಲಸುರನದಟದೇನಚ್ಚರಿಯೋ

ಪಂಪನಿಗೆ 'ಸಾಯೆ ಸರಸ'ದ ಮೇಲೆ ಕೊಂಚ ಒಲವು ಹೆಚ್ಚು. ಅರ್ಜುನನು ದುರ್ಯೋಧನನನ್ನು ಚಿತ್ರಾಂಗದನ ಕೈಯಿಂದ ಉಳಿಸಿ ಕೊಂಡು ಬಂದ ಬಳಿಕ, ದ್ರೌಪದಿ ಸುಮ್ಮನಿರಲಾರದೆ

ಎಮ್ಮಂ ಪಿಡಿವೆಳೆವಂದಿನ
ನಿಮ್ಮ ದಟಂಗಳೀಗಳೆತ್ತ ಪೋದುವೊ ಪಿಡಿವ
ಟ್ಟಿಮ್ಮ ಬಱಿಲ್ದಿರೆ ಕಂಡಿರೆ
ನಿಮ್ಮಳವಂ ನಿಮಗವೀಗಳೀಯೆಡೆಯಱಿಪುತ್ತೇ

ಎಂದು "ಸಾಯೆ ಸರಸಂ ನುಡಿದು ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟು ಕಳೆದು ಭಾನುಮತಿಗೆ ನಿನ್ನಾಣ್ಮನುಮಂ ನಿನ್ನಮಯ್ದುನನುಮಂ ನೀನ್ ಒಪ್ಪುಗೊಳ್" ಎಂದಳು.

ಹೀಗೆಯೆ ಮುಂದೆ ಇನ್ನೂ ಹಲವು ಹಾಳೆ ತಿರುವಿ ಹಾಕಿದರೆ, ಕಿರಾತಾರ್ಜುನೀಯ ಪ್ರಸಂಗ ಬರುತ್ತದೆ. ಅರ್ಜುನನ ತಪಸ್ಸಿನ ತಾಪದಿಂದ ಪೀಡಿತರಾದ ಇಂದ್ರಕೀಲದ ತಪೋಧನರು ಈಶ್ವರನಲ್ಲಿ ಮೊರೆಯಿಟ್ಟಾಗ, "ಆತನ್ ಆವನ್ ಎಂಬುದನ್ ಅಱಿಯಲೆಂದು ಧ್ಯಾನದೊಳ್ ಅಭವಂ ನೆಱೆದು....ಉದಾರಮಹೇಶ್ವರನ್ ಅಪ್ಪುದನ್ ಅಱಿದು ಬೆರಲಂ ಮಿಡಿದು ಮುಗುಳ್ನಗೆ ನಕ್ಕು ನೆನೆದಾತಂಗೆ ತಕ್ಕುದನ್ ಆನೆ ಬಲ್ಲೆನ್" ಎಂದು ಅವರನ್ನು ಕಳುಹಿಸಿ, ತಾನು ಕಿರಾತನಾಗಿ ಅವತರಿಸಿದನು. ಅಲ್ಲಿ, ತಂದೆ ಮಗುವಿನೊಡನೆ ಆಡಿದಂತೆ ಅಭವನು ಅರ್ಜುನನೊಡನೆ ಆಡಿದ ಯುದ್ಧ ಎಲ್ಲರಿಗೂ ಪರಿಚಿತವಾದುದೇ.

ಇದೇ ಜಾತಿಯ ನಗು ನಮಗೆ ಕಂಡುಬರುವುದು, ಸೌಗಂಧಿಕಾ ಪಹರಣದ ಸಮಯದಲ್ಲಿ ಭೀಮನು ತನ್ನ ಅಣ್ಣನಾದ ಹನುಮಂತನನ್ನು ಕಂಡಾಗ. ಭೀಮನು "ಬಟ್ಟೆಯ ಕಣ್ಣೊಳಡ್ಡಂ ಬಿಟ್ಟಿರ್ದ ವೃದ್ಧ ವಾನರನಂ ಕಂಡು,

ತೊಲಗೆನೆ ಬಟ್ಟೆಯಿಂ ತೊಲಗಲಾಱನಶಕ್ತನೆನಾರ್ಪೊಡೆನ್ನನಿಂ
ತೊಲಗಿಸಿ ಪೋಗು ನೀನೆನೆ ವೃಕೋದರನೊಯ್ಯನೆ ನಕ್ಕು ಬಾಲಮಂ
ಸಲೆ ಮುರಿವೆತ್ತಲಾಟಿಸೆ ಧರಿತ್ರಿಗೆ ಕೀಲಿಸಿದಂತುಟಾಗೆ ಪೋ
ರ್ವಲದ ಪೊದರ್ಪುಗೆಟ್ಟು ನಡೆ ನೋಡಿ ಮರುತ್ಸುತನಂ ಮರುತ್ಸುತಂ

ನೀನೆಮ್ಮಣ್ಣನೆ ವಂಶದ
ವಾನರನಲ್ಲೈ ಬಲಂ ಮಹಾಬಲ ಪೇೞಿ
ಕೀ ನಗದೊಳಿರ್ದೆಯೆನೆ ತ
ದ್ವಾನರನಚ್ಚರ್ಗೆ ಭೀಮನೆಂಬಂ ನೀನೇ

ಎಂಬುದುಂ ಅಪ್ಪೆನ್ ಎಂದೊಡೆ ನಿಮ್ಮಣ್ಣನಪ್ಪ ಅಣುವನೆ ನಾನ್ ಅಪ್ಪೆನ್ ಎಂದು ಪೇೞ್ದುದುಂ" ಭೀಮನು ಅವನಿಗೆ ಸಾಷ್ಟಾಂಗವೆರಗಿದನು.

ಇಂತಹ ಇನ್ನೂ ಹಲವು ನಗೆಯ ಎಳೆಗಳನ್ನು ಪಂಪನಿಂದ ಉದ್ಧರಿಸಬಹುದು. ಪಂಪನು 'ಹಿತಮಿತವಚನ'ನಾದರೂ ಅವನ ಕವಿತೆ 'ಓಜೆಯ ಬಲದಿನಿಯ ಕವಿತೆ'ಯಾದುದರಿಂದ ಈ ಎಳೆಗಳಲ್ಲಿಯಾದರೂ ನಗೆ ಪ್ರಭಾವಶಾಲಿಯಾಗಿದೆ, ಪರಿಣಾಮಕಾರಿಯಾಗಿದೆ. ಪಂಪನ ಈ ನಗೆಯ ಬಣ್ಣ ಕಾಣಬೇಕಾದರೆ ನಮ್ಮ ಕಲ್ಪನೆಯ ಕಣ್ಣು ತೆರೆಯಬೇಕು. ಆದರೆ ಈ ಪದ್ಯಗಳನ್ನಷ್ಟೆ ಪ್ರತ್ಯೇಕವಾಗಿ ತೆಗೆಯದೆ ಸಮಸ್ತ ಕಾವ್ಯವನ್ನು ಗಣನೆಗೆ ತಂದುಕೊಂಡರೆ ಈ ಎಳೆಗಳು ಇತರ ಹೆಚ್ಚು ಮಹತ್ತ್ವದ ಭಾವರಸಗಳಲ್ಲಿ ಮರೆಯಾಗಿಬಿಡುತ್ತವೆ. ಆದರೂ ಬಲ್ಲವರೆಳಗಳಿಗೆ ಪಂಪನ ನಗೆಯ ನಾಡಿ ಮಿಡಿಯುವುದು ಸ್ಪಷ್ಟವಾಗಿದೆ. ಇಷ್ಟಾದರೂ ಪಂಪನು ನಗೆಯಲ್ಲಿ ವ್ಯವಹರಿಸಿದ್ದಾನೆಂದು ನಾವು ಹೇಳಬಹುದಲ್ಲದೆ, ಪಂಪ ನಗೆಯನ್ನು ಸೃಷ್ಟಿಸಿರುವನೆಂದು ಹೇಳುವಂತಿಲ್ಲ. ಏಕೆಂದರೆ ಪಂಪನ ಈ ಚಿತ್ರಗಳೆಲ್ಲವೂ ಪ್ರಸಿದ್ಧವಾದ ಭಾರತಕಥೆಯಿಂದ ತೆಗೆದುಕೊಂಡವೇ. ಪಂಪನಿಗೆ ನಗುವನ್ನು ನೊಗಕ್ಕೆ ಹೂಡಿ ನಡೆಸುವ ಸಾಮರ್ಥ್ಯವಿತ್ತೆಂಬುದಕ್ಕೆ ಮೇಲಿನ ಕೆಲವು ಲಕ್ಷ್ಯಗಳೆ ಸಾಕಷ್ಟು ಸಾಕ್ಷಿ. ಆದರೆ ಪಂಪನಿಗೆ ಇದು ಬೇಕಾಗಿರಲಿಲ್ಲ. ಅವನ ಗುರಿ ಬೇರೆ, ಅವನು ಗುರಿಯನ್ನು ಮುಟ್ಟುವ ಮಾರ್ಗ ಬೇರೆ.

‘ ಪ್ರತಿಪರ್ವರಸೋದಯ ’ವೆಂದು ಪ್ರಸಿದ್ಧವಾದ ಭಾರತದಲ್ಲಿಯೇ ನಗು ಇಷ್ಟು ವಿರಳವಾಗಿರುವಾಗ, ಸಂಸಾರದ ಅಸಾರತೆಗೆ ಹೇಸಿಗೆಯನ್ನು ಹುಟ್ಟಿಸುವುದಕ್ಕಾಗಿ ಬರೆದ ಆದಿಪುರಾಣವಲ್ಲಿ ಹುಡುಕಲೇ ಬೇಕಾಗಿಲ್ಲ.

ಮೇಲೆ ಪಂಪನನ್ನು ಕುರಿತು ಹೇಳಿದ ಮಾತುಗಳನ್ನೇ ಕನ್ನಡದ ಇತರ ಉದ್ದಾಮಕವಿಗಳಿಗೂ ಅನ್ವಯಿಸಿ ಹೇಳಿಬಿಡಬಹುದಾದರೂ, ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ಪಂಪನಿಗೆ ದ್ವಿತೀಯವಿಭವನೆಂದು ಹೆಸರಾಗಿರುವ ರನ್ನನಲ್ಲಿ ನಗು – ಇದ್ದರೆ – ಹೇಗಿದೆಯೆಂಬುದನ್ನು ನೋಡೋಣ. ಇವನು ಬರೆದಿರುವುದಾದರೂ ಪಂಪನಂತೆ ಒಂದು ಜೈನ ಪುರಾಣ, ಇನ್ನೊಂದು ಭಾರತಕಥೆಯನ್ನು ಆಧರಿಸಿ ಬರೆದ ಗದಾಯುದ್ಧ. ನಗು ಪುರಾಣ ಪ್ರಪಂಚಕ್ಕೆ ಹೊರಗಾದುದೆಂದು ಹಿಂದೆಯೆ ಹೇಳಿತು. ಉಳಿದ ಗದಾಯುದ್ಧದಲ್ಲಿ ಕಾಣುವ ನಗುವಾದರೂ ಎಂತಹದು? ಸಂಜಯನ ಎದುರಿಗೆ ದುರ್ಯೋಧನನು ಕೃಷ್ಣನನ್ನೂ ಪಾಂಡವರನ್ನೂ ‘ ನಿರಾಕರಣಂಗೆಯ್ವ ’ ನಗು, ಯುದ್ಧಭೂಮಿಯಲ್ಲಿ ದುರ್ಯೋಧನನ ಮರ್ಮವನ್ನು ಭೇದಿಸುವ ಮರುಳುಗಳ ನಗು, ಪಾಂಡುಪುತ್ರರು ವೈಶಂಪಾಯನ ಸರಸ್ತೀರದಲ್ಲಿ ದುರ್ಯೋಧನನನ್ನು ಮುಟ್ಟಿ ಮೂದಲಿಸುವ ನಗು, ಅಶ್ವತ್ಥಾಮನ ಲಕ್ಷ್ಮೀವಿಡಂಬನೆಯ ನಗು.

ಒಂದು ಉದಾಹರಣೆ ನೋಡೋಣ : ದುರ್ಯೋಧನನು

ಎಸರಸಿಡುವಕ್ಕಿಗರ್ಚುವ
ಬೆಸನಂ ಕೆಯ್ಗೆಱೆವ ಕಂಚುಗರ್ಚುವ ಬೆಸನಂ
ಬೆಸನಲ್ಲವೆ ಮತ್ಸ್ಯನ ಬಾ
ಣಸಿಗಂಗಾರಿತ್ತರೆಲವೊ ನಿನಗೀ ಬೆಸನಂ

ಎಂದು ಮುಟ್ಟಿ ಮೂದಲಿಸಿ ನುಡಿಯೆ ಭೀಮಸೇನಂ ಮುಗುಳ್ನಗೆ ನಕ್ಕು

ನೆನೆ ಚಿತ್ರಾಂಗದನಿಂದಮಂದು ನಿನಗಾದಾ ಬನ್ನಮಂ ಬನ್ನಮಂ
ನೆನೆ ನೀಂ ಗೋಗ್ರಹಣ ಪ್ರಪಂಚದೊಳ್ ಮೆಯ್ವೆತ್ತಿರ್ದುದಂ ನಿನ್ನ ತ
ಮ್ಮನ ಕೆನ್ನೆತ್ತರನೀಂಟುವಲ್ಲಿ ಭಯದಿಂಪಳ್ಕುತ್ತೆ ಬೆಸ್ಸಿತ್ತುದಂ
ನೆನೆ ಪಿಂತಿಕ್ಕಿದ ನಿನ್ನ ಮುನ್ನಿನ ಕವಲ್ಬನ್ನಂಗಳಂ ಕೌರವಾ

ಎಂದುರಗಧ್ವಜನಂ ಮರ್ಮೋದ್ಘಾಟನಂಗೆಯ್ಯು ಮೊದಲಿಸಿದಂ."

ಇಂಥವೇ ಇಲ್ಲಿ ಹೆಚ್ಚು. ಏಕೆಂದರೆ ಕಥೆಯಲ್ಲಿ ಅವಕಾಶ ಸಿಕ್ಕುವುದು ಇಂಥವಕ್ಕೇ. ಆದರೂ ಈ ಎಲ್ಲಕ್ಕೂ ಸ್ಫೂರ್ತಿ ಬಂದುದು ಮೂಲಭಾರತದಿಂದಲೇ.

ಒಂದೆರಡು ಕಡೆ ರನ್ನ ನಗುವನ್ನು ಸೃಷ್ಟಿಸಿದುದೂ ಕಂಡು ಬರುತ್ತದೆಯಾದರೂ ಅದು ಹೇಳಿಕೊಳ್ಳುವಂತಹ ಸೃಷ್ಟಿಯಲ್ಲ.

ಗದಾಯುದ್ಧದ ನಾಯಕ ಭೀಮಸೇನ ತಾನೆ. ರನ್ನ ಈ ನಾಯಕ ನಿಗೆ ಒಬ್ಬ ವಿದೂಷಕನನ್ನು ಒದಗಿಸಿದ್ದಾನೆ. ಈ ವಿದೂಷಕ 'ಭೀಮ ಸೇನನನುಮತದೊಳ್ ನರ್ಮಸಚಿವನುಂ ಪರಿಹಾಸಕೇಳೀಶೀಲನುಮೆನಿ ಸಿದ'ವನು. ಇವನು ಚಿಂತಾಕ್ರಾಂತೆಯಾಗಿದ್ದ ಪಾಂಚಾಲ ರಾಜ ತನೂಜೆಯ ಮುಖವನ್ನು ನೋಡಿ,

ಕುರುಕುಲವುಂ ನುಂಗಿದೆಯಿ
ನ್ನರೆಬರುಮಂ ನುಂಗಲಿರ್ಪೆ ಕುರುಪತಿಯುಮನಿ
ನ್ನೆರಡನೆಯ ಹಿಡಿಂಬೆಯುನೆ
ಮ್ಮರಸಂ ರಕ್ಕಸಿಯನೆಲ್ಲಿ ತಂದನೊ ಪಿನ್ನಂ

ಮಾರುತಿ ನಿಜವೇಣೀಸಂ
ಹಾರಂ ಮಾಡಿದೊಡೆ ಮಾಣ್ಬುದೆನಗಂ ನಿನಗಂ
ಪೂರಣೆಗೆ ಜಠರಪಿಠರಕ
ಪೂರಣೆಗೇಂ ಮಾಡವೆಂತು ಕರೆವೆಂ ಪಿನ್ನಂ

ಎಂದನು. ಆಗ 'ವಿದೂಷಕನಟಾಟತ್ತುಂ ಬಂದ ತನ್ನಂ ನಗುತ್ತುಂ ಪೋಪಂತೆ ಸಂತೋಷಂ ಮಾಡಿಸಿದುದರ್ಕೊಡಂಬಟ್ಟು ಚಾರುಹಾಸಿನಿ ನಿಜನಿವಾಸಕ್ಕೆ ಪೋದಳ್.' ಈ ವಿದೂಷಕ ನಿಜವಾಗಿಯೂ 'ಭೀಮಸೇನನನುಮತದೊಳ್ ಪರಿಹಾಸಕೇಳೀಶೀಲ'ನೇ ಹೌದು. ಈತನ ಪರಿಹಾಸಕೇಳಿಗೆ ಸಂತೋಷಪಟ್ಟ ಆ 'ಚಾರುಹಾಸಿನಿ' ಯಾದರೂ ಎಂಥವಳು? ಊರುಭಂಗ ಕಿರೀಟಭಂಗಗಳಾದ ಮೇಲೆ ಭೀಮ

ಪಗೆ ಮುಡಿಪುದು ಮುಡಿಯೆನೆ ನಗೆ
ಮೊಗದಿಂ ಪಾಂಚಾಳಿ ಮುಱಿದೆನಾಂ ಪಲಕಾಲಂ
ವಿಗತಾಭ್ಯಾಸವೆ ಸತ್ತಿಗ
ಪಗೆಯಂ ಮುಡಿಯಿಪಿದೆ ಸೀಸೆ ಮುಡಿಯಲ್ವೇಟ್ಕುಂ

ಎಂದವಳು. ವೇಣೀಸಂಹಾರವಾದನಂತರ "ಆ ದರಹಾಸಾಮೃತಮೇಂ ಮನಂಗೊಳಿಸಿತೋ........ನಗೆಗಣ್ಗಳೊಳಗೆ ಮೆಲ್ಲಗೆ ಸೊಗಯಿಸೆ.... ಸ್ಮೇರವದನಂ ಪೊಗಟಲ್ಕರಿದು........ಸೊಗಯಿಪ ನಗೆಗಣ್ನೋಟವಿಂ ತಾಗವೇಡಾ" ಎಂದು ಕವಿಚಕ್ರವರ್ತಿ ರನ್ನದಿಂದ ಉದ್ಗಾರವೆತ್ತಿಸಿದವಳು. ಇದು ಕೂಡ ಗದಾಯುದ್ಧದ ರಕ್ತರೌದ್ರಕ್ಕೇ ಉಚಿತವಾದ ನಗೆ !

ಇನ್ನು ಗದಾಯುದ್ಧದ ನಗುವಿನಲ್ಲಿ ಉಳಿದುದೆಂದರೆ, ಸಂಜಯನು ಅರಸನಿಗೆ ಯುದ್ಧಭೂಮಿಯಲ್ಲಿ 'ನವರಸಮನಭಿನವರಸಂ ಮಾಡಿ ತೋರುತ್ತುಂ' ಬಂದ ಸಂದರ್ಭ.

ಕವಲಂಬು ತನ್ನ ಸಾರಿ
ರ್ದಪನಂ ಕೊಳೆ ನೆತ್ತರುಣ್ಮೆ ತಾಂ ನೊಂದನೆಗೆ
ತ್ತವಧರಿಸದೆ ಬೇಗಂ ಮೂ
ರ್ಛೆವೋಗಿ ಕಡುವಂದೆ ಪದೆಗೆ ಪದೆದಂ ನಗೆಯುಂ

ಎಂಬ ಒಂದು ಕಂದ ಇಲ್ಲಿ ಹಾಸ್ಯರಸಕ್ಕೆ ಮೀಸಲಾಗಿದೆ. ಇಲ್ಲಿಗೆ ಗದಾಯುದ್ಧದಲ್ಲಿನ ನಗು ಮುಗಿದಂತೆ ಆಯ್ತು.

ಹೀಗೆಯೇ, ಮೇಲೆ ಪಂಪ ರನ್ನರಿಂದ ಆಯ್ದು ತೆಗೆದಂತೆಯೇ, ನಗೆಯ ಎಳೆಗಳನ್ನು ಉಳಿದ ಕನ್ನಡ ಕವಿಗಳಿಂದಲೂ ಆಯಬಹುದು. ಆದರೆ ಅವುಗಳಲ್ಲಿ ಬಹುಪಾಲು ಸಂಸ್ಕೃತ ಪ್ರಾಕೃತ ಮೂಲಗಳಿಂದ ಇಳಿದುಬಂದವು. ಅವರೇ ಕಲ್ಪಿಸಿದುದು ಏನಾದರೂ ಇದ್ದರೆ ಅದು ಅವರ ಕಾವ್ಯದ ಅಪಾರದಲ್ಲಿ ಅಡಗಿ ಹೋಗಿರುತ್ತದೆ. ಹಾಸ್ಯವೇ ಪ್ರಧಾನರಸವಾಗಿ ಬರೆಯುವುದು ಇಲ್ಲದಿದ್ದರೂ ಮಿಕ್ಕ ರಸಗಳಷ್ಟೇ ಉನ್ನತವಾದ ಸ್ಥಾನವನ್ನು ಹಾಸ್ಯರಸಕ್ಕೆ ಕೊಟ್ಟವರು ಕೂಡ ಕನ್ನಡದಲ್ಲಿ ಇಲ್ಲ; ರತ್ನಾಕರ ಮತ್ತು ನಂದಳಿಕೆ ನಾರಣಪ್ಪನವರನ್ನು ಬಿಟ್ಟರೆ.

ನಮ್ಮ ಕನ್ನಡ ಕಾವ್ಯಸಂಪತ್ತಿಗೆ ಕಾರಣರಾದವರಲ್ಲಿ ಎರಡು ತೆರ. ಮೊದಲನೆಯ ಗುಂಪಿಗೆ ಸೇರಿದವರು ಪಂಪ, ಹರಿಹರ, ನಾರಣಪ್ಪ ಮೊದಲಾದವರು. ಇವರು ಪ್ರಸಿದ್ಧವಾದ ವಸ್ತುಗಳನ್ನು ಆಯ್ದು ಕೊಂಡು, ಕ್ರಮವಾಗಿ ಕುಳಿತು ಅನೇಕ ಕಾಲ ಶ್ರಮವಹಿಸಿ ಕಾವ್ಯಗಳನ್ನು ಕಟ್ಟಿದವರು. ಎರಡನೆಯ ಗುಂಪಿಗೆ ಸೇರಿದವರು ನಮ್ಮ ವಚನಕಾರರು, ನಮ್ಮ ದಾಸರು, ಲಾವಣಿಕಾರರು, ಜನಪದ ಸಾಹಿತಿಗಳು ಮುಂತಾದವರು. ಇವರು ಕಾವ್ಯ ಬರೆಯಬೇಕೆಂದು ಕುರಿತು ಕುಳಿತವರಲ್ಲ. ಅಂದಂದಿನ ಆಗಾಗಿನ ಸಮಯಸ್ಫೂರ್ತಿಯಿಂದ ಆವೇಶದಲ್ಲಿ ಆಡಿ ಭಾವದ ಒತ್ತಡವನ್ನು ನೀಗಿಕೊಂಡವರು. ಇವರ ಮುಖದಿಂದ ಬಂದ ವಾಣಿಯನ್ನು ಬಲ್ಲವರು ಬೆಲೆಕಟ್ಟಿ ಕನ್ನಡಕ್ಕೆ ಕೊಟ್ಟರು. ಹಾಗಾಗಿ ಈ ಕಾವ್ಯ ಸಮೃದ್ಧಿ ಮೊದಲಿನದರಂತೆ ಸಂತತವಾದ ಪ್ರವಾಹರೂಪದಲ್ಲಿಲ್ಲ; ಹನಿಹನಿಯಾಗಿ, ಹಳ್ಳ ಹಳ್ಳವಾಗಿ ನಿಂತಿದೆ. ಆದರೂ ಎರಡು ತೆರದ ಕಾವ್ಯವೂ ಕೊಡಬಲ್ಲ ಆನಂದ ಅಷ್ಟೇ ಅಮೂಲ್ಯವಾದುದು, ಅಷ್ಟೇ ಅಪೇಕ್ಷಣೀಯವಾದುದು.

ಮೊದಲಿನ ತೆರದ ಕಾವ್ಯದಲ್ಲಿ ಕಂಡುಬರುವಂತೆಯೇ ಎರಡನೆಯ ತೆರದಲ್ಲೂ ನಗೆಯ ಎಳೆ ಕಂಡುಬರುವುದು. ಆದರೆ ಈ ಎರಡನೆಯ ತೆರದಲ್ಲಿ ಕಾಣುವ ನಗೆ ಮೊದಲಿನದಕ್ಕಿಂತ ಹೆಚ್ಚು ಬೆಲೆಯುಳ್ಳುದು. ಏಕೆಂದರೆ ಮೊದಲಿನ ಕಾವ್ಯಗಳು ಮೂಲಕಥೆಯಲ್ಲಿ ಇರಬಹುದಾದ ನಗುವಿನ ನೆರಳನ್ನು ಮಾತ್ರ ಕನ್ನಡಿಸಿದರೆ, ಎರಡನೆಯದರಲ್ಲಿ ನಮ್ಮ ಕನ್ನಡ ಜನತೆಯ ಹಾಸ್ಯಪ್ರವೃತ್ತಿ ಸ್ಪಷ್ಟವಾಗಿ ಕಂಡುಬರುತ್ತದೆ.

ಇವು ಬಸವಣ್ಣನವರ ಕೆಲವು ವಚನಗಳು :

"ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲಿ ಕಿಚ್ಚೆದ್ದು ಸುಡುವಾಗ ಬಚ್ಚಲನೀರ ಬೀದಿಯ ಧೂಳ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯ. ಕೂಡಲ ಸಂಗಮದೇವ, ವಂದನೆಯ ಮರೆತು ನಿಂದಿಸುತಿರ್ದರಯ್ಯಾ."

"ಮಿಂಗುಲಿಗನ ಪಕ್ಕಿಯಂತೆ ನೀರ ತಡಿಯಲಿರ್ದು, ಮೂಗ ಹಿಡಿದು, ಧ್ಯಾನವ ಮಾಡುವರಯ್ಯ. ಬಿಟ್ಟ ಮಂಡೆವೆರಸಿ, ಬಾಯ ಮಿಡುಕಿಸುತ, ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯ. ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು, ಕೂಡಲ ಸಂಗನನರಿಯದೆ, ಮೊರೆ ಇಡುವಂತೆ."

—ಈ ಮೇಲಿನ ಎರಡರಲ್ಲಿ ನಗು ಚುಚ್ಚಿ ತಿವಿಯುತ್ತಿದ್ದರೆ, ಕೆಳಗಿನದರಲ್ಲಿ ಕುರಿಯಮೇಲಿನ ಕರುಣೆಯ ಹಿಂದೆ ಅದರ ಮೌಢ್ಯವನ್ನು ಕಂಡ ನಗು ಮಿನಗುತ್ತಿದೆ:

"ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು. ಕೊಂದಹರೆಂಬುದನರಿಯದೆ ಬೆಂದೊಡಲ ಹೊರೆವುತ್ತಲಿದೆ. ಅಂದಂದೆ ಹುಟ್ಟಿತ್ತು. ಅಂದಂದೆ ಹೊಂದಿತ್ತು. ಕೊಂದವರುಳಿದರೆ ಕೂಡಲ ಸಂಗಮದೇವ."

ಅಥವಾ ಭಯಾನಕವನ್ನು ಬಸಿರಲ್ಲಿ ಹೊತ್ತ ಈ ನಗುವನ್ನು ನೋಡಿ:

"ಹಾವರಕ್ಕೆ ಹೋದರೆ ಕಳ್ಳ ದಸ್ಮ್ರನಾಯಿತ್ತು. ಹಾಳು ಗೋಡೆಗೆ ಹೋದರೆ ಚೇಳೂರಿತ್ತು. ಅಬ್ಬರವ ಕೇಳಿ ತಳವಾರಸುಟ್ಟ ಸೀರೆಯ ಸುಲಿದ. ನಾಚಿ ಹೋದರೆ, ಮನೆಯ ಗಂಡ ಬೆನ್ನ ಬಾರನೆತ್ತಿದ. ಅರಸು ಕೂಡಲ ಸಂಗಮದೇವ ದಂಡವ ಕೊಂಡ."

ಇನ್ನೂ ಹೀಗೆಯೆ ವಚನಗಳನ್ನು ಇವರಿಂದಲೂ ಇತರ ವಚನಕಾರರಿಂದಲೂ ಉದ್ಧರಿಸಬಹುದು. ಸರ್ವಜ್ಞನ ವಚನಗಳಾದರೂ ಹೀಗೆಯೆ:

ಬಂಧು ಬಳಗವು ಕೂಡಿ ಹೊಂದಿ ಜೋಗುಳ ಪಾಡಿ
ಒಂದೆ ಸತ್ತವರ ಹೆಸರಿಟ್ಟು ಗುಗ್ಗರಿಯ
ತಿಂದು ತೂಗುವರು ಸರ್ವಜ್ಞ

ನೆಲವನ್ನು ಮುಗಿಲನ್ನು ಹೊಲಿವರುಂಟೆಂದರವ
ಹೊಲಿವರು ಹೊಲಿವರೆನಬೇಕು ಮೂರ್ಖನಲಿ
ಕಲಹವೇ ಬೇಡ ಸರ್ವಜ್ಞ

ಒಂದಾಡ ತಿಂಬಾತ ಹೊಂದಿದೊಡೆ ಸ್ವರ್ಗವನು
ಎಂದೆಂದು ಅಜನ ಕಡಿತಿಂಬ ಕಟುಕ ತಾ
ಸಂಪ್ರನೇಕಾಗ ಸರ್ವಜ್ಞ

ಈ ವಚನಗಳಲ್ಲೆಲ್ಲ ಹೆಚ್ಚಾಗಿ ಬರುವ ನಗುವೆಂದರೆ, ಪರರ ತಪ್ಪು ನಡೆವಳಿಕೆಗಳನ್ನು ಕಂಡು ನಕ್ಕುದೇ. ಇದು ವೀರಶೈವ ವಚನಗಳಲ್ಲಿ ಮಾತ್ರವಲ್ಲ, ದಾಸರ ಪದಗಳಲ್ಲೂ ಕಂಡುಬರುತ್ತದೆ:

ಕಂಚುಗಾರರ ಬಿಡಾರಮಂಡಪಲಿ
ಕಂಚು ಒತ್ತಾಳೆ ಪ್ರತಿಮೆ ನೆರಹಿ
ಮಿಂಚಲೆಸುತ ಬಹು ಜ್ಯೋತಿಗಳನೆ ಹಚ್ಚಿ
ವಂಚನೆಯಲಿ ಘನ ಪೂಜೆ ಮಾಡುವುದು

ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ

ಎಂದು ಪುರಂದರದಾಸರು ಒಮ್ಮೆ ಒಬ್ಬ ಆಷಾಢಭೂತಿಯನ್ನು ಕುರಿತು ಹೇಳಿದರಂತೆ.

ಇನ್ನೊಂದುಸಲ

ಆರು ಬದುಕಿದರಯ್ಯ ಹರಿ ನಿನ್ನ ನಂಬಿ
ತೋರು ಈ ಜಗದೊಳಗೆ ಒಬ್ಬರನು ಕಾಣೆ

ಕಲಹಬಾರತದ ಹಾಗೆ ಕರ್ಣನನು ನೀ ಕೊಂದೆ
ಸುಲಭದಲಿ ಕೌರವನ ಮನೆಯ ಮುರಿದೆ
ನೆಲವ ಬೇಡುತ ಪೋಗಿ ಬಲಿಯ ತನುವನು ತುಳಿದೆ
ಮೊಲೆಯನುಣಿಸಲು ಬಂದ ಪೂತನಿಯ ಕೊಂದೆ

ತಿರಿದುಂಬ ದಾಸರ ಕೈಲಿ ಕಷ್ಟವ ಕೊಂಬೆ
ಗರುಡವಾಹನ ನಿನ್ನ ಚರಿಯವರಿಯೆ
ದೊರೆ ಪುರಂದರ ವಿಠಲ ನಿನ್ನ ನಂಬಿದರೆ
ತಿರುಪೆಯು ಹುಟ್ಟಲೊಲ್ಲದು ಕೇಳೊ ಹರಿಯೆ

ಎಂದು ದಾಸರು ಒಮ್ಮೆ ದೇವರೊಡನೆ ಸರಸವಾಡಿದರು.

ಅನ್ಯರ ನಡವಳಿಕೆಗಳನ್ನು ಈ ವೈಷ್ಣವ ದಾಸರೂ ಶಿವಶರಣರೂ ನಗೆಗೆ ಈಡುಮಾಡಿದಂತೆ ಬ್ರಹ್ಮಶಿವನೆಂಬ ಜೈನನು ಜೈನೇತರರನ್ನು ನೋಡಿ ನಕ್ಕಿದ್ದಾನೆ:

ಬಗೆವೊಡದೇನಾನುಂ ಬಾ
ಟ್ತೆಗಲ್ಲನೆನಿಪರಳಿಗೊಲ್ದು ಪೊಡೆವಡುವವನಾ
ಚಿಗುರುಂ ಪೂವುಂ ಕಾಯುಂ
ಸೊಗಯಿಪ ಮಾವಿಂಗೆ ಪುಣಿಸೆಗೆಱಗಲ್ವೇಡಾ

ಒಡಲೊರ್ವಾಗಮಸಿತ್ತಂ
ಗಡ ಕಾಂತೆಗೆ ಶಂಭು ಶಂಭುಗಂ ಕೊಟ್ಟಳ್ ತ
ನ್ನೊಡಲೊರ್ವಾಗಮನಗಸುತೆ
ಗಡ ಮಿಕ್ಕರಡರೆಯನಾರ್ಗೆ ಕೊಟ್ಟರೆ ಪೇಟಿಂ
ಇದು ಯುಕ್ತಮಪ್ಪ ಪಲ್ಲೆ
ನ್ನದೋತಿ ತಲೆಮೇಲೆ ಬೀಳೆ ಬೋಳಿಪರಾ ಅಂ
ಪದ ಬುದ್ಧಿ ಮಂತರಂತದು
ತುದಿಮೂಗಿನ ಮೇಲೆ ಜೀಳ್ವೊಡಪನೇಗೈಯ್ವರ್

ಎಂದು ಮುಂತಾದ ಅನೇಕ ಕಹಿನಗುವಿನ ತುಣುಕುಗಳನ್ನು ತನ್ನ 'ಸಮಯಪರೀಕ್ಷೆ'ಯ ತುಂಬ ತುಂಬಿದ್ದಾನೆ.

ಪ್ರತಿ ಕನ್ನಡ ಕಾವ್ಯದ ಆರಂಭದಲ್ಲಿಯೂ ಕಾಣುವ ಕುಕವಿ ನಿಂದಾದಿಗಳಲ್ಲಿಯೂ ಈ ಕಹಿನಗು ಏನೂ ಕಡಮೆಯಾಗಿಲ್ಲ :

ಬರೆದಾಪ ಬರೆಪೆ ಭಾಪುರೆ
ಬರೆದಕ್ಕಟ ಬರೆವೆ ಲೇಸು ಬರೆವೆಯೆನುತ್ತುಂ
ಬಱಿವೆ ತಲೆದೂಗುವುದಱಿಂ
ಬಱಿವಪ್ಪುದು ಕಾವ್ಯಮಱಿಯುದರ ಜಾಣಿಂದಂ

ಎಂದು ಹರಿಹರನು ಹೇಳಿದರೆ, ಷಡಕ್ಷರಿಯನ್ನು ಯಾವನೋ ಏನೋ ಕೆಣಕಿ ಈ ಕಿಡಿ ಹಾರಿಸಿದ್ದಾನೆ :

ಸಲೆ ಸತ್ಕೃತಿಯೊಳ್ ದೋಷಮ
ನಲಸದೆ ನಡೆ ನೋಡಿ ನೋಡಿ ಕಾಣದೆ ಮನದೊಳ್
ಮಲಮಲನೆ ಮರುಗುವೀ ಕೋ
ಟಲೆಯಿಂ ಖಳನೆಂತು ಬರ್ದುಕುವಂ ಭೂತಲದೊಳ್

ಅದರಿಂ ದೋಷಾಭಾಸಮ
ನೊದವಿಪರೊಂದೆಡೆಗೆ ದುರ್ಜನಸ್ತುಷ್ಯತು ಎಂ
ಬುದನನುಕರಿಸಿ ಕವೀಂದ್ರರ್
ಪದಪಿಂ ಕೃತಿಯೊಳ್ ಪರೋಪಕೃತಿ ಪರತಂತ್ರರ್

ಈ ಸಾಹಿತ್ಯ ಜಾತಿಯ ಸಾಗರಕ್ಕೆ ಈ ಮೂರು ಮುತ್ತಿನ ಮಾದರಿ ಸಾಕು. ಸಮುದ್ರದಲ್ಲಿರುವಂತೆಯೇ ಇಲ್ಲಿಯೂ ಬಾಯಿಗೆ ಹಾಕಲಾರದ ಉಪ್ಪಿನ ಹನಿಗಳು ಹೇರಳವಾಗಿವೆ.

ಇಂತಹ ಕಹಿನಗುವಿನಲ್ಲಿರುವ ದೋಷವೆಂದರೆ ಕೆಲವರ ಪಾಲಿಗೆ ಅದು ಕೇವಲ ನಗುವಾಗುತ್ತದೆ, ಕೆಲವರ ಪಾಲಿಗೆ ಅದು ಕೇವಲ ಕಹಿಯಾಗಿಯೇ ಉಳಿಯುತ್ತದೆ. ಇಂತಹ ಭಾಗ ಅರ್ಥವಾದಷ್ಟೂ ಅನರ್ಥವಾಗುವುದೇ ಹೆಚ್ಚು.

ಜನರ ಅಜ್ಞಾನವನ್ನು ಕಳೆದು ಅವರಿಗೆ ಸುಜ್ಞಾನ ಕೊಡುವ ಉದ್ದೇಶದಿಂದ ವಚನಕಾರರೂ ದಾಸರೂ ಕೆಲವು ಕಡೆ ನಗೆಯನ್ನು ಉಪಯೋಗಿಸಿಕೊಂಡಿದ್ದರೂ, ಅವರ ನೀತಿನಿರೂಪಣೆಯೂ ತತ್ತ್ವಬೋಧೆಯೂ ಆ ನಗುವನ್ನು ನುಂಗಿಬಿಟ್ಟಿದೆ. ಹುಡುಕಿದ ಹೊರತು ಅದನ್ನು ಹೆಸರಿಸುವಂತಿಲ್ಲ.

ಜನಪದ ಸಾಹಿತ್ಯವು ಇದೇ ಜಾತಿಯ ಸಾಹಿತ್ಯಕ್ಕೆ ಸೇರಿದರೂ, ಅದರಲ್ಲಿ ನಗು ಇದಕ್ಕಿಂತ ಶುಚಿಯಾಗಿದೆ, ಹಿತವಾಗಿದೆ.

ಸಣ್ಣ ಶಾವಿಗೆ ಒಲ್ಲ ಚಿನ್ನಿ ಸಕ್ಕರೆ ಒಲ್ಲ
ಹೆಣ್ಣೆಂಬ ಶಬುಸ ಬಿಡ ಒಲ್ಲ ನನ ತಮ್ಮ
ಹೆಣ್ಣು ಕೊಡತೀನಿ ಉಣ ಏಳೋ

ಮುಂತಾದ ಮುಕ್ತಕಗಳನ್ನಾಗಲಿ, ಹಲವು ಹಳೆಯ ಹೊಸ ಲಾವಣಿಗಳನ್ನಾಗಲಿ,

ನಂ ಬಹಳ ಪರಿಯಿಂದ ಮದುವೆ ಮಾಡುತಾವೆ
ಹುಲಿ ಮನೆಯೊಳಗೆ ಹೆಣ್ಣು ತೆಗೆದೀತು

ನೊಣ ಬಂದು ಅರಿಸಿನ ಹಚ್ಚೀತು
ನುಸಿ ಬಂದು ಕುಂಕುಮ ಹಚ್ಚೀತು

ಬೆಕ್ಕು ಬಾಸಿಂಗ ಕಟ್ಟೀತು
ಕಟ್ಟಿರುವೆ ಕಂಕಣ ಕಟ್ಟೀತು

ಮೊದಲಾದ ಹಾಸ್ಯದ ಹಾಡುಗಳನ್ನಾಗಲಿ, ವಿನೋದದ ಕತೆಗಳನ್ನಾಗಲಿ, ಹೆಚ್ಚೇಕೆ ಕೇವಲ ಕನ್ನಡದ ಗಾದೆಗಳನ್ನಾಗಲಿ ನೋಡಿದರೂ ಕನ್ನಡಿಗರ ನಗೆಯ ಜಾಯಮಾನ ತಿಳಿಯಬಹುದು.

ಅಭ್ಯಾಸವಿಲ್ಲದ ಬ್ರಾಹ್ಮಣ ಔಪಾಸನಕ್ಕೆ ಹೋಗಿ ಗಡ್ಡಮೀಸೆ ಸುಟ್ಟುಕೊಂಡ.

ಅಪ್ಪಾಭಟ್ಟರ ಸೊಸೆಯಾಗಿ ತಿಪ್ಪಾಭಟ್ಟರ ಮಗಳಾಗಿ ಲವಣ ಎಂದರೆ ಕಾಣೆನೇ ದೊಡ್ಡಮ್ಮ ಸೆಗಣಿ.

ಪೋಲಿಗೆ ತಾಲಿ ಕಟ್ಟಿದರೆ, ಪೋಲಿ ಪೋಲಿ, ತಾಲಿ ತಾಲಿ.

ಅಜ್ಜಾ ಮದುವೆ ಎಂದರೆ ಯಾರಿಗೆ ಸಂಗಾ ಎಂದಂತೆ.

ಹೋಮಮುಮಂ ಮಾಡುವ ಬ್ರಾಹ್ಮಣಂ ಸೊಣಪು ಬೆನ್ನನೂಱಿದೊಡೆ ಸ್ವೈರಿಸಲಾಱದೆ ಬೆನ್ನಂ ಪೊಯ್ಯುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿಕೊಂಡು ತಮ್ಮ ಬೆನ್ಗಳಂ ಪೊಯ್ದುಕೊಂಡರೆಂಬಂತೆ.

ಎಂದು ಮೊದಲಾದ ಕಡೆಯಿಲ್ಲದ ಗಾದೆಗಳಲ್ಲಿಯೂ ನಾವು ನಗು ಕಾಣಬಹುದು.

ಆದರೂ ಹೀಗೆ ನಿತ್ಯಜೀವನದಲ್ಲಿ ನಗೆಯನ್ನು ನಲಿದಾಡಿಸುತ್ತಿದ್ದ ನಾಡಿನಲ್ಲಿ ಹುಟ್ಟಿದ ಕವಿಗಳು ಮಾತ್ರ ತಮ್ಮ ಕಾವ್ಯಗಳಲ್ಲಿ ನಗೆಯನ್ನು ನಲಿಸಲಿಲ್ಲ. ಅದಕ್ಕೆ ಕಾರಣ ಕಾಣುವುದಕ್ಕೂ ದೂರ ಹೋಗಿ ಹುಡುಕಬೇಕಾಗಿಲ್ಲ.

ನಮ್ಮ ಕನ್ನಡ ಕವಿಗಳೆಲ್ಲರೂ ಪ್ರಸಿದ್ಧವಾದ ವಸ್ತುಗಳನ್ನೇ ತೆಗೆದುಕೊಂಡು ಕಾವ್ಯ ಬರೆದವರು. ಸ್ವಂತವಾಗಿ ವಸ್ತುವನ್ನು ಸೃಷ್ಟಿಸಿಕೊಳ್ಳುವ ಸಾಮರ್ಥ್ಯವಿದ್ದವರು ಕೂಡ ಅದರ ಗೋಜಿಗೆ ಹೋದವರಲ್ಲ. ಜೈನರು ತಮ್ಮ ಪುರಾಣಗಳ ಪವಿತ್ರವಸ್ತುವರ್ಣನದಿಂದ ತಮಗೆ ಪುಣ್ಯಸಂಪಾದನೆಯಾಗುವುದೆಂದು ನಂಬಿ ಬರೆದರು. ವೀರಶೈವರಂತೂ ಶಿವನಿಗೂ ಶಿವಶರಣರಿಗೂ ತಮ್ಮ ನಾಲಗೆಯನ್ನು ಮಾರಿಕೊಂಡೆವೆಂದು ಕಂಠೋಕ್ತವಾಗಿ ಹೇಳಿಕೊಂಡರು. ಬ್ರಾಹ್ಮಣರಾದರೋ ರಾಮಾಯಣ ಭಾರತ ಭಾಗವತಗಳಿಗೇ ನಿಂತರು. ಅಷ್ಟಿತಷ್ಟಿ ಈ ವಸ್ತುಗಳನ್ನು ಬಿಟ್ಟು ಬರೆದುದು ಕನ್ನಡದಲ್ಲಿ ಏನಾದರೂ ಇದ್ದರೆ, ಅದಕ್ಕೂ ಸಂಸ್ಕೃತದ ಮೂಲ ಸಿದ್ಧವಾಗಿ ಕಾದಿದೆ. ನಾಗವರ್ಮನ ಕಾದಂಬರಿಯೇ, ಬಾಣಭಟ್ಟ ಇದ್ದಾನೆ; ನೇಮಿಚಂದ್ರನ ಲೀಲಾವತಿಯೇ, ಸುಬಂಧುವಿನ ವಾಸವದತ್ತೆ ಇದೆ; ದುರ್ಗಸಿಂಹನ ಪಂಚತಂತ್ರವೇ, ವಸುಭಾಗಭಟ್ಟನಿದ್ದಾನೆ; ವೃತ್ತವಿಲಾಸನ ಧರ್ಮಪರೀಕ್ಷೆಯೆ, ಅಮಿತಗತಿಯ ಧರ್ಮಪರೀಕ್ಷೆಯಿದೆ; ಇನ್ನೂ ಹೀಗೆಯೇ.

ಹೀಗೆ ಬೇರೆಯ ಮೂಲವೊಂದನ್ನು ಆಧರಿಸಿ ಬರೆದವರೆ ನಮ್ಮಲ್ಲಿ ಹೆಚ್ಚು. ಆದುದರಿಂದ ಮೂಲದಲ್ಲಿ ನಗುವಿದ್ದ ಕಡೆ ಇವರ ಕಾವ್ಯಗಳಲ್ಲಿಯೂ ನಗುವನ್ನು ಕಾಣುವುದು ಸಹಜವಾಗಿಯೇ ಇದೆ. ಇದರಿಂದ ಇವರಿಗೆ, ನಗುವಿನಮಟ್ಟಿಗೆ, ಕೀರ್ತಿಯೂ ಇಲ್ಲ, ಅಪಕೀರ್ತಿಯೂ ಇಲ್ಲ. 'ಮಕ್ಷೀ ಕಾ ಮಕ್ಷೀ.'

ಆದರೆ ರತ್ನಾಕರ ಕವಿ ಮಾತ್ರ ಪ್ರಸಿದ್ಧವಾದ ವಸ್ತುವನ್ನೇ ಆಯ್ದುಕೊಂಡರೂ ಧೈರ್ಯವಾಗಿ ಸ್ವಾತಂತ್ರ್ಯವಹಿಸಿ ಸಂಪ್ರದಾಯದ ಕತೆಯಲ್ಲಿ ಕಾಣದ ಅನೇಕ ಸಂದರ್ಭಗಳನ್ನು ಸೃಷ್ಟಿಸಿದ್ದಾನೆ. ಈ ಸೃಷ್ಟಿಗಳನ್ನು ಓದಿದರೆ ನಮಗೆ ಅತಿಯಾಗಿಯೋ ಮಿತಿಯಾಗಿಯೋ ನಗು ಬರುತ್ತದೆ. ಅವು ನಗು ಬರಬೇಕಾದ ಸಂದರ್ಭಗಳೆಂದು ಕವಿಯೂ ಅಲ್ಲಲ್ಲಿ ಸೂಚನೆಗಳನ್ನು ಪ್ರೇರಕವಾಗಿ ನಿಲ್ಲಿಸಿದ್ದಾನೆ. ನಂದಳಿಕೆ ನಾರಣಪ್ಪನವರೂ ಹೀಗೆಯೆ; ಕ್ರಮದಲ್ಲಿ ಮಾತ್ರ ಕೊಂಚ ವ್ಯತ್ಯಾಸ. ಇವರು ಆಯ್ದುಕೊಂಡ ವಸ್ತುವಾದರೂ ಪ್ರಸಿದ್ಧವಾದದ್ದೇ, ರಾಮಾಶ್ವಮೇಧದ ಕತೆ. ಅದೇ ಕತೆಯನ್ನು ಸಂಪ್ರದಾಯಬದ್ಧವಾಗಿ ಹೇಳುತ್ತಾ ಬಂದರೂ, ತಮ್ಮ ಮುದ್ದಣ- ಮನೋರಮಾ ಸೃಷ್ಟಿಯಿಂದ ಆ ಕತೆಯ ದೌರ್ಬಲ್ಯಗಳನ್ನು ಮನೋರಮವಾಗಿ ನಿರೂಪಿಸಿ ಅದನ್ನು ನಗೆಗೆ ಈಡುಮಾಡಿದ್ದಾರೆ. ಈ ಇಬ್ಬರಲ್ಲಿ ಕಾಣುವ ಈ ನವೀನ ನಗೆಗಾರಿಕೆಯ ಎಂಟೆದೆಗಾರಿಕೆಯನ್ನು ಇವರಿಬ್ಬರಲ್ಲಿ ಮಾತ್ರ ಕಾಣಬೇಕು.

# ೪. ಮದನಮದಭಂಗ

ನಗೆಯನ್ನು ಕಡೆಗಣಿಸಿದ್ದವರ ನಡುವೆ ಅದೇ. ನಗೆಯನ್ನು ಕೈ ಹಿಡಿದು ಕುಣಿಸಿಕೊಂಡು ಕರೆದುತರಬಲ್ಲ ಗಂಡು ಅವನೀಗ ಗಂಡು! ಅದಕ್ಕೇ ರತ್ನಾಕರನೆಂದರೆ ಅಷ್ಟು ಮೆಚ್ಚು. ಹದಿನಾರನೆಯ ಮನುವಾಗಿ, ಪ್ರಥಮಚಕ್ರೇಶ್ವರನಾಗಿ, ಸಂಪ್ರದಾಯದಲ್ಲಿ ಸ್ಮಿತರಹಿತನಾಗಿ ಶಾಶ್ವತನಾದ ಶಲಾಕಾಪುರುಷ ಭರತನನ್ನು 'ನಗೆಗಾರ'ನನ್ನಾಗಿ ಮಾರ್ಪಡಿಸುವ ಧೈರ್ಯವಂತ ಅವನೀಗ ಧೀರ. ಈ ಮಾರ್ಪಾಟಿನಿಂದ ಅವನ ಜನಜನಿತವಾದ ಘನತೆಗೆ ಲವಲೇಶ ಕುಂದು ಬಾರದಂತೆ ಕಾಯ್ದ ನಿಪುಣತೆ ಅದೇ ಬುದ್ಧಿ. ರತ್ನಾಕರ ಇಂತಹ ಗಂಡು, ಇಂಥ ಧೀರ, ಇಂಥ ಬುದ್ಧಿವಂತ.

ರತ್ನಾಕರನ ಭರತೇಶ್ವರ ನಗೆಯನ್ನು ಸೃಷ್ಟಿಸಿದ ನಾಲ್ಕು ಸಣ್ಣ ಸಂದರ್ಭಗಳನ್ನು ಹಿಂದೆ ಉದಾಹರಿಸಿತ್ತು. ಅವುಗಳಾಗಲಿ ಅವುಗಳ ಅನಂತರ ಕೊಟ್ಟ ಎರಡು ದೀರ್ಘ ಪ್ರಕರಣಗಳಾಗಲಿ ಜೈನಪುರಾಣಗಳಲ್ಲೆಲ್ಲೂ ಕಂಡುಕೇಳಿದವುಗಳಲ್ಲ. ಹೀಗೆ, ಪ್ರಸಿದ್ಧನಾದ ನಾಯಕನ ವಿಷಯವಾಗಿ ಯಾರೂ ಕಂಡು ಕೇಳಿ ಅರಿಯದ ಕತೆಗಳನ್ನು ಕಟ್ಟುವ ಕಾರ್ಯ ಒಂದು ತೂಕವಾದರೆ, ಅವನನ್ನು ಕುರಿತು ಪ್ರಚಾರದಲ್ಲಿರುವ ಕತೆಯ ವ್ಯತ್ಯಾಸ ಮಾಡುವ ಕಾರ್ಯ ಹತ್ತರಷ್ಟು ತೂಕ. ಇಂಥ ಒಂದು ಗುರುತರವಾದ ಕಾರ್ಯವನ್ನು ಕೈಕೊಂಡು ರತ್ನಾಕರ ಅದನ್ನು ಯಶಸ್ವಿಯಾಗಿ ಕೊನೆಮುಟ್ಟಿಸಿದ್ದಾನೆ. ಭರತ ಬಾಹುಬಲಿಗಳ ಪ್ರಸಂಗವನ್ನು ಕುರಿತೇ ನಾನು ಇಲ್ಲಿ ಆಡುತ್ತಿರುವುದು. ಇದರ ಬಗ್ಗೆ ಹೆಚ್ಚು ಹೇಳುವ ಮುಂಚೆ ಈ ಪ್ರಕರಣದಲ್ಲಿ ಸಂಪ್ರದಾಯವೇನು, ಇದರಲ್ಲಿ ರತ್ನಾಕರ ನಡಸಿರುವ ಮಾರ್ಪಾಡೇನು ಎಂಬುದನ್ನು ತಿಳಿದರೆ ವಾಸಿ.

ಮೊದಲು ಸಂಪ್ರದಾಯದ ಕತೆಯನ್ನು, ಪಂಪ ಮಹಾಪುರಾಣದ ಆಧಾರದ ಮೇಲೆ ರಚಿಸಿರುವಂತೆ, ನೋಡೋಣ:

ಆದಿತೀರ್ಥಂಕರನು ತಾನು ತನ್ನ ಪರಿನಿಷ್ಕ್ರಮಣಕಲ್ಯಾಣವನ್ನು ಆಚರಿಸುವಾಗ ತನ್ನ ಮೊದಲ ಹೆಂಡತಿಯ ಹಿರಿಯ ಮಗನಾದ ಭರತನಿಗೆ ಅಯೋಧ್ಯೆಯಲ್ಲಿ ರಾಜ್ಯಾಭಿಷೇಕಮಾಡಿ, ಎರಡನೆಯ ಹೆಂಡತಿಯ ಮಗನಾದ ಬಾಹುಬಲಿಗೆ ಪೌದನಪುರದಲ್ಲಿ ಯೌವರಾಜ್ಯಾಭಿಷೇಕ ಮಾಡಿ, ಉಳಿದ ಮಕ್ಕಳಿಗೂ ಇತರ ಭೂಭಾಗಗಳನ್ನು ಹಂಚಿ ಹೋದನು. ಆದಿನಾಥನ ಕೈವಲ್ಯಬೋಧೋತ್ಸವ ಕಾಲದಲ್ಲಿ ಭರತನಿಗೆ ಚಕ್ರರತ್ನ ಪ್ರತ್ಯಕ್ಷವಾಯಿತು. ಆತ ಅದರ ಬಲದಿಂದ ದಿಗ್ವಿಜಯಕ್ಕೆ ಹೊರಟು, ಷಟ್ಖಂಡ ಭರತವನ್ನು ಗೆದ್ದು, ಅರುವತ್ತು ಸಾವಿರ ವರ್ಷಗಳನಂತರ ಅಯೋಧ್ಯೆಗೆ ಹಿಂದಿರುಗಿದನು. ಆದರೆ ಆಯೋಧ್ಯಾಪುರದ ಬಳಿ ಆ

ಹತವೈರಿಕ್ಷತ್ರಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರ
ಕ್ಷಿತಿಚಕ್ರಂ ದೀಪದೀಪ್ತಿಪ್ರತಿಹತ ದಿನಕೃಚ್ಚಕ್ರತೀವ್ರಾಂಶುಚಕ್ರಂ
ಜಿತದಿಕ್ಚಕ್ರಂ ಪ್ರಭಾಪ್ರಜ್ವಳಿತದಶದಿಶಾಚಕ್ರಮುಗ್ರಪ್ರತಾಪೋ
ರ್ಜಿತ ತೇಜಶ್ಚಕ್ರಮಿರ್ದತ್ತೊಳಪುಗವೆ ಪುರೋಪಾಂತದೊಳ್ ಚಕ್ರಿಚಕ್ರಂ

ಚಕ್ರವೇಕೆ ನಿಂತುದೆಂದು ಅರಸನಿಗೆ ಅರಿವಾಗಲಿಲ್ಲ. ಪುರೋಹಿತ ರತ್ನನನ್ನು ಬರಿಸಿ ಕೇಳಿದ. ಅದಕ್ಕೆ ಅವನು

ನಿನ್ನನುಜರಸಿಬರುಂ ಮಾ
ನೋನ್ನತರಣಮೆಱಗರವರೊಳಗ್ಗಳದದಟಂ
ತನ್ನಭಿಮಾನದ ಭುಜಬಲ
ದುನ್ನತಿಯನೆ ಮೆಱೆವ ಬಾಹುಬಲಿ ಮುನ್ನೆಱಗಂ

ಎಂದು ಹೇಳಿ, ಅವರು ಎರಗುವವರಲ್ಲವೆಂಬ ಕಾರಣದಿಂದಲೇ ಚಕ್ರದ ಚಲನೆ ನಿಂತುದೆಂದು ತಿಳಿಸಿದನು. ಅದನ್ನು ಕೇಳಿ "ಭರತೇಶ್ವರನಕಾಲ ಯಮರಾಜಲೀಲೆಯಂ ಕೈಕೊಂಡಂ";

ಏನೇನೋ ಮದನುಜರೆನ
ಗಾನತರಣಮಾಗದಿರ್ದರಾಮುಪಮವರ್ಗೇ
ನೇನೇತಱೊಳಾದುದಸಿನಿ
ಸಾನುಂ ಬೇಗದೊಳೆ ಕಳೆದು ತೋಱೆನೆ ರಣದೊಳ್

ಎಂದು ಕೂಗಾಡಿದ. ಕಡೆಗೆ ಪುರೋಹಿತನ ಮಾತಿನಂತೆ ತಮ್ಮಂದಿರನ್ನು ಬರಹೇಳಿ ಶಾಸನಹರರನ್ನು ಅಟ್ಟಿದ. ಅವರು "ಪಿರಿಯಣ್ಣಂ ಗುರು

ತಂದೆಯೆಂದಱಿಗುವಂ ಮುನ್ನೆಲ್ಲಮಿಂತೀಗಳಾಳರಸೆಂಬೊಂದು ವಿಭೇದ ಮಾಡೊಡೆಱಕಂ ಛೀಃ ಕಷ್ಟಮುಲ್ತೇ" ಎಂದು ಧರಾಭಾರವನ್ನು ತೊರೆದು ತಪಸ್ಸಿಗೆ ನಡೆದರು. ಭರತನು ಅದನ್ನು ಕೇಳಿ ವಿಸ್ಮಿತನಾಗಿ, "ನನ್ನ ಸ್ವಂತ ತಮ್ಮಂದಿರೇ ಹೀಗೆ ನನಗೆರಗದೆ ಹೋದರೆಂದಮೇಲೆ ಬಾಹುಬಲಿ ಯನ್ನು ಹೇಗೆ ಎರಗಿಸಲಿ ?" ಎಂದು ಚಿಂತಿಸಿ, "ಮೊದಲು ಸಾಮದಿಂದ ಯತ್ನಿಸುವೆನು. ಅದಾಗದಿದ್ದರೆ ದಂಡವಿದ್ದೇ ಇದೆ" ಎಂದು ಮಹಾಸಂಧಿ ವಿಗ್ರಹಿಯನ್ನು ಕಳಿಸಿದನು. ಅವನೊಡನೆ ಕಳಿಸಿದ ಓಲೆಯಲ್ಲಿ "ಚಕ್ರರತ್ನ ಪ್ರಭಾಸಾದಿತನಿಖಿಲದಿಕ್ಚಕ್ರಂ ಭರತೇಶ್ವರ ಚಕ್ರವರ್ತಿ ನಿಜಪ್ರಿಯಾನುಜ ಬಾಹುಬಲಿಕುಮಾರನಂ ಪರಮಾಶೀರ್ವಾದದಿಂ ಪರಸಿ ಕನಕಪತ್ರಾಂಕಿತ ಕಾರ್ಮುಕಲತಾಲಂಬನಂಗಳುಂ ವಿಜಯೋತ್ಸವತೋರಣಸ್ತಂಭಂಗಳುಂ ವೀರಶ್ರೀಭುಜಂಗೀಸಮಾಶ್ರಯಶ್ರೀಖಂಡಕಾಂಡಂಗಳುಮಪ್ಪದೋರ್ದಂ ಡಂಗಳಿಂದಮತಿನಿಬಿಡಾಲಿಂಗನಂಗೆಯ್ದು" ಎಂದು ಒಕ್ಕಣೆ ಹಾಕಿಸಿ, ಮೊದಿಕೆಯೊಳಗೆ ಮೇದರಿಕೆಯನ್ನು ಹುದುಗಿಸಿಟ್ಟ. ಆದರೆ ಬಾಹುಬಲಿ ಸಹಜವಾದ ಸೋದರವಾತ್ಸಲ್ಯದಿಂದ ಆ ಒಕ್ಕಣೆಯೊಳಗಿನ ಧ್ವನಿಯನ್ನು ಗುರುತಿಸದೆ, ಅಣ್ಣನ ಕ್ಷೇಮಲಾಭವನ್ನು ತಿಳಿಯುವುದರಲ್ಲಿ ಕಾತರತೆ ತೋರಿದ. ಸಂಧಿವಿಗ್ರಹಿ ಅವನ ಕುತೂಹಲವನ್ನು ಪೂರೈಸಲು ಭರತೇಶ್ವರನ ದಿಗ್ವಿಜಯವನ್ನು ಸಾಂಗವಾಗಿ ವಿವರಿಸಿ, ಕಡೆಗೆ "ಹೀಗೆ ಚಕ್ರರತ್ನ ಅವನ ಅಹಿತರನ್ನೆಲ್ಲಾ ಅವನಿಗೆ ಸಾಧಿಸಿಕೊಟ್ಟಿತು. ಈಗ

ಎನ್ನ ಗುಣಗದಮ್ಮನಿಲ್ಲದೆ  
ಬಿನ್ನನೆ ಸಾಮ್ರಾಜ್ಯಮಿನಿತುಮಾದೊಡಱಕಮುಮು  
ತ್ಪನ್ನಶ್ರೀಯುಲ್ತೆನಗಾತಂ  
ಮುನ್ನೆಱಗನೊಡೆಂದು ಬೆಸಸಿಯಟ್ಟಿದನೆನ್ನಂ

ವಿನಯಂ ಸಹಜಂ ಕೃತ್ರಿಮ  
ಮೆನಿಸಿಱವವು ಬೇಱಿಸೇಱಿ ವಿಶ್ವಜ್ಞನಮಂ  
ಮನದೆಗೊಳಿಸುವುವಿವೆರಡುಂ  
ನಿನಗೊಳವಾದಾದ ಮನಮುಮಂ ರಂಜಿಸವೇ"

ಎಂದನು. ಅದನ್ನು ಕೇಳಿ ಬಾಹುಬಲಿ 'ಕೋಪಗರ್ಭಸ್ಮಿತಂ ಬೆರಸು'

ಮುನ್ನಂ ಸಾಮಮನೆನ್ನ ಮ
ನನ್ನೋಡಲ್ ನುಡಿದು ಭೇದಮಂ ದಂಡಮುಮಂ
ನಿನ್ನಱಿವಸಿತಂ ನುಡಿದೆಯಿ
ದೇನ್ನುಡಿಗಳೊ ಸಮಱಿಕೊಂಡ ನುಡಿಗಳ್ ನಿನ್ನಾ

ಎಂದು ಗದರಿಸಿ,

ಧರೆಯೊಳ್ ಕುಲಾಲಚಕ್ರಂ
ತಿರಿವಂತಿರೆ ತಿರಿಪಿ ಚಕ್ರಮುದಱಿಪಿ ಬಱಿಯುಂ
ತಿರಿತಿರಿದು ಮಾಡಿದಂ ಕುಲ
ಧರಕುಲದೊಳ್ ಪಿಱಿದು ಮಹಿಮೆಯುಂ ನಿಮ್ಮರಸಂ

ಎಂದು ಮೊದಲಾಗಿ ಭರತನ ದಿಗ್ವಿಜಯವನ್ನು ಮೂದಲಿಸಿ, ಕೊನೆಗೆ

ಪಿರಿಯಣ್ಣಂಗೆಱಗುವುದೇಂ
ಪರಿಭವಮೋ ಕೀಱಿ ನೆತ್ತಿಯೊಳ್ ಬಾಳಂ ನಿ
ರ್ನೆರಮೂಱಿ ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮುಂಜಮೆಯುತ್ತೇ

ಪುರುತನಯರ್ ಭುಜಬಲಿಯುಂ
ಭರತನುಮೆನೆ ದೊರೆಗೆವಂದೊಡಾರೆಳ್ಪ್ರಮುಸೀ
ಧರೆಯುಱಿಯುಲೊಡಂ ತೂಗಲ್
ಧರೆಗೆ ತುಲಾದಂಡಮುತ್ತೆ ಮುಷ್ಟಿಜದಂಡಂ

ಎಂದು ವೀರೋಚಿತವಾದ ಮಾತನಾಡಿ, "ಉದಾರವೀರಚರಿತನಿರತ ಕದನಕರ್ಕಶಕ್ಷತ್ರಿಯಂಗೆ ವಿಪಕ್ಷಕ್ಷತ್ರಿಯಪರಾಕ್ರಮಾಕರ್ಣನೋದೀರ್ಣ ಕ್ರೋಧದೊಳ್ ನಿರಾಲಂಬನವಾಗಾಡಂಬರಂ ತಕ್ಕುದಲ್ತು .... ಆಜಿಗೆ ಬಂದೊಡ್ಡಲ್ಕೆ ಪೇೞ್ ಸಂಗರನಿಕಷದೊಳೆಮ್ಮಂದಮುಂ ನೀನೆ ಕಾಣ್ಬೈ" ಎಂದು ಆ ದೂತನನ್ನು ಹೋಗಹೇಳಿದನು. ಆ ದೂತನು ವಿಗತ ಮದನಾಗಿ ತನ್ನ ಅರಸನ ಬಳಿ ಬಂದು

ನಿನಗೀ ಷಟ್ಖಂಡಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ
ತ್ತನೊಳಿನ್ನೇನೆಂಪು ದೇವರ್ಕದೆಗಣಿಸಿರೆ ಸೌಂದರ್ಯಮಂ ಕಾದ ಪೆಂಪೀ
ವನಧಿದ್ವೀಪಾಂತರಾಳಕ್ಷಿತಿಯೊಳೆಸಗುವಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ

ಎಂದು ಅವನಿಗೆ ಎಷ್ಟೆಷ್ಟೋ ಹಿತವಾದ ಹೇಳಿದ. ಅದು ಭರತನ ಕಿವಿಗೂ ತಾಗಲಿಲ್ಲ.

ತುದಿಯೆಯ್ದುತ್ತೆಮ್ಮ ವಿಶ್ವಕ್ಷಿತಿತಳಜಯಮಿಂತೆಮ್ಮ ದಾಯಾದನುಂ ಕೋ
ಪದಿನೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾ
ಣ್ಬುದು ಸೂಱೆಲ್ತೆಮ್ಮ ಸಾಪತ್ನನ ಭುಜಬಲಮುಂ ನೋೞ್ಪೆವೆಂದಾಗಳಾಸ್ಥಾ
ನದಿನೆೞ್ದಂ ಚಕ್ರಿರಾಜನ್ಯಕಮುಕುಟಮಣಿಪ್ರೋಜ್ಜ್ವಳದ್ವ್ಯೋಮಚಕ್ರಂ

ಆಗ 'ಭೂಭುವನಾಂತರ್ಭಾಗಮುಂ ಪರ್ಬಿದುದು ಸಮರಸನ್ನಾಹಭೇರೀ ನಿನಾದಂ', ಭರತನ ಸೇನೆ ಪೌದನಪುರಾಭಿಮುಖವಾಗಿ ನಡೆದುದು.

ಹೀಗೆ, ಚರಮದೇಹಧಾರಿಗಳಾದ ಭರತ ಬಾಹುಬಲಿಗಳಿಬ್ಬರೂ ಸೇನಾಸಮೇತರಾಗಿ ಯುದ್ಧಕ್ಕೆ ಸನ್ನದ್ಧರಾದುದನ್ನು ಎರಡೂ ಕಡೆಯ ಮಂತ್ರಿಮುಖ್ಯರು ಕಂಡು, "ನೀವು ಚರಮಶರೀರಿಗಳಾದುದರಿಂದ ಈ ಯುದ್ಧದಲ್ಲಿ ಪ್ರಜಾವಿನಾಶವಲ್ಲದೆ ಬೇರೆಯಿಲ್ಲ. ಸಕಲಜನರನ್ನು ಸಂಹರಿಸುವ ಈ ಯುದ್ಧದಿಂದೇನು ಬರುತ್ತದೆ? ಅದರಿಂದ ಬರುವ ಪಾಪವನ್ನೂ ಅಯಶಸ್ಸನ್ನೂ ಬಯಸಬೇಡಿ. ಧರ್ಮಯುದ್ಧ ಮಾಡಿ. ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧಗಳಲ್ಲಿ ಜಯವನ್ನು ಕೈಕೊಳ್ಳಿ. ಮುದುಗಣ್ಗಳಾದ ನಮ್ಮ ಮಾತನ್ನು ಸಲಿಸಿ" ಎಂದು ಬೇಡಿದರು. ಅದಕ್ಕೆ ಭರತನು "ಇಂತಾದೊಡೆಮಗೆ ಬಾಹುಬಲಿಯ ಸಮರಸಂಘಟ್ಟ ದೋಹಳಮಿದು ದರಿದ್ರಂಗೆ ಹೀನಗರ್ಭದೋಹಳದಂತಾದುದೆಂದು" ಹೇಳಿ ಮನಸ್ಸಿಲ್ಲದ ಮನಸ್ಸಿನಲ್ಲಿ ಅವರ ಮಾತಿಗೆ ಸಮ್ಮತಿಸಿದನು. ಬಾಹುಬಲಿ ತಾನು ಕೂಡ

ಎನ್ನ ಚತುರಂಗಬಲಮನಿ
ದನ್ನರರಾಂಪನ್ನರೆಂಬ ನಿಮ್ಮರಸನ ಗ
ರ್ವೋನ್ನತಿಯುಮುಡುಗುಮನಿಸಾ
ನುನ್ನೋಡಿಂ ಧರ್ಮಯುದ್ಧಮಕ್ಕೆಮ ಬೞಿಯುಂ

ಎಂದು ಮೊದಲು ಕೋಪಗೊಂಡರೂ, ಬಳಿಕ ಅಸದಾಗ್ರಹವನ್ನು ಬಿಟ್ಟು ಪ್ರಸನ್ನಗಂಭೀರಚಿತ್ತದಿಂದ ಅವರ ಮಾತನ್ನು ಅವಧಾರಿಸಿ ಅವರಂತೆ ನಡೆಯಲು ಒಡಂಬಟ್ಟನು.

ಐನೂರು ಬಿಲ್ಲೆತ್ತರದ ಭರತನೂ ಐನೂರಿಪ್ಪತ್ತೈದು ಬಿಲ್ಲೆತ್ತರದ ಬಾಹುಬಲಿಯೂ ಎದುರೆದುರು ನಿಂತರು. ಧರ್ಮಯುದ್ಧ ತೊಡಗಿತು. ದೃಷ್ಟಿಯುದ್ಧ ಮೊದಲಾಯಿತು.

ಲಲಿತಮುಖಸರಸಿಜಂ ಸಿ
ಥಿಲಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕ
ಣ್ಗೊಳಿ ತವೆ ಪೀರ್ವವೊಲೇ ಸಿ
ಥಿಲತನು ನಡೆನೋಡೆ ಭರತರಾಜಂ ಸೋಲ್ತಂ

ಮುಂದೆ ಜಲಯುದ್ಧಕ್ಕೆ ತೊಡಗಿದರು. ಭರತನು ಎರಚಿದ ನೀರು ಬಾಹುಬಲಿಯ ಎದೆಗೆ ಬಿತ್ತು, ಬಾಹುಬಲಿಯೆರಚಿದುದು ಭರತನ ಮುಖಕ್ಕೆ ಬಿತ್ತು. ಪುನಃ ಚಕ್ರಿಗೆ ಪರಿಭವವಾಯಿತು. ಬಳಿಕ ಮಲ್ಲ ಯುದ್ಧಕ್ಕೆ ನಿಂತರೆ,

ಕನಕಾಚಳಮುಂ ಪೊತ್ತುದು
ಘನಮರಕತ ಶೈಲಮೆಸೆಸಿ ಭುಜಬಲಿ ಸಕಳಾ
ವನಿತಳವಲ್ಲಭನಂ ಭೋಂ
ಕನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್
ಭರತಾವನೀಶ್ವರಂ ಗುರು
ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
ದೊರೆಯನುಮಳವಟ್ಟೆಂತು ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ

ಎಂದು ಒಯ್ಯನೆ ನೆಲದಲ್ಲಿ ಇಳಿಸಿದನು. ಭುಜಬಲಿಯ ಕಡೆ ವಿಜಯ ಘೋಷಣೆ ನೆಗಳ್ದತ್ತು. ಆಗ

ನೆರೆವೆರಡುಂ ಬಲದರಸುಗ
ಳಿರೆ ಪರಿಭವಮಂತು ತನಗೆ ಬರೆ ಮುಳಿಸಿನ ದ
ಳ್ಳುರಿಗಳನುಗುಳುತ್ತಂ ಚ
ಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ
ಬೆಸಸಿದೊಡದು ಮಾರ್ಕೊಳ್ಳದೆ
ಬೆಸನಂ ಬಲವಂದು ಬಾಹುಬಲಿಯನಣಂ ಛೇ
ದಿಸಲಾಱದುದಱಿಸಿರ್ದುದು
ಮಸುಳ್ದಿಸಕಂಗೆಟ್ಟು ಬಲದ ಮುಯ್ಪಿನ ಕೆಲದೊಳ್

ಅವನ್ನು ಕಂಡು ಕುಲವೃದ್ಧರೂ ಭೂವನಿತಾಧೀಶರೂ "ತನಗಲ್ಲದುದಂ ಮಾಡಿದನಿನಿಸಂ ಚಕ್ರೇಶಂ" ಎಂದು ನುಡಿದರು. ಅವರ ನುಡಿಗಳಿಗೆ ಭರತನು ನಾಚಿ ತಲೆಯ ಮಕುಟ ತಗ್ಗಿಸಿದ. ಬಾಹುಬಲಿ ಕೂಡ ತನ್ನ ದಕ್ಷಿಣಬಾಹುವಿನ ಬಳಿ ನಿಂತ ಚಕ್ರವನ್ನು ಕಂಡು "ಭೂತಳರಾಜ್ಯ ವಿಮೋಹಂ ಇಂತಳವುಗಿಡಿಸಿದುದು ಮನುಕುಲತಿಳಕನುಮಂ; ಖಳ ಮಹೀಶರುಟಿದವರಳವೇ" ಎಂದು ಎಚ್ಚತ್ತು ಅತೀಂದ್ರಿಯ ಸುಖದತ್ತ ತಿರುಗಿದ. ತನ್ನ ಅಣ್ಣನನ್ನು ಕುರಿತು "ಚಕ್ರೇಶ, ನಿಗ್ಗನುಳಿ, ಮುಳಿಸಂ ನೀನೆಂದಿಂಗಂ ಬಿಸುಡು" ಎಂದು ಹೇಳಿ,

ನೆಲಸುಗೆ ನಿನ್ನ ವಕ್ಷದೊಳೆ ನಿಷ್ಠುರಬಾಹುಭಟಾಗ್ರಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯ ನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗೞ್ತೆ ಮಾಸದೇ

ಅಪಧರಿಸದೆ ನಿನ್ನೊಳ್ ಪಿಂ
ದವಿನಯಮುಂ ನೆಗೞ್ದ ದೋಷಮುಂ ತಪದೊಳ್ ನೀ
ಗುವೆನಸದಾಗ್ರಹಮುಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮುಂ

ಎಂದು ಬಾಹುಬಲಿ ತಪಶ್ಚರಣಕ್ಕೆ ನಿಶ್ಚಯಿಸಿದಾಗ,

ಮನದೊಳ್ ಮುಂ ಪುದಿದಿರ್ದ ಕೋಪಮುಮಿತುಂ ತೂಳ್ದಾಗಳೆತ್ತೆತ್ತ ಗೆ
ಯ್ದಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನೈ
ಮನುವಂಶಕ್ಕೆ ಲಲಾಮಮಪ್ಪನುಜನೈ ಬೇಡಮ್ಮ ನೀನುಂ ತಪೋ
ವನಮುಂ ಸಾರ್ವುದುಮಾನದಾರ್ಗೆ ಮೆಱೆವೆಂ ಮತ್ರಾಜ್ಯಸಾಮ್ರಾಜ್ಯಮಂ

ಎಂದು ಭರತನು ಎಷ್ಟೇ ಬೇಡಿಕೊಂಡರೂ ಬಾಹುಬಲಿ ನಿಲ್ಲದೆ

ಕ್ಷಿತಿತಳದೊಳ್ ನೆಗೞ್ದಿರ್ದ
ಪ್ರತಿಮಲ್ಲನನಿಕ್ಕಿ ಮುಯ್ಯನೆಣಮಾಸದೆ ದ
ರ್ಪಿತದುರಿತಮಲ್ಲನುಮನುಡಿ
ವ ತಕ್ಕನಿಂ ಸಭೆಗೆ ನಡೆಪನಿಂದ್ರಾರ್ಚಿತನಾ

—ಇದು ಪಂಪನು ಚಿತ್ರಿಸಿರುವ ಮದನಮದಭಂಗದ ಸಂಗ್ರಹ. ರತ್ನಾಕರನ ಕೈಯಲ್ಲಿ ಇದು ಏನಾಗಿದೆಯೆಂದು ಮುಂದೆ ನೋಡೋಣ.

ಪುರುದೇವನ ಕೃಪೆಯಿಂದ ಅಯೋಧ್ಯೆಯ ಅರಸನಾಗಿದ್ದ ಭರತನಿಗೆ ಪೂರ್ವಪುಣ್ಯ ಫಲವಾಗಿ ಚಕ್ರರತ್ನ ಪ್ರಾಪ್ತವಾಯಿತು. ಅದನ್ನು ಕೊಂಡು ಆತ ದಿಗ್ವಿಜಯಕ್ಕೆ ನಡೆಯುವ ಮುನ್ನ ಒಂಬತ್ತು ದಿವಸ ಚಕ್ರಪೂಜೆ ನಡೆಯಿತು. ದಶಮಿಯ ದಿವಸ ದಿಗ್ವಿಜಯಕ್ಕೆ ತೆರಳುವ ಭರತರಾಜನನ್ನು ಬೀಳ್ಕೊಡಲು ಒಂಬತ್ತು ದಿನಗಳಾದರೂ ಯುವರಾಜ ಬಾಹುಬಲಿಯಾಗಲಿ, ಭರತನ ಸ್ವಂತ ತಮ್ಮಂದಿರೇ ಆಗಲಿ ಬಂದು ಮುಖ ತೋರಿಸಲಿಲ್ಲ. ಆದರೆ ಮಾತ್ರ

ನವಮಿಯ ರಾತ್ರಿಯೊಳೋಲಗ ಪರಿವೃತಂ | ಬವಸರಕೊಂದಿಷ್ಟು ಮುಂಚೆ
ಯುವರಾಜನಾಪ್ತ ಕಂಡನು ಬಂದು ಸಾಷ್ಟಾಂಗ | ದವನತಿಯೊಳು ಕಾಣ್ಕೆಯಿಕ್ಕಿ
ಕಾಮದೇವನ ಮಂತ್ರಿ ಪ್ರಣಯಚಂದ್ರಮನೆಂಬ | ನಾಮಕೊಪ್ಪುವನು ವಿವೇಕಿ

ಕುಶಲಪ್ರಶ್ನೆ ಪರಸ್ಪರ ನಡೆದನಂತರ, "ದೇವರ ಪ್ರಯಾಣವನ್ನು ಮದನ ಕೇಳಿದನು. ಅಣ್ಣಾಜಿಯರಿಗೆ ಧರೆಯೊಳಗಾರೂ ಇದಿರಿಲ್ಲವೆಂದನು. ಬಂದು ದೇವರನ್ನು ಕಂಡು, ಬುದ್ಧಿಗಲಿಸಿಕೊಂಬೆನೆಂದಿದ್ದನು. ಆದರೆ ಒಂದು ಶಾಸ್ತ್ರವ ಕೇಳತೊಡಗಿದ್ದರಿಂದ ಮೊದಲು ನನ್ನನ್ನು ಇಲ್ಲಿಗಟ್ಟಿದನು. ನಾಳೆನಾಡಿದಿನೊಳು ಆ ಗ್ರಂಥ ಮುಗಿವುದು. ಘನವಿಲ್ಲ ಶಾಸ್ತ್ರ, ನಾಡಿದು ಮುಗಿವುದು. ಮರುದಿನದೊಳು ಅಂಗಜ ತಾನೆ ಬಂದು ನೀನಿಳೆಯ ಸಾಧಿಸಿ ಮಗುಳ್ವನ್ನಕ ಶ್ರೀ ಯಶಸ್ವತಿಮಹಾಂಬಿಕೆಯ ತನ್ನ ನಗರಿಗೊಯ್ವೆನೆಂದನು" ಎಂದು ಯುವರಾಜನಾಪ್ತ ಬಿನ್ನೈಸಿದನು. ಭರತ ಅವನಿಗೆ ಉಡುಗೊರೆಯಿತ್ತು ಬೀಳ್ಕೊಟ್ಟನು.

ಅವನತ್ತ ಸಾಗಿದನಾ ರಾಯನೊಳಸಿತ್ತ | ಯುವರಾಜನಂತರಂಗವನು
ತವೆ ತನ್ನ ಮನದೊಳಾಲೋಚಿಸಿ ನಸುನಗೆ | ಚವಚವಿಸುತ ಮತ್ತೆ ನುಡಿದ
ಬುದ್ಧಿಸಾಗರ ಮಂತ್ರಿ ಕಂಡೆಯ ಭುಜಬಲಿ | ಯುದ್ಧತಿಕೆಯನೆಮ್ಮ ಬಳಿಗೆ
ಶುದ್ಧಚಿತ್ತದೊಳೆಯ್ದಲೊಲ್ಲದೆ ಶಾಸ್ತ್ರವ | ಶುದ್ಧಿಗಾಣಿಸಿ ಬಿಟ್ಟನೆಂದಾ
ಬಣ್ಣಿಸಿ ಪ್ರಣಯಚಂದ್ರಮ ಪೇಳಿದೆಲ್ಲವು | ಬಣ್ಣಗಾರಿಕೆಯ ಪ್ರೇಮೋಕ್ತಿ
ಅಣ್ಣನೆಂದೆನಗೆ ದೋರ್ಬಲಿ ಭಕ್ತಿ ಮಾಡನು | ತಣ್ಣಗಿರಲಿ ನನಗೇನು
ಇವನಿಷ್ಟು ಯುವರಾಜನೆಂಬ ಗರ್ವದೊಳಿರ | ಲಿವನಿಂದ ನೇರ್ಗಿರಿಯುವರು
ರವಿಯ ಕಂಡುತ್ಪಲದಂತೋರೆಯಾಗದ | ರಿವರಿಗೂ ದುಗುಡವೆಮ್ಮೊಡನೆ

ಅಮ್ಮಾಜಿಯರೊಳಗಪ್ಪಾಜಿಯರೊಳಗೆಮ್ಮ । ತಮ್ಮಂದಿರಿಂಗೆ ಮಹಾಭಕ್ತಿ
ನಮ್ಮ ಕಂಡರೆ ತಮಗರಸ ವಿರಸ ಪರ । ಬೊಮ್ಮಸುತರ್ಗಿದು ನಡೆಯು

ನಾನಿವರೊಳಗೆ ವಿನಯದ ನೆನೆವೆನು ತಾ । ವೇನೊ ನನ್ನೊಳು ಪೆರತಿಹರು
ಏನ ಮಾಡಿದೆನು ನಾನಿವರ್ಗಿಷ್ಟು ನೋವಾಗ । ನೀನರಿಯೆಯ ಹೇಳು ಮಂತ್ರಿ

ಅರಸ ಹೀಗೆ ನೊಂದು ಆಡಿದುದಕ್ಕೆ ಬುದ್ಧಿಸಾಗರ ಮಂತ್ರಿ ಬಿನ್ನೈಸಿದ:

ಕಿರಿಯರವರು ಸ್ವಾಮಿ ಸೈರಿಸು ನಿನಗಾವ । ಕೊರತೆಯೇನಿದರಿಂದ ಚಕ್ರಿ
ಅರಿಯರವರು ದೇವ ನಿನ್ನೊಳು ಪುದುವಾಳ್ದು । ಮೆರೆವವರ್ಗತಿಪುಣ್ಯ ಬೇಕು

ಅದು ತಾನುವಲ್ಲ ನಿನ್ನನುಜರಾ ಪಾಟಿಯು । ಮದಮುಖರಲ್ಲಾನು ಬಲ್ಲೆ
ಬೆದರುವರರಸ ನಿನ್ನೊತ್ತಿಗೆ ಬಹುದಕೆ । ಸದರವೆ ನಿನ್ನ ಗಂಭೀರ

ಚಿಕ್ಕವರಲ್ಲವೆ ನಿನ್ನನುಜರಿಗಿನ್ನು । ಮಕ್ಕಳಾಟಿಕೆ ಕಿರಿದುಂಟು
ಹುಚ್ಚು ನಡೆಗೆ ನೀನು ಮೆಚ್ಚೆಯೆಂದವರೆಲ್ಲ । ಬೆಚ್ಚಿ ದೂರದೊಳಿರುತಿಹರು

ತಮ್ಮ ನಡೆಗೆ ತಾವು ನಾಣ್ಚಿದರಲ್ಲದೆ । ಹೆಮ್ಮೆಯೊಳಿದ್ದವರಲ್ಲ
ತಮ್ಮ ತಾವೇ ನಾಳೆ ಬಂದೆರಗುವರೆಂದು । ಕಮ್ಮನೆ ನುಡಿದನಾ ಮಂತ್ರಿ

ಆದರೆ ಭರತೇಶ್ವರನಿಗೆ ಆಡಿದವರ ಅಂತಸ್ಥ ಅಷ್ಟು ಅರಿವಾಗದೆ?

ತೊಡಹಗಾರಿಕೆಯೊಳಾ ಮಂತ್ರಿಯಾಡಿದ ಮಾತಿ । ಗೊಡನಹುದಹುದೆಂದ ನಗುತ
ಒಡಕು ಹುಟ್ಟಿಸದ ಬಾಂಧವ ತಂತ್ರಿಯೆಂದದ । ನುಡಿಯದೆ ಮೆಚ್ಚಿದನೊಳಗೆ

ಅರೆಯಿರುಳಿಗೆ ಓಲಗ ಮುಗಿಯಿತು. ಮರುದಿನ

ಉತ್ತಮ ಲಗ್ನದೊಳಗೆ ದಶಮಿಯೊಳು ರಾ । ಜೋತ್ತಮ ಶೃಂಗಾರವಾಗಿ
ಉತ್ತುಂಗ ದಿಗ್ವಿಜಯಕೆ ಪೊರಮಟ್ಟ ಸಂ । ಪತ್ತನವೇನ ಬಣ್ಣಿಪೆನು

ಅರುವತ್ತು ಸಾವಿರ ವರ್ಷ ಉರುಳಿತು, ದಿಗ್ವಿಜಯ ಪೂರ್ಣವಾಗಿ ಯಶಸ್ವಿಯಾಗಿ ನಡೆಯಿತು. ಆದರೆ ಹಿಂದಿರುಗಿ ಬಂದಾಗ ಪೌದನಪುರದ ಬಳಿ ಚಕ್ರ ಹೋಗದೆ ನಿಂತಿತು.

ಏನು ಕಾರಣ ನಿಂದಿತ್ತೈ ಚಕ್ರವೆಂದು ಪ್ರ । ಧಾನಿಯ ಕೇಳ್ದನು ಚಕ್ರಿ
ಮೀನಾಂಕ ಮೊದಲಾದ ನಿನ್ನ ಸೋದರರು ಬಂ । ದಾನತರಾಗಬೇಕೆಂದ

ಎಲ್ಲರಿಗೋಲೆಯ ಕಳುಹಿದನಾ ಓಲೆ । ಯಲ್ಲಿ ಬಂದೆರಗುವುದೆಂಬ
ಸೊಲ್ಲಿರೆ ನೊಂದವರ್ತನಸುದಾಳ್ದರು ಕಬ್ಬು । ವಿಲ್ಲಂಗಂತೋಲೆ ಹೋಯ್ತಿಲ್ಲ

ಈಕ್ಷಿಸಿ ಸಖರೆಲ್ಲರನುಮತದಿಂದೊಬ್ಬ | ದಕ್ಷಿಣಾಂಕನ ಚಕ್ರಿ ಕರೆದು
ಇಕ್ಷುಚಾಪನ ತಹುದೆಂದಟ್ಟಲವ ಹೋಗಿ | ಸುಕ್ಷೇಮದೊಳು ಪೊಕ್ಕ ಪುರವ

ಆದರೆ ಇಕ್ಷುಚಾಪ ಬರಲು ಒಪ್ಪಲಿಲ್ಲ.

ಚಕ್ರ ನಿಂದರೆ ನನ್ನ ಕಾಣಿಸಿಕೊಂಬ ಪ | ರಾಕ್ರಮಾರ್ಥಕೆ ಬೀಡು ಬಿಟ್ಟು
ಚಕ್ರಿ ಕಳುಹೆ ಬಂದು ಬಣ್ಣವ ನುಡಿಯುವೈ | ವಕ್ರವನರಿವೆ ಹೋಗೆಂದ

ಏನಿಷ್ಟು ಸೊಕ್ಕು ನಿಮ್ಮೊಡೆಯಗೆ ಧರಣಿಯ | ಭೂನಾಥರೆರಗೆ ತಣಿಯದೆ
ಸೇನೆಯ ಮುಂದೆನ್ನ ನೆರಗಿಸಿಕೊಂಬ ಬ | ಲ್ಮಾನಕೆ ನಾನೆಯ್ದಬೇಕೆ

ಎಂದುಬಿಟ್ಟ. ದಕ್ಷಿಣಾಂಕನ ಪ್ರಾರ್ಥನೆಗೆ ಬಾಹುಬಲಿ ಬೆಲೆಕೊಡಲಿಲ್ಲ. ಅವನ ಮಂತ್ರಿ ಸಖರೂ ಹೇಳಿದರು, ಚಕ್ರಿಯ ದರ್ಶನಕ್ಕೆ ಹೋಗೆಂದು. ಮಾರ ಮುನಿದ ಮಾತ್ರ. ಓಲಗದ ಹೆಂಗಳಲ್ಲಿ ಕೆಲವರು ತಾವೂ ಬೇಡಿದರು. “ಹೋರಿ ಹೇಳುವ ಮಂತ್ರಿಸಖರ ಮೇಲಣ ಕೋಪ ವಾರನಾರಿಯರ ನೋಯಿಸಿತು”, ಅನಂಗ ಆ ಅಂಗನೆಯರಿಗೆ ಶಿಕ್ಷೆ ವಿಧಿಸಿದ. ಅದ ಕಂಡು “ತಲೆಗುತ್ತಿ ನಡುಗುತ ಸುಮ್ಮನಿದ್ದುದು ಸಭೆ”.

ಒಟ್ಟಿನಲ್ಲಿ ಸಂಧಾನ ಸಾಗದೆ ಹೋಯಿತು, ಕಾಳಗವೆ ಖಚಿತವಾಯಿತು. ಸುದ್ದಿ ಭರತನ ಕಿವಿ ಮುಟ್ಟಿತು.

ಮುನಿದೆನಾದರೆ ಚೆಂಡನಿಡುವಂತೆ ಪಿಡಿದೆತ್ತಿ | ವನಧಿಗಿಡುವ ಶಕ್ತಿಯುಂಟು
ಅನುಜನ ಮೇಲೆ ಶಕ್ತಿಯ ತೋರಬಹುದೆ ಮೇ | ದಿನಿ ಮೆಚ್ಚುವುದೆ ತೋರೆನೆಂದ

ಸಾವಿರವಾದರು ಹಿರಿಯನೆಂಬರು ನನ್ನ | ಕಾವನೆ ಕಿರಿಯನೆಂಬರಲಾ
ಆವುಗ್ರದವನನುಪಾಯದೊಳ್ಗೆಲುವೆನೈ | ನೀವೆಲ್ಲರರಿದಿರಿಯೆಂದ

ಇತ್ತ ಭರತ ಉಪಾಯದಿಂದ ಆ ಉಗ್ರನನ್ನು ಜಯಿಸುವುದೆಂತೆಂದು ಧ್ಯಾನಿಸುತ್ತಿರಲು, ಅತ್ತ

ಮಿಗೆ ಸುನಂದಾದೇವಿ ಕೇಳ್ದು ಪ್ರಾಪ್ತರನಟ್ಟಿ | ಮಗನ ಕರಸಿದಳು ಮನೆಗೆ
ದುಗುಡವ ಕಾಣಿಸದಂಗಜ ಬಂದಿಷ್ಟು | ನಗೆಮೊಗದಿಂದೆರಗಿದನು

ಭುಜಬಲಿ ದೊಡ್ಡಣ್ಣನೊಡನೆ ಕಾಳಗವೆಂದು | ಗಜಬಜಿಸಿದೆ ಕಂಡ ನೀನು
ಸುಜನರಾರಿದ ಮೆಚ್ಚುವರು ಸುಡು ನಿನ್ನೊಂದು | ಕುಜನಮಾರ್ಗವನೆಂದಳಾಕೆ

ಅಣ್ಣನ ಕೂಡೆ ಕಾಳಗವ ಮಾಡೆಂದಾನು | ಬೆಣ್ಣೆವಾಲೂಡಿ ಸಾಕಿದೆನೆ
ತಣ್ಣನೆ ಮಾಡಬೇಕೆಮ್ಮೆಲ್ಲರುದರಕೆ | ಹುಣ್ಣು ಮಾಳ್ಪುದು ಲೇಸೆ ಮಗನೆ

ಕದನವೆಂದರೆ ನೋವಳೆಂದು ಮಾತಿನೊಳಮ್ಮ । ನೆದೆಗೆ ಸಂತಸವೋರಿ ಪೋಪ
ಗದಕ ನೆನೆದು ಯುದ್ಧವಿಲ್ಲೆಂದು ನುಡಿಪನು । ಮದನಗೆ ವಂಚನೆ ಸಹಜ

ಪರತಲ್ಲವೆಂಬುದ ಮಾಡೆನು ನಾನು ದೇ । ವರಿಗತಿಚಿಂತೆಯೇಕಿದಕೆ
ಶಿರಬಾಗಿ ಬಹೆನಣ್ಣಗೆಂದನು ಮಾತಿನೊ । ಳಿರಿಸಿಕೊಂಡೆದೆಯೊಳು ಕೋಪ

ಆಗ ತಾಯಿ ಸಂತಸಬಟ್ಟು ಅವನನ್ನು ತಕ್ಕೈಸಿಕೊಂಡು 'ಕಂತು ನೀನಂತೆ ಮಾಡು' ಎಂದು ಹರಸಿ ಕಳಿಸಿದಳು. ಅವನು ಅಂತಃಪುರಕ್ಕೆ ಬಂದರೆ, ಅಲ್ಲಿ ಅವನ ಪಟ್ಟದರಾಣಿ ಇಚ್ಛಾಮಹಾದೇವಿ

ಒಂದು ಮನೆಯ ಹೆಣ್ಣುಗಳ ತಂದು ಸದ್ಬುಕ । ರೆಂದು ಬಾಳ್ವವರುಂಟು ಕೂಡಿ
ಇಂದು ನೀವಣ್ಣತಮ್ಮದಿರೆನಗೆವ್ಮಕ್ಕ । ನೊಂದುಗೂಡಿಸದಗಲಿಪರೆ

ಎಂದು ಮೊದಲಾಗಿ ಮದನನ ಮನಸ್ಸನ್ನು ಯುದ್ಧದಿಂದ ದೂರಪಡಿಸಲು ಯತ್ನಿಸಿದಳು. ಚಿಕ್ಕಹರೆಯದ ಚಿತ್ರಾವತಿಯೂ ಕೈ ಮುಗಿದು, ಬೇಡವೆಂದು ಬೇಡಿದಳು. ಬಳಿಕ ಪತಿಭಕ್ತೆ ರತಿದೇವಿ ನುಡಿದಳು :

ಆಕೆಯಿಚ್ಛಾದೇವಿಯನುಜೆ ಪಾಠೀನಪ । ತಾಕನ ಮನಮೆಚ್ಚಿದಬಲೆ
ತೂಕಗಾಣದೆ ನುಡಿದಳು ಮೋಪರಸದ ರ । ತ್ನಾಕರ ತುಳುಕಿದಂದದೊಳು

ಸಾಕು ಚಿತ್ರಾವತಿ ನಿಲ್ಲಕ್ಕ ಕೋಪವು । ಪ್ರೇಕಿಸುತಿದೆ ನನಗೀಗ
ಈ ಕರ್ತನೊಡನೊಮ್ಮೆ ನುಡಿದು ನೋಡುವೆನೆಂದು । ವಾಕುಗೊಟ್ಟಳು ರತಿದೇವಿ

ಅಲ್ಲವೆ ತನ್ನ ಸಾಮರ್ಥ್ಯ ತನ್ನವರ ಮೇ । ಲಲ್ಲದಿನ್ನೆಲ್ಲಿ ಮೆರೆವುದು
ಬಿಲ್ಲಂಬ ಹಿಡಿದೊಂದು ಬಲ್ಮೆಯ ನಿನ್ನಣ್ಣ । ನಲ್ಲಿ ತೋರುವುದೊಳ್ಳಿತಾಯ್ತು

ಭಾವಾಜಿಯರ ಹೆಣ್ಣುಗಳಿಗೆಮಗೆಲ್ಲರ್ಗೆ । ನೋವುದೋರುವೆನೆಂಬ ನಿನ್ನ
ಕಾವನೆಂಬರವೇಕೆ ಕೊಲ್ವನೆನ್ನದೆ ಭ್ರಾಂತ । ಜೀವರು ನರ ಸುರೋರಗರು

ಒಬ್ಬರ ಮನಸಿಗು ಸಿಹಿಯಿಲ್ಲವೀ ನಡೆ । ಕಬ್ಬುವೊಕ್ಕೈಯೊಳಗಿಹುದು
ಕಬ್ಬಿನ ಬಿಲ್ಲೊ ಕಾಕಬ್ಬಿನ ಬಿಲ್ಲೊ ಸಾ । ಹೆಬ್ಬಿದಿರಿನ ಕೊಂಕುಬಿಲ್ಲೊ

ಮೆಲ್ಲೆದೆಯಳಿಪು ತವ್ಮಣ್ಣನಿಗಿದಿರಹ । ಕಲ್ಲೆದೆಯೋಪನಂಬುಗಳು
ಮಲ್ಲಿಗೆಗೋಲ್ಗಳೊ ಮರದ ಮಿಂಟೆಯೊ ಪೇಳು । ಪುಲ್ಲಂಬೊ ಲೋಹದಂಬುಗಳೊ

ನಡೆಯಬಾರದ ನಡೆಗೆಳಸಿದೆ ನೀನೀಗ । ನುಡಿಯಬಾರದ ನುಡಿದೋರ್ಪೆ
ಕಡೆಗಾಲವಿದು ನೀನು ಕೆಡುವೆ ಅಕೊ ಹುಲ್ಲ । ಹಿಡಿದು ಸಾರಿದೆನೆಂದಳೊಡನೆ

ಬಾಯ ಮುಚ್ಚೆಲೆ ಧೂರ್ತೆ ಸ್ವಾಮಿಯ ನೀನಿಂತು । ನೋಯಿಸುವರೆ ಎಂದಳಕ್ಕ
ನ್ಯಾಯ ತಪ್ಪಿದಮೇಲೆ ಮುಖದಿಚ್ಚೆಯೆಂಬಭಿ । ಪ್ರಾಯವೆ ಎಂದಳಾ ತಂಗಿ

ಉಳಿದ ಹೆಂಗಳೂ ಯುದ್ಧ ಬೇಡವೆಂದರು. ಆಗ ಮದನ 'ಬಲುಹಲ್ತೆ ಚಕ್ರಿಯ ಪುಣ್ಯ' ಎಂದು ಮೌನವಾಗಿ ತಲೆದೂಗುತ್ತಿದ್ದು, 'ನುಡಿಯೊಳಿವರನು ಚಾಳಿಸಿ ಪೋಪೆನೆಂದು'

ನುಡಿದುದುತ್ತಮವಾಯ್ತು ನಿಮ್ಮೆಲ್ಲರರ್ತಿಯ | ಕೆಡಿಸೆನೌ ಸುಖದೋರ್ಪೆನೆಂದ

ಕೋಪವಿರ್ದುದು ಮೊದಲೆನಗೆ ನಿಮ್ಮೆಲ್ಲರಾ | ಲಾಪವ ಕೇಳ್ದು ತಂಪಾಯ್ತು
ಕೂಪತನದೊಳಣ್ಣಗೆರಗಿ ಬಂದಪೆನೆಂಪ | ನಾ ಪೆಂಗಳುಲ್ಲಾ ಸವೇರೆ

ಆದರೂ ಕುಟಿಲನಲ್ಲವೆ ಕಾಮದೇವ? ಕದನಕ್ಕೇ ಹೊರಟ. ಆಗ

ಕಾಪಲೆಯ್ತುಂಪನು ಕಿರಿಯಯ್ಯ ನಮ್ಮ ಕಂ | ಡಾದರು ತಿಳಿಯನೆ ಎಂದು
ಸೋದರರೊಡಗೂಡಿಕೊಂಡಿದಿರ್ಗೆಯ್ದಿದ | ನಾದರದಿಂದರ್ಕಕೀರ್ತಿ

ಅರ್ಕಕೀರ್ತಿ ಭರತನ ಮಗನಾದುದರಿಂದ ಅವನ ಆದರಕ್ಕೆ ಬೆಲೆಯಿಲ್ಲವಾಯಿತು.

ಬರಬೇಡ ಹೋಗಹೇಳೋ ತಮ್ಮ ಪಿತ ನನ | ಗರಸು ತಾವಣುಗರೆ ನನಗೆ
ಅರರೆ ತಾವಾರ ಚಾಳಿಸಬಂದರೆಂದನಾ | ಸ್ಮರನು . . . . . . . . .

ಆ ತಿರಸ್ಕಾರ ಬಾಹುಬಲಿಯ ಮಗನಾದ ಮಹಾಬಲಿಗೆ ತಿಳಿದಾಗ

ಅಯ್ಯಯ್ಯೊ ಅಣ್ಣಾಜಿಯರು ಬರೆ ಪೋಗಲೆಂ | ದಯ್ಯ ಬಾರಿಸಿದನೆ ಎಂದು
ಒಯ್ಯನಾನೆಯನಿಳಿದಾ ಮಹಾಬಲರಾಜ | ಮೆಯ್ಯ ತೋರದೆ ಪೋದ ನೊಂದು

ಮುಂದೀತ ನನ್ನ ರಕ್ಷಿಸಲರಿಯನು ದೊಡ್ಡ | ತಂದೆಯೆ ಪಾಲಿಪನೆಂದು
ಇಂದೆ ಕೊಂಡೊಯ್ದುದೊ ವಿಧಿಯೆನಲವನಕ್ಕ | ರಿಂದ ಪೋದನು ಚಕ್ರಿಯೆಡೆಗೆ

ಆದರೂ ಬಾಹುಬಲಿಗೆ ಮನಸ್ಸು ತಿರುಗಲಿಲ್ಲ. ಕಾಳಗವೆ ಖಚಿತವಾಯಿತು.

ಅಂತೂ, "ಆರು ಬೇಡೆಂದರು ಬಿಡದಾಯ್ತು" ಕಾಳಗ. ಅದನ್ನು ಕಂಡು, ಉಭಯ ಪಕ್ಷದ ನಿಯೋಗಿಮಿತ್ರರು "ಇವರಿಬ್ಬರೂ ವಜ್ರದೇಹಿಗಳು. ಇವರು ಅಲ್ಪದಿಂದ ನೋಯರು. ಇವರು ಕಾದುವಾಗ, ಮಂದರವೆರಡೊತ್ತಿ ಮಲೆ ಚೂರ್ಣವಾದಂತೆ ಮಂದಿ ನುಗ್ಗಾಗುವುದು. ಹೀಗೆ ಸರ್ವಬಲವನ್ನು ಕೊಲ್ಲುವುದು ಬೇಡ. ಕೂರಸಿ ಹಿಡಿದು ಒಬ್ಬರೂ ಕಾದುವುದು ಬೇಡ. ಇಬ್ಬರನ್ನೂ ಧರ್ಮಯುದ್ಧಕ್ಕೆ ಕೇಳೋಣ" ಎಂದು ಚಿಂತಿಸಿ ಸಾರ್ವಭೌಮನ ಬಳಿಗೆ ಬಂದರು. ಬಂದು,

ಅರಸ ಬಿನ್ನಹ ಪುಷ್ಪಶರವಲ್ಲ ಲೋಹಾಸ್ತ್ರ । ಧುರಕೊಡ್ಡಿದನು ಯುವರಾಜ
ಪುರದೊಳಪೊಗದಿನ್ನು ಕಟಕವೆಲ್ಲವು ಯಮ । ಪುರವನೆಯ್ದುವುದೆಂದರವರು

ಅಲಘುವಿಕ್ರಮರು ನೀವಿಬ್ಬರಿದಿರ್ಚಿ ಕೂ । ರಲಗುವಿಡಿದು ಕಾದುವಾಗ
ಪ್ರಳಯಕಾಲವೆ ಬಂದಿತಲ್ಲದೆ ಕಟಕಕಿ । ನ್ನುಳಿಗಾಲವಿಲ್ಲ ಚಕ್ರೇಶ

ಕುಲಿಶವೇಹಿಗಳು ನೀವಿಬ್ಬರಿನ್ನಂಕದ । ತಳಪಲ್ಲಿ ಕಾಲಿಕ್ಕುವಾಗ
ಬಳಿಗಾರವಸರದೊಳಿರಪಾನೆ ಹೊಕ್ಕು ಹೋ । ಕುಳಿಸಿದಂತಹುದೆಂದರವರು

ಅರಸನಿಗೆ ಅವರ ಮಾತು ಹಿತೋಚಿತವಾಗಿತ್ತು. ಆದ್ದರಿಂದ

ಇದಕೆ ನೀವೇನ ಕಂಡಿರಿ ಪೇಳಿರೆಂದನಂ । ಜದೆ ನುಡಿವೆವೆ ಸ್ವಾಮಿಯೆನಲು
ಎದೆಹಾರು ಬೇಡವೈ ಪೇಳಿರೆಂದನು ಧರ್ಮ । ಕದನಕೊಪ್ಪೆಂದರಾ ಹಿತರು

ದೃಷ್ಟಿಯುದ್ಧವ ಜಲಯುದ್ಧವ ಮಲ್ಲರ । ಮುಷ್ಟಿಯುದ್ಧವಸಿಬ್ಬರೆಸಗಿ
ಅಷ್ಟರ ಮೇಲೊಂದ ತೊಡಕಲಾಗದು ಸರ್ವ । ರಿಷ್ಟವಿದೆಂದರು ಸಖರು

ಭರತೇಶ್ವರ ಅವರ ಮಾತಿಗೆ ಇದಿರಾಡಲಿಲ್ಲ.

ಅಂತಿಂತುಟೆಂದೆನ್ನ ಕೇಳಬೇಡರಲಂಬ । ನೆಂತೊಪ್ಪಿದಂತೆ ಕೇಳುವೆನು
ಚಿಂತಿಸಿಕೊಳ್ಳಿರೈ ಹೋಗಿರೆಂದನು ಮಹಾ । ಸಂತಸಬಡುತ ಸಾಗಿದರು

ಸಾಗಿ, ಮದನನನ್ನು ಕಂಡು, "ಬಿನ್ನವಿಸಲು ನಮ್ಮೆದೆ ಬೆಚ್ಚುತಿದೆ." ಎಂದರು. "ಕದನವುಂಟಾದರೆ ಭೀತಿ ಬೇಡ. ಉಸಿರಿರೈ" ಎಂದನು ಕಾಮ.

ಕಾಳಗವುಂಟು ಖಡ್ಗದ ಯುದ್ಧ ಬೇಡ ಕೇ । ಳ್ಮೇಲಾದ ಮೃದುಲ ಯುದ್ಧವನು
ತೋಳ ಬಲ್ಮೆಯೊಳೆ ನೀವಿಬ್ಬರು ಮಾಳ್ಪುದೆಂ । ದಾ ಲೇಸುಗಾರರಾಡಿದರು

ಅದಕ್ಕೆ ಬಾಹುಬಲಿ

ಇದಿರ ಪಾಯ್ದುಳ ಹೆಚ್ಚು ನನ್ನ ಪಾಯ್ದುಳ ಕಿರಿ । ದಿದಕೆಂತುಟೆನುತಿದ್ದೆ ನಾನು
ಅದರಲ್ಲಿ ನೀವಿಂತು ಪೇಳ್ದುದೆನ್ನಯ ಪುಣ್ಯ । ಸದರವಾಯ್ತು ಸುರಿ ಮುಂದೆಂದ
ಅದಕ್ಕವರು ಹೇಳಿದರು :

ಎವೆಯಿಕ್ಕದೊಬ್ಬರೊಬ್ಬರ ನೋಡಬೇಕು ಕ । ಣ್ಣೆವೆಯಿಕ್ಕದಾಗದು ಸೋಲ
ಬವರವನಷ್ಟರೊಳ್ ಬಿಡಬೇಕು ಬಿಡದಿರ್ದ । ರವಧರಿಸಿನ್ನೊಂದು ಮಾತ

ಮೊಗೆದು ಹಸ್ತಗಳಿಂದ ಜಲವನೊಬ್ಬೊಬ್ಬರು । ಮೊಗಕೆ ಚೆಲ್ಲುವುದು ಚೆಲ್ಲುತಿರೆ
ಮೊಗವಡ್ಡದೆಗೆದಾಗ ಸೋಲವಲ್ಲಿಯು ಯುದ್ಧ । ಮುಗಿಯುದರಾಲಿಸಿನ್ನೊಂದ

ಮಲ್ಲಯುದ್ಧವ ಮಾಳ್ಪುದಪರೊಳೊಬ್ಬನನೆತ್ತಿ । ದಲ್ಲಿ ಸುಮ್ಮನೆ ನಿಲಬೇಕು
ಅಲ್ಲಿಂದ ಮುಂದೊಂದು ಕಾಳಗ ಗೀಳಗ । ಸಲ್ಲದೊಪ್ಪೆನಲೊಪ್ಪಿ ತೆಂದ

ಹೀಗೆ ಭುಜಬಲಿಯನ್ನು ಧರ್ಮಯುದ್ಧಕ್ಕೆ ಒಪ್ಪಿಸಿ, ಮಂತ್ರಿಮುಖ್ಯರು ಅಷ್ಟಕ್ಕೇ ಸುಮ್ಮನಾಗದೆ

ಮೃದುಯುದ್ಧ ಮೂರಲ್ಲದಿನ್ನೊಂದನೆಸಗೆನೆಂ । ಬುದಕಭಯವ ಪಾಲಿಸೆಂದು
ಮೊದಲು ಚಕ್ರಿಯೊಳು ನಂಬುಗೆಗೊಂಡು ಪರಿದೆಯ್ದಿ । ಮದನನೊಳ್ ಕೊಂಡರು ಮತ್ತೆ

"ಸಂಗರ ದೊರೆಗಳಿಬ್ಬರಿಗಲ್ಲದೆ ಉಳಿದ ಷಡಂಗವಾಹಿನಿಗಿಲ್ಲ ಎಂದು ಡಂಗುರ ಸಾರಿತು". ಮದನ ಕಟಕದಲ್ಲಿ ಮೇರು ನಿಲುವಂತೆ ಅಣ್ಣನಿಗೆ ಒಡ್ಡಿ ನಿಂತ. "ಮೀನಾಂಕನು ಅನುವಾಗಿ ನಿಂತ. ಮುಂದಣ ಕಾರ್ಯವೇನು ?" ಎಂದು ನಿಯೋಗಿಮಿತ್ರರು ಚಕ್ರಿಯನ್ನು ಕೇಳಿದರು. ಅದಕ್ಕೆ ಚಕ್ರಿ "ನಾನೆ ಬಂದೆಲ್ಲವ ಪೇಳ್ವೆನ್ನೈ ಎಂದಿಷ್ಟು ಮೋನವ ತಾಳ್ದು ಚಿಂತಿಸಿದ."

ಕಟ್ಟಲೇತಕೆ ಧರ್ಮಯುದ್ಧವ ಮೊದಲೆ ಕೈ । ಗಟ್ಟಿ ಚಿಕ್ಕಮ್ಮನ ಬಳಿಗೆ
ಕೊಟ್ಟುಕಳುಹುವೆನೆಂದೆಣಿಸಿ ಭಂಗವನೊಡ । ಹುಟ್ಟಿದಗೆಳಸ ಹೇಸಿದನು

ಪಡೆಯುರಿಕೆಯೊಳು ಭಂಗಿಸಿ ಕಳುಹಿದ ಮೇಲೆ । ಕುಡುವಿಲ್ಲ ಮನೆಯೊಳು ನಿಂದು
ಒಡಲ ಹೊರೆವನೆ ದೀಕ್ಷೆಗೆ ಪೋಪನೆಂದಂಜಿ । ಪೊಡವಿಪ ತೊರೆದನಂತದನು

ಮೃದುಯುದ್ಧದೊಳು ಭಂಗಗೈದೆನಾದರೆ ನಾಚಿ । ಸದನವ ತೊರೆವನಾ ಮಾರ
ಇದಕಾವ ಯುಕ್ತಿಯೆಂದೆದೆಯಲ್ಲಿ ನೆನೆದನು । ಮೊದಲ ಸೋದರರಾಟಕಂಜಿ

ಬಲುಹ ತೋರ್ಪೊಡೆ ನನಗನ್ಯರೊಡ್ಡಿದುದಿಲ್ಲ । ಕಲಹಕೆನ್ನನುಜನೊಡ್ಡಿದನು
ಕೊಲಬಾರದಹಿತರ ಗೆಲಬಾರದೆಂಬುದು । ತಲೆದೋರಿತೆಂದು ಚಿಂತಿಸಿದ

ಸಾಹಸಪರರ ನೋಯಿಸಬೇಕು ಸ್ವಕುಟುಂಬ । ದ್ರೋಹವ ಮಾಳ್ಪುದು ಗುಣವೆ
ಬಾಹುಬಲಿಯ ಮೂರ್ಖತನಕೇನ ಮಾಳ್ಪೆನೆಂ । ದಾ ಹಿರಿಯಣ್ಣ ಚಿಂತಿಸಿದ

ಶ್ರೀ ಹಂಸನಾಥ ನೀನೆ ಬಲ್ಲೆ ಇದಕೆ ತ । ಕ್ಕೂಹೆಯಾವುದು ಸ್ವಾಮಿ ಎಂದ
**ರೂಹಿಸಿತೊಂದು ದಿವ್ಯೋಪಾಯ ಗುರುವಿನ । ಮಾಹಾತ್ಮ್ಯ ಎಂದುರೆ ನಕ್ಕ**

ಆಗ ಆ 'ದಿವ್ಯೋಪಾಯ' ರೂಪುಗೊಂಡೊಡನೆಯೆ, ಯುದ್ಧಸನ್ನಾಹ ರಹಿತನಾಗಿ

ಹಿಡಿಯೊ ಪಲ್ಲಕ್ಕಿಯನೆಂದನಾಗಳೆ ತಂದು | ಹಿಡಿದರೇರಿದನು ಚಕ್ರೇಶ
ಮದುವೆಗೆ ಪೋಪಂತೆ ಪೋಗುತಿರ್ದನು ನೋಡು | ಕದನಕೆ ಭರತರಾಜೇಂದ್ರ

ಹೀಗೆ ಆ ಭೂರಾಮನು ಬರುವುದನ್ನು ನೂರಿನ್ನೂರು ಮಾರಿನಲ್ಲಿ ಮಾರನು ಕಂಡು, “ ಸನ್ನೆಯ ಹೊಯ್ದಾಗ ಅರಸನ ಮುಖ ನೋಡುವೆನು. ಅದುವರೆಗೆ ಒಲೆದಿರುವೆನು ” ಎಂದು ಸನ್ನಿಧಿಯವರಿಗೆ ಹೇಳಿ ಕೈಕಟ್ಟಿ ಅಡ್ಡಮೊಗವಿಕ್ಕಿ ನಿಂತ. ಅವನು ಹಾಗೆ ನಿಂತುದನ್ನು ನೋಡಿ ಭರತೇಶ್ವರನು “ ಓರೆಯಾಯಿತೆ ನನ್ನ ತಮ್ಮನ ಮುಖ! ಅಯ್ಯೊ, ಮಾರನ ಘೋರವೆ!” ಎಂದಿಷ್ಟು ನೊಂದು ನಕ್ಕು, “ ಕದನದ ಭೇರಿಯ ಸನ್ನೆ ಮತ್ತಿರಲಿ. ಆರಯ್ದು ನಾಲ್ಕೆಂಟು ನುಡಿವೇಳ್ವೆ ಮೊದಲು ” ಎಂದು ಮದನನೆದುರು ನಿಂತ. ಆಗ ‘ ರಾಜೇಂದ್ರ ಗುಣವಾಕ್ಯ ’ ರೂಪುಗೊಂಡಿತು.

ಮನಸಿಜ ಕೇಳಣ್ಣ ನಿನಗೆನಗಿಂದು ದು | ರ್ಮನದಿಂದ ಜಗಳವಪ್ಪುದಕೆ
ಘನವೇನು ಹೇಳು ನಿಷ್ಕಾರಣ ಕದನವ | ಜನಪರೆಸಗುವರೆ ಎಂದ

ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀ | ನೆನ್ನೊಡವೆಯ ಕೊಂಡುದಿಲ್ಲ
ಮುನ್ನಯ್ಯನಿರಿಸಿದಂದದಿ ರಾಜ ಯುವರಾಜ | ಸನ್ನಾಹದೊಳಗಿರ್ದೆವಲ್ತೆ

ಆಗಲಾಗಲಿ ದೋಷವಿಲ್ಲಣ್ಣ ತಮ್ಮಂದಿ | ರಾಗಿಯು ನೋವಪುದದಕೆ
ಹಾಗದ ತೆರಿಗೆ ಬೇಕೆಂದು ನಾ ನಿನ್ನೂರ | ಬಾಗಿಲ್ಗೆ ಭಟ್ಟರನಟ್ಟಿದೆನೆ

ನಿನ್ನೂರ್ಗೆ ನನ್ನವರೆಯ್ದಿದ್ದರೆ ಮಾಣ | ಲೆನ್ನೂರ್ಗೆ ನಿನ್ನವರೆಯ್ದಿ
ಅನ್ನಿಗರೆಂದು ಕಂಡುದೆ ಪ್ರಜೆ ಪರಿವಾರ | ಭಿನ್ನಾರ್ಥವೇಕಾಯ್ತು ನಿನಗೆ

ನುಡಿಯಲಿ ನಾ ನಿನ್ನ ಬಿಟ್ಟಾಡಿದೆನೆ ನನ್ನ | ಪಡೆಯೊಳಗೊಬ್ಬರಾಡಿದರೆ
ಒಡಹುಟ್ಟಿದವನ ನೋಡುವೆನೆಂದು ಬರಹೇಳೆ | ಫಡ ಹುಸಿ ಎಂಬರೆ ಅಪ್ಪ

ನಿನಗಾನು ಹಗೆಯೆ ನೀನೆನಗೆ ಹಗೆಯೆ ಹೇಳು | ಜಿನಪುತ್ರರಿದನು ನಾವಿಂದು
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹ ಶಾ | ಸನವ ಬರೆದುಕೊಟ್ಟೆವಲ್ತೆ

ಮಾತಿಗೆ ತೊಡಗಿದ ಕದನಕಿಂದಿವನಿಗೆ | ಭೀತಿಯಾದುದೆ ಎನಬೇಡ
ಪೂತು ಮಝರೆ ಎನೆ ಕದನದೋರ್ಪನು ಕೇಳು | ಪಾತಕ ಕಳೆವೆನು ಮೊದಲು

ಪರನೊಬ್ಬನೆನ್ನೊಡನಿದಿರಾದರಾಗಳೆ | ಬರಲೊಡನಟ್ಟಿ ಮೆಟ್ಟುವೆನು
ಧರೆ ಮೆಚ್ಚದಣ್ಣ ಸೋದರರ ಕಾಳಗಕೆ ಮುಂ | ದೊರೆಯಬೇಕಂಕಪದ್ಧತಿಯು

ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ | ಸೇನೆಗೆ ಬರವೇಳ್ವೆ ನೈಸೆ
ನೀನೆನಗಗ್ರಜನಾದರೆ ನೀನಿರ್ದ | ಸ್ಥಾನಕೆಯ್ದುದೆ ತಡೆದಿಹೆನೆ

ಹಿರಿಯನಲ್ಲಿಗೆ ಕಿರಿಯನು ಬಂದು ಕಾಣ್ಬುದು । ಧರಣಿಯೊಳುಳ್ಳುದೇನಲ್ತೆ
ಪರಿಭವವೇನಣ್ಣ ನಿನಗಯ್ಯನಂದಿಂತು । ನಿರವಿಸಿದೋಜೆ ಏನುಂಟೆ

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು । ನಿನ್ನ ಗೆಲ್ದೆನಗೊಂದು ಜಸವೆ
ಸನ್ನಗ ನರ ಸುರ ಲೋಕದುತ್ತಮರು ಛೀ । ಎನ್ನರೆ ಯೋಚಿಸಿ ನೋಡು

ಅದಕೇನು ನೀನಿಂತು ಕದನಕೆಯ್ದಿದೆಯ್ಸಿದೆ । ಕದನದೊಳ್ ಗೆಲವೈಸೆ ಕಡೆಗೆ
ಬದೆಗರಂದದಿ ಹೋರಲೇತಕೆ ಗೆಲವು ನಿ । ನ್ನದು ಸೋಲವೆನಗೆ ಹೋಗೆಂದ

ಗಲವೆಂಬುದೇನುಪಚಾರವಲ್ಲಣ್ಣ ತೋ । ಳ್ವಲವ ಬಲ್ಲೆನು ಸತ್ಯವಹುದು
ಬಲವೆಲ್ಲ ಕೇಳ್ವಂತೆ ಪೇಳ್ವೆನು ಕೇಳೆಂದು । ಬಳಿಕ ಚಕ್ರೇಶನಿಂತೆಂದ

ದೃಷ್ಟಿವಿಜಯವೆಂತು ಪಂಚವಿಂಶತಿ ಚಾಪ । ದಷ್ಟುದ್ದ ಹೆಚ್ಚು ನೀನೆನ್ನ
ದೃಷ್ಟಿಸಬಹುದಾನು ನಿನ್ನ ನೋಳ್ಪಾಗೂರ್ಧ್ವ । ದೃಷ್ಟಿ ನೊಂದವೆಹೊಯ್ವುದೆಂದ

ಜಲಯುದ್ಧದೊಳು ನಾನು ಚೆಲ್ಲೆ ನಿನ್ನೆದೆ ಮುಟ್ಟಿ । ಇಳಿವುದು ವಾರಿ ನೀನೆನ್ನ
ಮುಳುಗಿಸಿ ಬಿಡಬಹುದದರಿಂದ ನನಗಾಗ । ಚಳಿತದ್ದವೊಗವಹುದೆಂದ

ಮಲ್ಲಗಾಳಗವೆಂತು ಭುಜಬಲಿ ಎಂದಯ್ಯ । ನಲ್ಲದೆ ಪೆಸರಿಟ್ಟನಂದು
ಬಲ್ಲೆನಯ್ಯನ ವಾಕ್ಯ ಹುಸಿಯದು ಭುಜಬಲ । ದಲ್ಲಿ ನೀನೆತ್ತುವೆ ಎಂದ

ಭರತೇಶನೆಂದೆನಗಯ್ಯ ಪೆಸರನಿಡೆ । ಭರತ ಭೂಮಿಯನಾಳ್ದೆ ನಾನು
ಕರದನು ಭುಜಬಲಿ ಎಂದಂದು ನಿನ್ನ ನೀ । ನಿರದೆನ್ನನೆತ್ತುವೆ ಎಂದ

ಆ ರಾಜೇಂದ್ರ ಗುಣವಾಕ್ಯವನ್ನು ಸುತ್ತಿನ ದೊರೆಗಳೂ ಮಂತ್ರಿ ಸಖರೂ ಕೇಳಿದರು. ಇಬ್ಬರ ಬಲಾಬಲಗಳನ್ನೂ ಚೆನ್ನಾಗಿ ಅರಿತ ಅವರು “ಈ ಸೋಲಿನ ಮಾತು ಉಪಚಾರದ ಮಾತು. ತಮ್ಮನಿಗೆ ತಿಳಿವನ್ನು ಉಂಟುಮಾಡಲು ಆಡಿದ ಮಾತು” ಎಂದು ಆಡಿ ಕೊಂಡರು. ಆಗ

ಅನುಜಾತಗಗ್ರಜ ಸೋತೆನೆಂಬಾಗ ಕ । ತ್ರನೆ ದಶದಿಕ್ಕು ಕಂದಿದುವು
ಅನಲವಿಲ್ಲದೆ ಹೊಗೆ ಸೂಸಿತು ಸೂಸದೆ । ಮನುರತ್ನ ನೊಂದಾಡುವಾಗ

ಬೆವರಿತು ಕಟಿಕ ಹಾ ಕಷ್ಟವ ನೆನೆದೆನೆಂ । ದೆದೆಯೊಳಂಗಜ ನೊಂದುಕೊಳುತ
ಮದನ ಸಮ್ಮುಖವಾಗದೋರೆಯಾಗಿರೆ ಚಕ್ರಿ । ಮುದದೋರಿ ಮತ್ತಿಂತು ನುಡಿದ

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ । ಸ್ತ್ರಾಲಯದೊಳು ತಾನೆ ಹುಟ್ಟಿ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ । ಆಲಿಗೆ ನೋವಾಗುವಂತೆ

ಈ ಸಿರಿಯನು ನಾನು ಪುಣ್ಯದ ಫಲವೆಂದು । ದಾಸೀನದೊಳು ನೋಡುತಿಹೆನು
ಆಸೆಯಿಲ್ಲೆನಗೆ ನೀನೊಪ್ಪುಗೊಳ್ ಮುಂದಣ । ಭೂಸುದತೀಶ ನೀನಲ್ತೆ

ಅರಸಾಗಿ ನೀನೂರೊಳಿರ್ದೆ ನೀನಟ್ಟಿದ । ದೊರೆಯಾಗಿ ನಾನೆಯ್ದಿ ನಿನ್ನ
ಧರೆಯ ಸಾಧಿಸಿ ತಂದೆನೊಪ್ಪುಗೊಳ್ ನಿನ್ನ ಭೂ । ವರವೃಂದವಿದೆ ಕಟಕವಿದೆ

ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ । ನನುಜನೆಂಬಕ್ಕರುಂಟೆಷ್ಟು
ನೆನೆವಿಲ್ಲ ನಿನ್ನ ಭಾಗ್ಯವ ಕಣ್ತುಂಬ ನೋ । ಳ್ಪೆನು ರಾಜಪದವಿಗಿಂತೊಪ್ಪು

ಕೌಶಲಿಯೊಳು ನೀನು ಸುಖಬಾಳು ನನಗೊಂದು । ದೇಶವ ಕೊಟ್ಟು ಬೇರಿರಿಸು
ಕ್ಲೇಶದ ಮಾತಲ್ಲ ಸಂತೋಷ ಪುರುಷರ । ಮೇಶನ ಕೆಂಬಜ್ಜೆಯಾಣೆ

ಲೆಕ್ಕವಿಲ್ಲದ ಮಂದಿ ಬೇಡ ಸೇವಕರಿಗೆ । ನ್ಯೊಕ್ಕಲುಮಕ್ಕಳಿಗೆನಗೆ
ತಕ್ಕನಿತುಂಬಳಿಗೊಟ್ಟಿರಿಸೈ ನಾಡ । ಕಕ್ಕುಲಿತೆಗಳೆನಗಿಲ್ಲ

ರಂಜನೆಗಾಡಿದ ಮಾತಲ್ಲ ನಂಬು ನಿ । ರಂಜನ ಸಿದ್ಧನೆ ಸಾಕ್ಷಿ
ಕಂಜಾಸ್ತ್ರ ನನಗವರಿಂದ ಹೆಚ್ಚಿನ ಭಾಷೆ । ಜಂಜಡದಿಚ್ಛೆಗಳಿಲ್ಲ

"ವಿರಸವ ಬಿಡು, ಬಿಡು" ಎಂದನು ಚಕ್ರಿ. ಪೂಸರನು ಮನಸ್ಸಿನಲ್ಲಿ ತಗ್ಗುತ್ತ ಮುರಿದ ಮೋರೆಯಲ್ಲಿರಲು ಚಕ್ರಿ ತನ್ನ ಚಕ್ರರತ್ನವನ್ನು ಕರೆದು,

ಹೋಗು ಚಕ್ರವೆ ಭುಜಬಲಿಯನೋಲೈಸೆನೆ । ಹೋಗದೀತಗೆ ಪುಣ್ಯವುಂಟು
ಪೂಗಣೆಯಗೆ ಚಕ್ರ ಬೆಸಗೆಯ್ದು ಪುಣ್ಯವಿ । ಲ್ಲಾಗಿ ನಿಂದಿತು ಮುಂದೆ ಬಂದು

ಎಲೆಲೆ ಪಿಶಾಚ ಹೋಗೆಂದವರೇತಕೆ ಹೋಗೆ । ಕಲಪ ನಿನ್ನಿಂವಾದುದೆನಗೆ
ಜಲಜಾಸ್ತ್ರನತ್ತ ಸಾರೆಂದು ನೂಕಿದರದು । ಬಳೆ ಜಾರುವಂತೆ ಜಾರಿದುದು

ಇವಗೆ ಪುಣ್ಯಕ್ಷಯವಾಯ್ತಿಲ್ಲ ಚಕ್ರ ಸಾ । ರುವ ಪುಣ್ಯ ಮನಸಿಜಗಿಲ್ಲ
ಅವನೀಶ ನೂಂಕಿದ ಸರಿತವೊಳಲ್ಪದೂ । ರವ ಸಾಗಿ ನಿಂದಿತಾ ಚಕ್ರ

ಕಳೆಗುಂದಿ ಕಾಮನ ಭುಜಸರಿತದೊಳತ್ತ । ತೊಲಗಿ ನಿಂದಿತು ಚಕ್ರರತ್ನ
ದಳ ನಡುಗಿತು ಧೂಮಕೇತುವೆದ್ದುವು ಕೂಡೆ । ನೆಲ ಗುಡುಗಿತು ಘುಡುಘುಡನೆ

ಇನಬಿಂಬ ಕಂದಿ ಚೆಂಬಿಸಿಲಿಷ್ಟು ಮಾಸೆ ಮಾ । ರ್ದನಿಗೊಟ್ಟುವೆಂಟುದಿಕ್ಕುಗಳು
ಘನಪುಣ್ಯಯುತನಲ್ಪಪುಣ್ಯಗೆ ಚಕ್ರವ । ತೊನೆದಟ್ಟಿ ಬೆಸಗೈದುದೆನಲು

ಸತ್ಪುರುಷಗೆ ಜ್ಯೇಷ್ಠಗುಂಬಳಿಯೆಂದು ಜ । ಗತ್ಪದ ಕಿರಿಯನಿಗೆನಲು
ಸತ್ಪಥ ತಪ್ಪಿ ಕಾಪಥ ಹುಟ್ಟುವಾಗ ಮ । ಹೋತ್ಪಾತ ಹುಟ್ಟಿವೆ ಜಗಕೆ

ಸಲ್ಲದರ್ಥವ ಸಲ್ಲಿಸುವೆನೆಂದು ನೆಗಳೆ ತ । ಳ್ತಿಲ್ಲದದ್ಭುತ ಹುಟ್ಟದಿಹುವೆ
ಪಲ್ಲವಾಯುಧನು ಥೀ ಥೀ ನಾನು ನೆನೆದುದು । ಹೊಲ್ಲವೆಂದೊಳಗೆ ಹೇಸಿದನು

ಗರುಡಮಂತ್ರಕೆ ವಿಷವಿಳಿವಂತೆ ಭರತ ಭೂ । ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ ಕೋಪ ಪೈ । ಸರಿಸಿತು ಹೃದಯ ತಂಪಾಯ್ತು

ಏರಿದ ಹೆಡೆ ಇಳಿವಂತೆ ಮಾರನ ಮುನ್ನಿನ ಗರ್ವ ಜಾರಿತು. ಓರೆಮುಖ ಸಮ್ಮುಖವಾಯಿತು. ತೋಳ ತೊಡಕು ಕಳಚಿತು. ಅಣ್ಣನ ಮುಖವನ್ನು ನೋಡಲು ಅಳುಕಿ ತಮ್ಮನ ತಲೆ ಕುಸಿಯಿತು. ಆಗ

ಕಡೆಯ ಯುದ್ಧದೊಳಲ್ಲದಿವರುಕ್ಕು ಸಿಲ್ಲದೆಂ | ದಿಡಿಕಿರಿದೀಕ್ಷಿಸುತಿರ್ದ
ನುಡಿಯೊಳೆ ಚಕ್ರಿ ಗೆಲ್ದುದ ಕಂಡು ಪೊಗಳ್ದರು | ನುಡಿಯುಡೆ ಸಖ ಮಂತ್ರಿ ನೃಪರು

ಕಾವನುಗ್ರತೆ ಎತ್ತ ಶಾಂತಪೋಳಿಯ್ದು ವಾ | ಕ್ಯಾವಲಂಬದಿ ಗೆಲ್ದುದೆತ್ತ
ಆವಂಗದೊಳು ಚಕ್ರಿಗೆಣೆಯುಂಟೆ ಎಂಪು ಜ | ನಾವಳಿ ಪೊಗಳ್ದುಪೆದೆಯೊಳು

ನುಡಿವ ಗಂಭೀರ ಬೋಧಿಪ ಬೋಧೆ ತಮ್ಮನೆಂ | ದೊಡಕುಪುಟ್ಟಿಸದೊಂದು ಪ್ರೀತಿ
ತೊಡರದ ಮಾತಿಂದ ಗೆಲ್ದ ಚಾತುರ್ಯಕೆ | ಪಡೆಯೆಲ್ಲ ಮೆಚ್ಚಿ ಕೀರ್ತಿಸಿತು-

# ಪುರಾಣಮಿತ್ಯೇವ ನ ಸಾಧು ಸರ್ವಂ

ಅಹಿಂಸೆ ಪರಮಧರ್ಮ. ಅಹಿಂಸೆ ಸರ್ವಾರ್ಥಸಾಧನ. ಅಹಿಂಸೆ 'ಪುರುಷಾರ್ಥ ಸಿದ್ಧ್ಯುಪಾಯ.' ಅಹಿಂಸೆಯೇ ಅರ್ಹತ್ವದಕ್ಕೆ ಆದ್ಯ ಆಧಾರ. ಇಂಥ ಅಹಿಂಸೆಯ, ಇದರಂಥ ಇತರ ಸಮ್ಯಕ್ ಚಾರಿತ್ರದ ಮೇಲ್ಮೆಯನ್ನೂ ಇವುಗಳಿಗೆ ವಿಪರೀತವಾದ ಎಲ್ಲಾ ಮಿಥ್ಯಾಚಾರಿತ್ರದ ಕೀಳ್ಮೆಯನ್ನೂ ಉದಾಹರಣ ಸಹಿತವಾಗಿ ವಿವರಿಸುವುದೇ ಜೈನ ಶ್ರುತಸ್ಕಂಧದ ನಾಲ್ಕು ಅನುಯೋಗಗಳಲ್ಲಿ ಒಂದಾದ ಪ್ರಥಮಾನು ಯೋಗದ ಗುರಿ. 'ಕುಮಾರ್ಗವಾರಿಣೀ ಯಸ್ಮಾತ್ ಯಸ್ಮಾತ್ ಸನ್ಮಾರ್ಗಧಾರಿಣೀ' ಎಂದು ಪೂರ್ವಾಚಾರ್ಯರಿಂದ ಕೀರ್ತಿತವಾಗಿರುವ ಕತೆಗಳ ಕಡಲು ಈ ಪ್ರಥಮಾನುಯೋಗ. ಈ ಪ್ರಥಮಾನುಯೋಗದಲ್ಲಿ ಚಿತ್ರಿತರಾಗಿರುವ ಸಿದ್ಧಜೀವರುಗಳ, ಬದ್ಧಜೀವರುಗಳ ಸಾಲಿನಲ್ಲಿ ಮೊದಲ ಪಂಕ್ತಿಗೆ ಸಂದವರು ತ್ರಿಷಷ್ಟಿಶಲಾಕಾಪುರುಷರು. ರತ್ನಾಕರನು ಅರ್ತಿಯಿಂದ ಹೊಗಳಲು ಆಯ್ದುಕೊಂಡಿರುವುದು ಈ ಶಲಕಾ ಪುರುಷ ರಲ್ಲಿ ಒಬ್ಬನಾದ ಭರತನನ್ನು!

ಪ್ರಥಮಾನುಯೋಗದಲ್ಲಿ ಪ್ರಸಿದ್ಧನಾದ ಭರತ ಬಲು ಮುಂಗೋಪಿ, ತನ್ನ ಅಯೋಧ್ಯಾಪುರದ ಒಳಹೊಗದೆ ಹೊರಗೆ ತರುಬಿ ನಿಂದ ಚಕ್ರರತ್ನವನ್ನು ಕಂಡು 'ಆವಂ ತನಗಿರಲೆಡೆಮಾಡಿದಪ್ಪನಂತಕ ಮುಖಮಂ' ಎಂದು ಗರ್ಜಿಸಿದವನು; ಚಕ್ರ ಸೂಚಿಸಿದಂತೆ ತನಗೆ ಎರಗದವರು ತನ್ನ ಸ್ವಂತ ಅನುಜರೆಂದು ತಿಳಿದಾಗ 'ಅಕಾಲ ಯಮ ರಾಜ ಲೀಲೆಯಂ ಕೈಕೊಂಡ'ವನು, 'ಎನಿಬರ್ ಅರಸುಗಳುಂ ಎರಗಿದೊಡೆ ಎನಗೆ ಏವಂದಪುದೊ' ಎಂದು ಅವರನ್ನು ನುಂಗಲೆಳಸಿ ದವನು; ನಯದಿಂದ ಅವರನ್ನು ಎರಗಿಸಲಾರದೆ, ತನ್ನ ತಮ್ಮಂದಿ ರೆಲ್ಲರೂ ತಪಸ್ಸಿಗೆ ನಡೆದುದನ್ನು ಕಂಡು ಕೂಡ, 'ಎಮ್ಮ ಸಾಪತ್ನನ ಭುಜಬಲಮಂ ನೋೞ್ಪಂ' ಎಂದು ಭುಜಬಲಿಯ ಔದ್ಧತ್ಯಕ್ಕೆ ಸರಿಸಮ ನಾದ ಔದ್ಧತ್ಯ ತೋರಲೆದ್ದವನು; ಯುದ್ಧ ಅನಿವಾರ್ಯವಾಗಿ ಬಂದಾಗ,

ಹಿಂಸಾಯುದ್ಧವನ್ನುಳಿದು ಅಹಿಂಸಾಯುದ್ಧವನ್ನು ಕೈಕೊಳ್ಳಬೇಕೆಂದು ಮಂತ್ರಿಗಳು ಪ್ರಾರ್ಥಿಸಿದಾಗ, ಅಹಿಂಸೆಯನ್ನುಆಶ್ರಯಿಸಲು ಅಸಂತೃಪ್ತಿ ಪಟ್ಟವನು; ತನಗಿಂತ ಬಾಹುಬಲಿ ಇಪ್ಪತ್ತೈದು ಬಿಲ್ಲೆತ್ತರ ಹೆಚ್ಚೆಂಬು ದರ ಅರಿವಿದ್ದೂ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಿಗೆ ತೊಡಗಿ ಸೋತವನು; ಸೋತು, ಬಂದ ಮುಳಿಸಿನಿಂದ ಚಕ್ರರತ್ನವನ್ನು ಬಾಹುಬಲಿಯತ್ತ ಬೀಸಿ, ವಿಫಲನಾಗಿ, 'ತನಗಲ್ಲದುದಂ ಮಾಡಿದ ನಿನಿಸಂ ಚಕ್ರೇಶಂ' ಎಂಬ ಕುಲವೃದ್ಧರ ಭೂವನಿತಾಧೀಶರ ನುಡಿ ಗಳಿಗೆ ನಾಚಿ ಅವನತಮುಕುಟನಾದವನು; 'ರಾಜ್ಯವಿಮೋಹಂ ಇಂತಳವುಗಿಡಿಸಿದುದು ಮನುಕುಲತಿಳಕನುಮಂ' ಎಂದು ಎದುರಾಳಿ ಯಿಂದ ಎನ್ನಿಸಿಕೊಂಡವನು; ಕಟ್ಟಕಡೆಗೆ ಅಸದಾಗ್ರಹವನ್ನು ಬಿಟ್ಟು 'ಎತ್ತೆತ್ತಗೆಯ್ದೆನಿದಂ ತಮ್ಮನೊಳ್' ಎಂದು ತನ್ನ ವಿಪರೀತವರ್ತನಕ್ಕೆ ತಾನೇ ಪರಿತಪಿಸಿದವನು.

ಇಂಥವನು 'ಮನುಕುಲತಿಲಕ'ನೆ? 'ಚರಮತನು, ಸಾರ್ವ ಭೌಮಂ, ಪುರುಪರಮೇಶ್ವರ ತನೂಜಂ' ಆದವನಿಗೆ ಈ ನಡತೆ ಸರಿಯೆ? ಸಾಹಸಪರರನ್ನು ನೋಯಿಸಬೇಕು, ನಿಜ. ಆದರೆ ಸ್ವಕುಟುಂಬ ದ್ರೋಹವನ್ನು ಮಾಡುವುದು ಗುಣವೆ? ಭರತನಿಗೆ ಹಗೆ ಬಾಹುಬಲಿಯೆ? ಇಬ್ಬರೂ ಜಿನಪುತ್ರರಲ್ಲವೆ? ಧರೆ ಮೆಚ್ಚುವುದೆ ಈ ಸೋದರರ ಕಾಳಗಕೆ? ಇವರೇ ಅಲ್ಲವೆ ಲೋಕಕ್ಕೆ ಅಂಕಪದ್ಧತಿಯನ್ನು ಒರೆಯ ತಕ್ಕವರು? ಇವರಂಥವರು ಹಗೆಯನ್ನು ನೆನೆದಾಗ ಸಮಸ್ತರಿಗೆ ದ್ರೋಹ ಶಾಸನವನ್ನು ಬರೆದುಕೊಟ್ಟಂತಾಗಲಿಲ್ಲವೆ? ತನ್ನ ಬಲುಹನ್ನು ತೋರು ವುದಾದರೆ, ಇದಿರಿಗೊಡ್ಡಿದವನು ಅನ್ಯನೆ? ತನ್ನ ಅನುಜನಲ್ಲಾ? ಅವನನ್ನು ಗೆದ್ದುದರಿಂದ ಇವನಿಗೇನು ಕೀರ್ತಿ? ಇವನನ್ನು ಗೆದ್ದು ಅವನಿಗೇನು ಯಶಸ್ಸು? ಪನ್ನಗ ನರ ಸುರ ಲೋಕಗಳ ಉತ್ತಮರು ಛೀ ಎನ್ನರೆ? ಯೋಚಿಸಬೇಡ? ಸಾವಿರವಾದರು ಹಿರಿಯ ನಲ್ಲವೆ ಭರತ? ಕಿರಿಯನಲ್ಲವೆ ಕಾಮ? ತಮ್ಮನೊಡನೆ ಕಾಳಗ ಹೂಡಲು ಇಷ್ಟು ಆಸಕ್ತಿಯೇಕೆ? ಮಂತ್ರಿಗಳ ಮಾತಿನಂತೆ ಅಹಿಂಸೆ ಯನ್ನು ಆಶ್ರಯಿಸಲು ಅಸಂತೃಪ್ತಿಯೇಕೆ? ಧರ್ಮಯುದ್ಧ ಮಾಡುವೆ

ನೆಂದು ಮಾತುಕೊಟ್ಟು, ಅಧರ್ಮದಿಂದ ಚಕ್ರವನ್ನು ಪ್ರಯೋಗಿಸಲೇಕೆ? ಇಷ್ಟೆಲ್ಲ ಅವಿವೇಕಗಳಿಗೆ ಆಕರನಾದವನು ಮಾನವಕುಲಕ್ಕೆ ಮೇಲುಪಂಕ್ತಿಯಿಡುವ 'ಮನುಕುಲತಿಲಕ'ನೆ? ಷಟ್ಖಂಡ ಭರತಕ್ಕೆ ಸಮ್ರಾಜನಾಗಲು ಇಂಥವನು ತಕ್ಕವನೆ? 'ಚರಮತನು, ಪುರುಪರಮೇಶ್ವರ ತನೂಜ' ಎಂಬ ವಿಶೇಷಣ ಸಾರ್ಥಕವಾಗಲು ಅದಕ್ಕೆ ತಕ್ಕ ಗುಣ ವಿಶೇಷಗಳಿರಬೇಡಾ? ಇವನಿಗೆ ಅನುವರದಲ್ಲಿ ಅತಿಭಂಗ ದೊರಕೊಂಡದ್ದು 'ಹುಂಡಾವಸರ್ಪಿಣೀವಿಳಸನ'ದಿಂದ ಅಲ್ಲ, 'ತನಗಲ್ಲದುದಂ ಮಾಡಿದ' ಅದರಿಂದ.

ಭರತೇಶ್ವರನು 'ತನಗಲ್ಲದುದಂ ಮಾಡಿದ'ನೆಂದು ಎನ್ನಿಸಿದುದು ಕೇವಲ ಅವನ ಸಮಕಾಲಿಕರಾದ ಕುಲವೃದ್ಧರಿಗೂ ಭೂವನಿತಾಧೀಶರಿಗೂ ಮಾತ್ರವಲ್ಲ, ಅವನ ಅನಂತರದ ಸರ್ವಕಾಲದ 'ಪರಪ್ರತ್ಯಯನೇಯಬುದ್ಧಿ'ಗಳಲ್ಲದವರಿಗೂ ಹಾಗೆಯೇ ಎನ್ನಿಸಿದೆ. ಯಾವುದನ್ನೂ ಪರೀಕ್ಷೆಮಾಡಿ ಭಜಿಸುವ 'ಸಂತ'ರ ಸಾಲಿಗೆ ಸಂದ ರತ್ನಾಕರನಿಗೆ ಹಾಗೆನ್ನಿಸಿತು, ಶ್ವೇತಾಂಬರಾಚಾರ್ಯ ಹೇಮಚಂದ್ರನಿಗೆ ಹಾಗೆನ್ನಿಸಿತು.

ಪುರಾಣದ ಭರತನಿಗೆ ಚಕ್ರದ ಗತಿಸ್ಖಲನವಾದುದು ಕಾಳಗಕ್ಕೆ ಒಂದು ನೆಪ, ಅಷ್ಟೆ.

ಎನಿಬರರಸುಗಳುಮೆಱಗಿದೊ
ಡೆನಗೇವಂದಪುದೊ ಬಾಹುಬಲಿ ಪೊಱಗೆನೆ ಪೇ
ೞನಿತುಂ ಪುರಮೇವುದೊ ಪೌ
ದನಪುರಮೆನ್ನಾಳ್ಕೆಗಿಂತು ಪೊರಗೆನಿಪಾಗಳ್

ಎಂಬ 'ವೀರರಸೋದಾರಗಂಭೀರವಚನ'ಗಳಲ್ಲಿ ಅವನ ಹೃದಯ ಸ್ಪಷ್ಟವಾಗಿದೆ. ಆದರೆ ಹೇಮಚಂದ್ರಾಚಾರ್ಯನ 'ತ್ರಿಷಷ್ಟಿ ಶಲಾಕಾಪುರುಷಚರಿತ'ದ ಭರತನಿಗೆ ಹೀಗೆ ರಾಜ್ಯದಾಹವಿಲ್ಲ, ಅಸದಾಗ್ರಹವಿಲ್ಲ; ಜಿನಪುತ್ರನಿಗೆ ಉಚಿತವಾದ ತೃಪ್ತಿಯಿದೆ, ಕ್ಷಮಾಗುಣವಿದೆ.

ಆಚಾರ್ಯ ಹೇಮಚಂದ್ರನ ಭರತನ ಬಳಿಗೆ ಸುಷೇಣನೆಂಬ ಸೇನಾಪತಿ ಬಂದು, "ದೇವ, ದಿಕ್ಕುದಿಕ್ಕುಗಳನ್ನೆಲ್ಲ ತಿರುಗಿ ತುಳಿದು

ಬಂದ ನಿನ್ನ ಚಕ್ರ ಅಯೋಧ್ಯೆಯ ಬಳಿ ಬಾರದೆ ದೂರದಲ್ಲಿಯೇ ನಿಂತಿದೆ" ಎಂದು ಬಿನ್ನವಿಸಿದಾಗ "ಶತ್ರುಗಳಿಲ್ಲದೆ ಈ ಚಕ್ರ ಹೀಗೆ ನಿಲ್ಲತಕ್ಕುದಲ್ಲ. ನನಗೆ ಯಾವ ಶತ್ರುವಿರುವನು?" ಎಂದು ಭರತನಿಗೆ ಎನ್ನಿಸಿತು. ಅದಕ್ಕೆ ಸುಷೇಣನು "ದೇವ, ನೀನು ಸಕಲದಿಕ್ಕುಗಳನ್ನೂ ಜಯಿಸಿದವನು. ಆದರೆ ವೀರರಲ್ಲಿ ವೀರನಾದ ಬಾಹುಬಲಿಯೊಬ್ಬನು ಮಾತ್ರ ನಿನಗೆ ಬಾಗಿಲ್ಲ. ಇಂದ್ರನ ವಜ್ರಾಯುಧ ಒಂದು ತೂಕವಾದರೆ ಮಿಕ್ಕೆಲ್ಲ ಆಯುಧಗಳೂ ಒಂದು ತೂಕ. ಅದರಂತೆಯೇ ನೀನು ಜಯಿಸಿದವರೆಲ್ಲರೂ ಕೂಡಿ ಬಾಹುಬಲಿಯೊಬ್ಬನ ಸರಿಬಂದಾರೆ? ಅವನನ್ನು ಜಯಿಸದೆ ನೀನೇನು ಜಯಿಸಿದಂತಾಯಿತು? ಅದರಿಂದ ಚಕ್ರ ನಾಚಿ ಬಳಿ ಬಾರದೆ ನಿಂತಿದೆ. ತಡಮಾಡದೆ ಅವನನ್ನು ಸೋಲಿಸು" ಎಂದನು.

ಭರತನಿಗೆ ಸೇನಾಪತಿಯ ಮಾತು ಕೇಳಿ ಕೋಪಬಂತು; ಆದರೆ ಬಂದಂತೆಯೆ ಮಾಯವಾಯಿತು. "ಇತ್ತ, ನನ್ನ ಆಜ್ಞೆಯನ್ನು ಗಮನಿಸದ ಚಿಕ್ಕ ತಮ್ಮ; ನೋಡುವವರೆದುರಿಗೆ ನಾಚಿಕೆಯಾಗುತ್ತದೆ. ಅತ್ತ, ತಮ್ಮನೊಡನೆ ಕಾದಾಡಲು ಸಂಕಟವಾಗುತ್ತದೆ. ಮನೆಯವರು ನನ್ನ ಆಜ್ಞೆಯನ್ನು ಮನ್ನಿಸದಿದ್ದರೆ, ಹೊರಗಿನವರಿಗೆ ಆಜ್ಞೆಮಾಡುವದು ನಾಚಿಗೆಗೇಡು. ಉದ್ಧತನಾದವನ ಹೆಮ್ಮೆಯನ್ನು ಮುರಿಯಬೇಕಾದ ರಾಜಧರ್ಮ ಒಂದು ಕಡೆ, ತಮ್ಮನೊಡನೆ ಪ್ರೇಮದಿಂದಿರಬೇಕಾದ ಸೋದರಧರ್ಮವೊಂದು ಕಡೆ. ಈ ಧರ್ಮಸಂಕಟಕ್ಕೆ ಏನು ಮಾಡಲಿ?" ಎಂದು ಪೇಚಾಡಿದನು.

"ಈ ಧರ್ಮಸಂಕಟವನ್ನು ನಿನ್ನ ತಮ್ಮನೆ ಹರಿಸಲಿ. ಆತನಿಗೆ ನಿನ್ನ ಶಾಸನ ಕಳುಹಿಸು. ಆತನು ಅದನ್ನು ಒಪ್ಪಿದರೆ ಸರಿ, ಇಲ್ಲದಿದ್ದರೆ ನೀನು ಅವನನ್ನು ಶಿಕ್ಷಿಸಲೇಬೇಕು. ಹಿರಿಯನ ಆಜ್ಞೆಯನ್ನು ಕಿರಿಯನು ಪಾಲಿಸುವುದೂ, ಪಾಲಿಸದವನನ್ನು ಹಿರಿಯನು ಶಿಕ್ಷಿಸುವುದೂ ಲೋಕದ ರೂಢಿ. ಇದರಿಂದ ನಿನಗೆ ಯಾವ ಆಕ್ಷೇಪವೂ ತಾಗುವಂತಿಲ್ಲ, ಶಾಸ್ತ್ರಗಳನ್ನೂ ಲೋಕದ ರೂಢಿಯನ್ನೂ ಒಪ್ಪಲೇಬೇಕು" ಎಂದು ಹೇಳಿ, ಸುಷೇಣನು ಭರತನ ಅಪ್ಪಣೆ ಪಡೆದು, ಬಾಹುಬಲಿಯ ರಾಜ್ಯಕ್ಕೆ ಸುವೇಗನೆಂಬ ದೂತನನ್ನು ಕಳುಹಿಸಿದನು.

ಸುವೇಗನು ಬಾಹುಬಲಿಯ ಆಸ್ಥಾನಕ್ಕೆ ಹೋದನು, ಹೋದಂತೆಯೆ ಅಯೋಧ್ಯೆಗೆ ಹಿಂದಿರುಗಿದನು. ಸಂಧಾನ ಭಂಗವಾಗಿತ್ತು. ಬಾಹುಬಲಿಯ ದರ್ಪದ ಮಾತುಗಳನ್ನು ಚಾಚೂ ತಪ್ಪದೆ ಭರತೇಶ್ವರನಿಗೆ ತಿಳಿಸಿ "ಬಾಹುಬಲಿಯೂ ಅವನ ಸೇನಾಪರಿವಾರಗಳೂ ಯುದ್ಧಕ್ಕೆ ಸಿದ್ಧವಾಗುತ್ತಿರುವುವು" ಎಂದು ಅವರು ನಡಸುತ್ತಿದ್ದ ಯುದ್ಧದ ಸಿದ್ಧತೆಗಳನ್ನು ವರ್ಣಿಸಿದನು.

ದೂತನ ಮಾತು ಕೇಳಿ ಭರತನಿಗೆ ಕೋಪ ಬರಲಿಲ್ಲ, ಅಸಮಾಧಾನವಾಗಲಿಲ್ಲ. ಅವನ ಮುಖದಲ್ಲಿ ಆಶ್ಚರ್ಯ, ಉತ್ಸಾಹ, ಅಭಿಮಾನ, ಆನಂದಗಳು ತಾಂಡವವಾಡಿದುವು. "ದೇವಾಸುರರಲ್ಲಾಗಲಿ ಮನುಷ್ಯರಲ್ಲಾಗಲಿ ಆತನ ಸಮಾನರಿಲ್ಲ. ಆತನ ಚಿಕ್ಕತನದಲ್ಲಿ ಕೂಡ ಇದು ಸ್ಪಷ್ಟವಾಗುತ್ತಿತ್ತು. ಲೋಕನಾಥನಾದ ನಮ್ಮ ತಂದೆಯ ಈ ಮಗನಿಗೆ ಮೂಲೋಕಗಳೂ ಹುಲ್ಲಿಗೆ ಸಮಾನ. ಇದು ಬರಿಯ ಹೊಗಳಿಕೆಯಲ್ಲ, ಆತನ ನಿಜವಾದ ಗುಣ. ಇಂತಹ ತಮ್ಮನಿಂದ ಮಾತ್ರ ನಾನು ಸ್ತುತಿಗೆ ಅರ್ಹ. ದೇಹದಲ್ಲಿ ಒಂದು ಬಾಹು ಬಲಹೀನವಾದರೆ ಬಲಶಾಲಿಯಾದ ಇನ್ನೊಂದು ಬಾಹುವಿಗೂ ಬೆಲೆಯಿರುವುದಿಲ್ಲ. ಸಿಂಹ ಸಂಕಲೆಯನ್ನು ಸಹಿಸಿದರೆ, ಶರಭ ಶಿರಬಾಗಿದರೆ ಬಾಹುಬಲಿ ಪರರ ಆಜ್ಞೆಯಂತೆ ನಡೆದರೆ, ಇನ್ನೇನು ಕಡಮೆ ? ಆದ್ದರಿಂದ ಅವನ ಅಪಚಾರವನ್ನು ಸಹಿಸೋಣ. ನನ್ನನ್ನು ಬಲಹೀನನೆಂದು ಜನ ಜರೆದರೆ ಜರೆಯಲಿ. ಬಲದಿಂದಲೂ ಹಣದಿಂದಲೂ ಏನೇನು ಬೇಕಾದರೂ ಸಂಪಾದಿಸಬಹುದು. ಆದರೆ ತಮ್ಮನನ್ನು, ಅದರಲ್ಲೂ ಇಂತಹ ತಮ್ಮನನ್ನು ಪಡೆಯುವುದು ಸಾಧ್ಯವಿಲ್ಲ" ಎಂದು ಬಾಹುಬಲಿಯ ನಡತೆಯನ್ನು ಮೆಚ್ಚಿ, "ಇದು ನಿಜವಲ್ಲವೆ ? ಏಕೆ ಮೌನವಾಗಿ ನಿಂತಿರುವಿರಿ?" ಎಂದು ಮಾತನಾಡದೆ ನಿಂತಿದ್ದ ಮಂತ್ರಿಗಳನ್ನು ಅಭಿಮಾನದಿಂದ ಕೇಳಿದನು.

ಬಾಹುಬಲಿಯ ಅವಿನಯವನ್ನೂ ಭರತನ ಸ್ಥೈರಣೆಯನ್ನೂ ನೋಡುತ್ತಿದ್ದ ಸೇನಾಪತಿ ಬಹಳವಾಗಿ ನೊಂದು, "**ಋಷಭಸ್ವಾಮಿಯ ಮಗನಾದ ಭರತ ಚಕ್ರೇಶನಿಗೆ ಕ್ಷಮಾಗುಣ**

**ಭೂಷಣವೇ ಸರಿ.** ಆದರೆ ಕ್ಷಮೆಗೆ ಅರ್ಹರಾದವರಲ್ಲಿ ಮಾತ್ರ ಕ್ಷಮೆ ತೋರಬೇಕು. ಈತನು ಮಾತಿನಲ್ಲಿ ಕೂಡ ನಿನಗೆ ವಿನೀತನಾಗಿಲ್ಲ. ಪ್ರಖ್ಯಾತಿಯನ್ನು ಬೆಳಸುವುದಕ್ಕಾಗಿಯಲ್ಲವೆ ದಿಗ್ವಿಜಯ ಹೊರಟುದು? ಸಮುದ್ರವನ್ನೆಲ್ಲ ದಾಟಿ ಬಂದು ಈಗ ಈ ಹಸುವಿನ ಹೆಜ್ಜೆಗುರುತಿನಲ್ಲಿ ಮುಳುಗುವುದು ಮಾನವೆ? ಚಕ್ರವರ್ತಿಗೆ ಪ್ರತಿಸ್ಪರ್ಧಿಯಾಗಿ ಎದುರು ನಿಂತೂ ತನ್ನ ರಾಜ್ಯವನ್ನು ಅನುಭವಿಸುವವನನ್ನು ಇದುವರೆಗೆ ಲೋಕ ಕೇಳಿಲ್ಲ, ಕಂಡಿಲ್ಲ. ತಮ್ಮನ ಮೇಲಿನ ಮಮತೆಯಿಂದ ನಮ್ಮನ್ನು ಮಾತನಾಡಬೇಡವೆಂದರೆ ಸುಮ್ಮನಾಗುವೆವು. 'ಸಕಲ ಶತ್ರುಗಳನ್ನೂ ಜಯಿಸಿದ ಮೇಲೆ ಪುರಪ್ರವೇಶ ಮಾಡುವೆವು' ಎಂದು ಚಕ್ರದ ಎದುರಿಗೆ ಮಾತುಕೊಟ್ಟಿದ್ದ ನೀನು ಹೀಗೆ ಆಚರಿಸಿದರೆ, ಚಕ್ರ ಆಯುಧಶಾಲೆಗೆ ಬಾರದೆ ಪುರದ ಹೊರಗೇ ನಿಂತುಬಿಡುವುದು. ಬಾಹುಬಲಿಯು ನಿನಗೆ ತಮ್ಮನ ವೇಷದ ಶತ್ರು. ಅವನ ಅವಿನಯವನ್ನು ಕ್ಷಮಿಸಲಾಗದು. ಚಕ್ರೇಶನು ಇತರ ಮಂತ್ರಿಗಳನ್ನೂ ಕೇಳಬೇಕು" ಎಂದು ಹೇಳಿ ಕುಳಿತನು.

ಬೃಹಸ್ಪತಿಗೆ ಸಮನಾದ ಮುಖ್ಯ ಮಂತ್ರಿ "ಸೇನಾಪತಿಯ ಮಾತಿಗಿಂತ ನಾವೇನೂ ಹೆಚ್ಚು ಹೇಳಲಾರೆವು" ಎಂದು ಅದನ್ನೇ ಅನುಮೋದಿಸಿದನು. ಭರತನು ಮಂತ್ರಿಗಳ ಮಾತಿಗೆ ಮಣಿದು, ಯುದ್ಧಕ್ಕೆ ಸಿದ್ಧವಾಗಲು ಆಜ್ಞೆಮಾಡಿದನು.

ಭರತನ ಸೇನೆ ಬರುವುದನ್ನು ಗೂಢಚಾರರಿಂದ ಕೇಳಿ ತಿಳಿದು, ಬಾಹುಬಲಿ ತನ್ನ ಸೇನೆಯನ್ನೂ ಸಿದ್ಧಗೊಳಿಸಿದನು. ಎರಡೂ ಸೇನೆ ಬಂದು ಗಂಗಾತೀರದಲ್ಲಿ ಸಂಧಿಸಿತು.

ಆ ಸಹೋದರರ ಯುದ್ಧದ ಉದ್ಯೋಗವನ್ನು ಕಂಡು ದೇವತೆಗಳು ಭೀತರಾದರು. ಭೀತರಾಗಿ, ಲೋಕವನ್ನು ನಾಶಮಾಡುವ ಅವರ ಯುದ್ಧವನ್ನು ತಪ್ಪಿಸಬೇಕೆಂದು ಹಿರಿಯನಾದ ಭರತನ ಬಳಿ ಬಂದು "ಚಕ್ರೇಶ, ನೀನು ಷಟ್ಖಂಡ ಭರತವನ್ನೂ ಜಯಿಸಿ ಅಸಮಾನನಾಗಿರುವೆ. ಆದರೂ ನಿನ್ನ ಕಾಳಗದ ಹಸಿವು ಆರಲಿಲ್ಲ. ಬಲಗೈಯಿಂದ ಎಡಗೈಯನ್ನು ಬಡಿಯುವಂತೆ ನಿನ್ನ ತಮ್ಮನ ಮೇಲೆಯೇ ದಂಡೆತ್ತಿರುವೆ.

ನಿನ್ನ ತೋಳ ತೀಟೆಯೇ ಇದಕ್ಕೆ ಕಾರಣವೆಂದು ಕಾಣುತ್ತದೆ. ಇದರಿಂದ ಲೋಕವೆಲ್ಲ ನಾಶವಾಗುತ್ತದೆ. ಎರಡು ಮದ್ದಾನೆಗಳು ಗುದ್ದಾಡಿದರೆ ಕಾಡೇ ಧ್ವಂಸವಾಗುತ್ತದೆ. **ಲೋಕನಾಥನೂ ದಯಾಸಾಗರನೂ ಆದ ಋಷಭದೇವನ ಮಗನಾದ ನಿನಗೆ ಇದು ತರವೆ ?** ಚಂದ್ರನಿಂದ ಬೆಂಕಿಯ ಮಳೆ ಬಿದ್ದಂತಾಯಿತಲ್ಲವೆ! ಈ ಯುದ್ಧ ಬೇಡ, ಮಹಾರಾಜ. ಹಿಂದಿರುಗು. ನೀನು ಬಂದೆ, ನಿನ್ನ ತಮ್ಮ ಬಾಹುಬಲಿಯೂ ಬಂದ. ನೀನು ಮರಳಿದರೆ ಅವನೂ ಮರಳುವನು. ಈ ಯುದ್ಧವನ್ನು ಬಿಟ್ಟು ಪುಣ್ಯ ಕಟ್ಟಿಕೊಳ್ಳಿರಿ. ಸೈನ್ಯಗಳಿಗೆ ಶಾಂತಿ ಸಿಕ್ಕಲಿ. ಲೋಕಕ್ಕೆ ಹೆದರಿಕೆ ತಪ್ಪಿ ಧೈರ್ಯ ಬರಲಿ " ಎಂದರು.

ಆಗ ಭರತನು " ನೀವಲ್ಲದೆ ಇಷ್ಟು ಹಿತವಾಗಿ ಮಾತನಾಡುವವರು ಇನ್ನಾರು ? ಆದರೂ ಈ ಯುದ್ಧಕ್ಕೆ ಕಾರಣ ನೀವು ತಿಳಿದುಕೊಂಡಿರುವಂತಹುದಲ್ಲ. 'ನಾನೇ ಮಹಾ ಬಲಶಾಲಿ' ಎಂದುಕೊಂಡು ನಾನು ಕಾಳಗಕ್ಕೆ ನಿಂತಿಲ್ಲ. ಎಣ್ಣೆ ಬೇಕಾದಷ್ಟು ಇದೆಯೆಂದು ಯಾರಾದರೂ ಬೆಟ್ಟಕ್ಕೆ ಸ್ನಾನ ಮಾಡಿಸುವರೇನು ? ಈ ಷಟ್ಖಂಡ ಭರತದಲ್ಲಿ ನನಗೆ ಪ್ರತಿಸ್ಪರ್ಧಿ ಯಾರೂ ಇರಲಿಲ್ಲ, ಈಗಲೂ ಇಲ್ಲ. ಪ್ರತಿಸ್ಪರ್ಧಿಯೆಂದರೆ ಜಯಾಪಜಯಗಳಿಗೆ ಕಾರಣನಾದ ಶತ್ರು. ಆದರೆ ನಾನೂ ಬಾಹುಬಲಿಯೂ ಶತ್ರುಗಳಲ್ಲ. ನಾವು ಬೇರೆ ಜನ್ಮ ತಾಳಿದೆವು, ಅಷ್ಟೆ. ಮೊದಲು ಬಾಹುಬಲಿ ವಿನಯದಿಂದಲೂ ಭಕ್ತಿಯಿಂದಲೂ ನನ್ನನ್ನು ತಂದೆಯಂತೆ ಭಾವಿಸುತ್ತಿದ್ದ. ನಾನು ಅರುವತ್ತು ಸಾವಿರ ವರುಷದ ದಿಗ್ವಿಜಯವನ್ನು ಮುಗಿಸಿ ಬಂದರೆ, ಆತ ಮೊದಲಿನಂತೆ ಇಲ್ಲ. ಬಹುಶಃ ಅನೇಕ ವರುಷ ಕಾಣದಿದ್ದುದರಿಂದ ಈ ವ್ಯತ್ಯಾಸವಾಗಿರಬಹುದು. ನನಗೆ ಹನ್ನೆರಡು ವರುಷ ಅಭಿಷೇಕವಾದಾಗಲೂ ಬರಲಿಲ್ಲ ; ಪ್ರಮಾದದಿಂದ ಬರಲಿಲ್ಲವೇನೋ ಎಂದುಕೊಂಡೆ. ದೂತನನ್ನು ಕಳುಹಿಸಿದಾಗಲೂ ಬರಲಿಲ್ಲ ; ಸರಿಯಾಗಿ ಬುದ್ಧಿ ಹೇಳುವ ಮಂತ್ರಿಗಳಿಲ್ಲವೇನೋ ಎನ್ನಿಸಿತು. ನಾನು ಅವನನ್ನು ಕರೆಕಳುಹಿದುದು ಲೋಭದಿಂದಲ್ಲ, ಕೋಪದಿಂದಲ್ಲ. ಅವನು ಬಾರದೆ ಚಕ್ರ ಪಟ್ಟಣದೊಳಕ್ಕೆ ಬರುವುದಿಲ್ಲ. ಏನು ಮಾಡಬೇಕೋ ನನಗೆ ತಿಳಿಯುವುದಿಲ್ಲ.

ನನ್ನ ತಮ್ಮನು ಹೆಮ್ಮೆಯಿಂದಲೇ ನನ್ನ ಬಳಿಗೆ ಬರಲಿ. ಬಂದು, ಪೂಜೆಯನ್ನು ಕೈಕೊಳ್ಳುವ ಅತಿಥಿಯಂತೆ ಮತ್ತೂ ಒಂದು ರಾಜ್ಯವನ್ನು ಸ್ವೀಕರಿಸಲಿ. ಈ ಯುದ್ಧಕ್ಕೆ 'ಚಕ್ರ ಬಾರದು' ಎಂಬ ಒಂದೇ ಒಂದು ಕಾರಣ. ನನ್ನ ತಮ್ಮನು ನನಗೆ ಅಧೀನನಾಗಲಿ, ಆಗದಿರಲಿ, ನನಗೆ ಅವನ ಮೇಲೆ ಕೋಪವಿಲ್ಲ" ಎಂದನು.

ಅದಕ್ಕೆ ದೇವತೆಗಳು "ನಿನ್ನ ಕಾರಣ ನ್ಯಾಯವಾದುದು. ನಿನ್ನಂತಹವರು ಇಂತಹ ಕಾರಣವಿಲ್ಲದೆ ಹೀಗೆ ಆಚರಿಸರು. ನಾವು ಬಾಹುಬಲಿಯನ್ನೂ ಕಂಡು ಮಾತನಾಡುತ್ತೇವೆ. ಹೇಗಾದರೂ ಮಾಡಿ ಈ ಪ್ರಜಾವಿನಾಶಕರವಾದ ಯುದ್ಧವನ್ನು ನಿಲ್ಲಿಸಬೇಕು. ನಿನ್ನಂತೆಯೇ ಆತನೂ ಬೇರೆ ಏನಾದರೂ ಕಾರಣ ಹೇಳಿದರೆ, ಆಗ ನೀವು ಧರ್ಮಯುದ್ಧವನ್ನು ಕೈಕೊಳ್ಳಬೇಕು. ಆನೆ ಕುದುರೆಗಳನ್ನು ಅನ್ಯಾಯವಾಗಿ ಹತಮಾಡುವುದು ನಿಲ್ಲಬೇಕು" ಎಂದು ಚಕ್ರವರ್ತಿಯನ್ನು ಒಪ್ಪಿಸಿ, ಬಾಹುಬಲಿಯ ಬಳಿ ಬಂದರು.

ಆದರೆ ಬಾಹುಬಲಿಯ ದರ್ಪ ದೇವತೆಗಳಿಗೂ ಮೀರಿತ್ತು. ಧರ್ಮಯುದ್ಧಕ್ಕೆ ಅಣ್ಣತಮ್ಮಂದಿರಿಬ್ಬರೂ ಅನುವಾದರು. ಇದರ ಮುಂದಿನ ಕತೆ ಎಂದಿನಂತೆ.

ರತ್ನಾಕರನಾದರೋ ಇದಕ್ಕಿಂತ ಇನ್ನೂ ಹತ್ತು ಹೆಜ್ಜೆ ಮುಂದೆ ಹೋಗಿ, ಭರತೇಶ್ವರನು ನಿಜವಾಗಿಯೂ 'ಮಹಿಮಾಕರ'ನೆಂಬುದನ್ನು ತನ್ನ ದರ್ಶನದಿಂದ ಕಂಡು ನಮಗೆ ಕಾಣಿಸಿದ್ದಾನೆ.

ರತ್ನಾಕರನ ಭರತ ಪುರಾಣದ ಭರತನಿಗಿಂತ ಪರಾಕ್ರಮದಲ್ಲಿ ಏನೂ ಕಡಮೆಯಾದವನಲ್ಲ.

ಮುನಿದೆನಾದರೆ ಚೆಂಡನಿಡುವಂತೆ ಹಿಡಿದೆತ್ತಿ । ವನಧಿಗಿಡುವ ಶಕ್ತಿಯುಂಟು

ಎಂಬ ಅರಿವಿನ ಆತ್ಮಾಭಿಮಾನ ಅವನಿಗೆ. ಆದರೆ

ಅನುಜನ ಮೇಲೆ ಶಕ್ತಿಯ ತೋರಬಹುದೆ ಮೋ । ದಿಸಿ ಮೆಚ್ಚುವುದೆ . . .

ಅನ್ನಿಗರೆನಗೊಡ್ಡಿ ನಿಂದರೆ ಪಗಮಿನ । ಸನ್ನೆಯೊಳ್ ಬಾಯ ಕುಟ್ಟಿಸುವೆ
ಬೆನ್ನ ಬಂದವನ ನೋಯಿಸುವೆನೆ ಜಗವೆಲ್ಲ । ಚುನ್ನವಾಡದೆ ನನ್ನ . . .

ಎಂಬ ಸೋದರವಾತ್ಸಲ್ಯ, ಲೋಕಾಪವಾದಭೀತಿ ಅವನಿಗೆ. ಆದ್ದ ರಿಂದಲೇ, "ಬಾಹುಬಲಿ ಮೇರೆ ಮೀರಿ

ಹಿಂಸೆಗಂಜದೆ ಖಡ್ಗವಿಡಿದು ಬಂದರೆ ಖಡ್ಗ | ವಂ ಸೆಳೆಕೊಂಡು ನೂಂಕುವೆನು
ದಿಟ್ಟಿಸಿ ಹೋಗೆಂಬೆ ಹೋಗದಿದ್ದರೆ ಬೆನ್ನ | ಮುಟ್ಟಿ ಹೋಗೆಂದು ನೂಕುವೆನು
ದಟ್ಟಿಸಿದರೆ ಕಟ್ಟಿ ಕಳುಹುವೆ ಶಿಬಿಕೆಯೊ | ಳಿಟ್ಟು ಚಿಕ್ಕಮ್ಮನ ಬಳಿಗೆ"

ಎಂಬ ಹಿಂಸಾಯುದ್ಧಕ್ಕೆ ವಿಮುಖವಾದ ಮನಸ್ಸು ಅವನಿಗೆ. ಹಿಂಸೆ ಯನ್ನು ಅತ್ಯಲ್ಪ ಪ್ರಮಾಣದಲ್ಲಿ ಒಳಕೊಂಡ ದೃಷ್ಟಿಯುದ್ಧ, ಜಲಯುದ್ಧ ಮಲ್ಲಯುದ್ಧಗಳಿಗೂ ಹೇಸುವುದು ಅವನ ಮೃದು ಮನಸ್ಸು.

ಅಹಿಂಸೆಯ ಅಂತರಾರ್ಥವನ್ನು ಅರಗಿಸಿಕೊಂಡವನಿಗಲ್ಲದೆ ಇತರ ರಿಗೆ ಇಂಥ ಭಾವನೆಗಳೂ ಚಾರಿತ್ರವೂ ಉಂಟಾಗದು. 'ಇನಬಿಂಬ ದೊಳಗಣ ಪ್ರತಿಮೆಯ ಕಾಣ್ಬ ಲೋಚನನಿಗಿಪ್ಪತ್ತೆರಡು ಮೂರು ಘನವೆ?' ಅಂಥವನು ನಿಂತು ದೃಷ್ಟಿಯುದ್ಧಗೈವ ಮುನ್ನ ತಾನು ಸೋತೆನೆಂದನಲ್ಲ! 'ಮುಗಿಲಿಗೆ ನೀರ ಚೆಲ್ಲುವ ಶಕ್ತಿಯುಂಟಾ'ದವನು "ತಂದೆ ನನ್ನನ್ನು ಭರತನೆಂದುದರಿಂದ ನಾನು ಭರತವನ್ನು ಗೆದ್ದೆ. ನಿನ್ನನ್ನು ಭುಜಬಲಿಯೆಂದು ಕರೆದುದರಿಂದ ನಿನ್ನ ಭುಜಬಲ ದೊಡ್ಡದು" ಎಂದು ಜಲಯುದ್ಧಕ್ಕೆ ಮೊದಲೇ ತನ್ನದು ಸೋಲವೆಂದನಲ್ಲ!

ಭುಜಬಲಿಯೆಂದರೆ ಚಕ್ರಿಯು ಗೆಲ್ವರ್ಥ | ಭಜನೆಯೆ . . .
ವೀರ ಸುವೀರನನಂತವೀರ್ಯನು ಬಲ | ಮೇರು ಮಹಾಬಾಹುವೆಂದು
ಭೂರಿ ತನುಜರುಂಟು ಜಿನಗವರ್ ನೃಪನೊಳು | ಹೋರುವರೇಂ ಡಟ್ಟಿ ಹೆಸರೆ?

ಮಲ್ಲಗಾಳಗಕ್ಕೆ ತೊಡಗುವ ಮೊದಲೇ ತಮ್ಮನಿಗೆ ವಿಜಯಮಾಲಿಕೆ ಅರ್ಪಿಸಿದನಲ್ಲ! ಬಾಹುಬಲಿಯನ್ನು ಗೆಲ್ಲಲಾರದೆ ಹೋದ ಹೀನಬಲ ನೇನು ಭರತ?

ಕಿರುವೆರಳೊಳು ಮೊನ್ನೆ ಪಿಡಿದು ತೂಗಿದ ಪರಿ | ಪೆರೆದವನೊಂದೆ ಪೆಟ್ಟಿನಲ್ಲಿ
ತರಗೆಲೆಯಂತೆ ಬೆಟ್ಟುಗಳನೆತ್ತುವನವ | ಗರಿಯಂತೆ ನೆಗಪನೆ ಸ್ಮರನ

ಆದರೂ,

ನನ್ನ ತಮ್ಮನಿಗಾದ ಗೆಲವೆನ್ನ ಗೆಲವದು | ಬನ್ನವಿಲ್ಲೆನಗಿಲ್ಲ ಸೋಲ

ಎಂಬ ಉದಾತ್ತತೆಯಿಂದ

ಅಘಟನ ಕರ್ಮನ ಮೃದುಭಾವದಿಂ ಗೆಲ್ದ । ಅಧಿಕ ಚಾತುರ್ಯ ಸುವೀರ್ಯ ಅಪೂರ್ವ. 'ಆಸಂಗದೊಳು ಚಕ್ರಿಗೆಣೆಯುಂಟೆ ?'

ಆ 'ಉಗ್ರದವ'ವನನ್ನು ಹೀಗೆ ಅಹಿಂಸೆಯ, ಮೈತ್ರಿಯ 'ವಾಕ್ಯಾವಲಂಬದಿ ಗೆಲ್ದ ಚಾತುರ್ಯ' ಭರತನಿಗೆ ಶ್ರೀ ಹಂಸನಾಥನ ಕೃಪೆಯಿಂದ ದೊರಕಿತು. 'ಬಾಹುಬಲಿಯ ಮೂರ್ಖತನಕೇನ ಮಾಳ್ಪೆನೆಂದಾ ಹಿರಿಯಣ್ಣ ಚಿಂತಿಸಿದ'ನಂತೆ. 'ರೂಹಿಸಿತೊಂದು ದಿವ್ಯೋಪಾಯ, ಗುರುವಿನ ಮಾಹಾತ್ಮ್ಯ ಎಂದುರೆ ನಕ್ಕ'ನಂತೆ. ಏನು ಮಾಳ್ಪೆನೆಂದು ಚಿಂತಿಸಿದವನು ಭರತನಲ್ಲ, ಭರತನನ್ನು ಭಾವಿಸಿದ ರತ್ನಾಕರ. ರೂಪುಗೊಂಡ **ದಿವ್ಯೋಪಾಯ**ವನ್ನು ಕಂಡು ಉರೆ ನಕ್ಕವನು ಭರತನಲ್ಲ, ಭರತನನ್ನು ಭಾವಿಸಿದ ರತ್ನಾಕರ. ಈ ನಗೆಯೇ ಅಹಿಂಸೆಯ ಅಮೃತಹಾಸ.

# ೬. ಅಪೂರ್ವಪುರುಷ ರತ್ನಾಕರ

'ಭರತೇಶವೈಭವ' ಸುಮಾರು ೯೫೦೦ ಸಾಂಗತ್ಯಗಳ ಕಾವ್ಯ. ಇದರಲ್ಲಿ ಸುಮಾರು ೬೫೦೦ ಸಾಂಗತ್ಯ ಮೊದಲಿನ ಭೋಗವಿಜಯ ದಿಗ್ವಿಜಯಗಳೆಂಬ ಭಾಗಕ್ಕೂ ಉಳಿದ ೩,೦೦೦ ಮಿಕ್ಕ ಯೋಗವಿಜಯ ಮೋಕ್ಷವಿಜಯ ಅರ್ಕಕೀರ್ತಿವಿಜಯಗಳಿಗೂ ಪಾಲಾಗಿದೆ. ಈ ಐದು ವಿಜಯಗಳಲ್ಲಿ ಮೊದಲ ಎರಡು ವಿಜಯಗಳ ಔನ್ನತ್ಯ ಕಡೆಯ ಮೂರ ರಲ್ಲಿ ಕಾಣಬರುವುದಿಲ್ಲವಾದುದರಿಂದ ಆ ಎರಡನ್ನು ಮಾತ್ರ ಇಲ್ಲಿ ಗಮನಿಸಲು ಆಯ್ದುಕೊಂಡಿದೆ.

ಭೋಗವಿಜಯ, ದಿಗ್ವಿಜಯಗಳ ವಸ್ತುವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು: ೧. ಭರತನ, ಅವನ ಅರುವತ್ತು ಸಾವಿರ ಹೆಂಡಿರ ಶೃಂಗಾರಕಥೆ; ೨. ಭರತ ಷಟ್ಖಂಡ ಭರತವನ್ನು ತನ್ನ ಚಕ್ರ ರತ್ನದ ಬಲದಿಂದ ಗೆದ್ದ ಕತೆ; ೩. ದಿಗ್ವಿಜಯಾನಂತರ ನಗರೀ ಪ್ರವೇಶಕ್ಕೆ ಮುನ್ನ ಭರತನಿಗೂ ಅವನ ತಮ್ಮ ಬಾಹುಬಲಿಗೂ ನಡೆದ ಪ್ರಸಂಗ. ಈ ಮೂರರಲ್ಲಿ ಮೊದಲನೆಯದಂತೂ ಸಂಪೂರ್ಣವಾಗಿ ರತ್ನಾಕರನ ಸೃಷ್ಟಿ.

ಶೃಂಗಾರಕಾಗಿ ಕಷ್ಟರ ಕತೆಗೇಳ್ವು ಜ | ನಂಗಳು ಕೆಡಬೇಡವೆಂದು
ಅಂಗಸುಖಿಯು ಮೋಕ್ಷಸುಖಿಯ ಕಾವ್ಯವಸಿಷ್ಟು | ಶೃಂಗಾರ ಕಟ್ಟಿ ಪೇಳಿದೆನು

ಎಂದು ತನ್ನ ಸೃಷ್ಟಿಗೆ ತಾನೇ ಕಾರಣ ಕೊಟ್ಟಿದ್ದಾನೆ. ಎರಡನೆಯ ದಿಗ್ವಿಜಯದ ಕತೆಯಾದರೋ ಸಂಪ್ರದಾಯದ್ದೇ. ಮೂರನೆಯದಾದ ಮದನಮದಭಂಗವೂ ರತ್ನಾಕರನ ಸೃಷ್ಟಿಯೇ ಆದರೂ ಅದರಲ್ಲಿ ಒಂದು ಅಪೂರ್ವತೆಯಿದೆ; ತನಗೆ ಸಂಪ್ರದಾಯದಲ್ಲಿ ತಪ್ಪೆಂದು ತೋರಿಬಂದು ದನ್ನು ತಪ್ಪೆಂದು ನಿರ್ಭಯವಾಗಿ ಹೇಳಿ, ಸಂಪ್ರದಾಯದಲ್ಲಿಲ್ಲದಿದ್ದರೂ ತನಗೆ ಸರಿಯೆಂದು ತೋರಿಬಂದುದನ್ನು ಧೈರ್ಯದಿಂದ ಲೋಕಕ್ಕೆ ಸಾರುವ ಗಂಡುತನವಿದೆ.

ರತ್ನಾಕರ ಬರಿಯ ರತ್ನಾಕರನಲ್ಲ, ಇವನು 'ರತ್ನಾಕರ ಸಿದ್ಧ'. 'ನಾಡುಗ'ನಲ್ಲ, ಇವನು 'ಆತ್ಮಸುಖಿ'. ಮಿಕ್ಕವರು 'ಮೈಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ ಹುಯ್ಯಲಿಡುತ ಸುತ್ತು'ತ್ತಿದ್ದರೆ ಇವನು 'ಮೈಯೊಳಿರ್ದಾತ್ಮನ ಬತ್ತಲೆ ಮಾಡಿ ತಾನೊಯ್ಯನೀಕ್ಷಿಸು' ವವನು. ಇವನು 'ಸುಸಿದ್ಧಾಂತವ, ಅದರೊಳಗ, ಕಂಡ'ವನು.

ಬೇಕಾದರಾಲಿಸುವುದು ಬೇಡವಾಗೆ ಪ । ರಾಕು ಮಾಡುವುದೆನಗಲ್ಲಿ
ವ್ಯಾಕುಲವಿಲ್ಲ ಸಂತಸವಿಲ್ಲ ನಾನು ಸಿ । ರಾಕಾಂಕ್ಷಿ ಸಾಕಪಂತಿರಲಿ

ಎಂದು "ಧ್ಯಾನಕೆ ಬೇಸರಾದಾಗ ತನ್ನಾತ್ಮಲೀಲಾನುವೃದ್ಧಿಗೆ" ಕಾವ್ಯವನ್ನು ಹೇಳಿದನಲ್ಲದೆ "ತಾನೊಬ್ಬರೊಡನೆ ಮತ್ಸರಕ್ಕೆ ಪೇಳ್ದವನಲ್ಲ".

ಗುರುಹಂಸನಾಥನಾಜ್ಞೆಯೊಳು ಸಿದ್ಧಾಂತದ । ತಿರುಳರಿದಾತ್ಮಲೀಲಾರ್ಥ
ಭರತೇಶವೈಭವವೆಂಬ ಕಾವ್ಯವಸಿದ । ನೊರೆದೆನು ಸುಖಿಗಳಾಲಿಪುದು

ಎಂಬುದು ರತ್ನಾಕರ ಸಂಗತಿ. ಹೀಗೆ ಹೇಳುವ ಕವಿಯಿಂದಲ್ಲದೆ, ಹೀಗೆ ಹೇಳುವ ಕಾವ್ಯದಲ್ಲಲ್ಲದೆ ಬೇರೆಯವರಿಂದ ಬೇರೆ ಕಡೆ ಕಾಣಲಾಗದು – ರತ್ನಾಕರನ ಮದನಮದಭಂಗವನ್ನು ಸೃಷ್ಟಿಸಿದ ಮನೋವೃತ್ತಿ.

ಹಿಂದೂ ಪುರಾಣಗಳನ್ನೂ ಜೈನ ಪುರಾಣಗಳನ್ನೂ ಕಣ್ಣಿಟ್ಟು ನೋಡಿರುವ ಜೈನೇತರರಿಗೆ ಜೈನ ಪುರಾಣಗಳ ಕೆಲವು ಭಾಗ ಅಸಹಜವಾಗಿ ಕಾಣುತ್ತದೆ. ವಿಂಟರ್‌ನಿಟ್ಸ್ ಪಂಡಿತನು ತನ್ನ 'History of Indian Literature Vol. II' ಎಂಬಲ್ಲಿ ಹೇಳಿದ್ದಾನೆ:

"More than the Buddhists, the Jainas were at pains to appropriate to themselves all the favourite popular themes from Brahmanical and General Indian Literature . . . At times they established but a very slight connection between these ancient themes and the Jaina religion; in other cases, however, they completely changed and spoilt them, in order to give them a Jainistic appearance." (pp. 486-87)

[ಬೌದ್ಧರಿಗಿಂತ ಜೈನರು ಬ್ರಾಹ್ಮಣ ಮತ್ತು ಸಾಮಾನ್ಯ ಹಿಂದೂ ಸಾಹಿತ್ಯಗಳ ಸರ್ವಜನಪ್ರಿಯವಾದ ಕಥಾವಸ್ತುಗಳನ್ನು ತಮ್ಮ ಸ್ವತ್ತಾಗಿ ಮಾಡಿಕೊಳ್ಳಲು ತಿಣಿಕಿದರು . . . ಕೆಲವು ವೇಳೆ, ಅವರು ಈ ಪ್ರಾಚೀನ ಕಥಾವಸ್ತುಗಳಿಗೂ ಜೈನಧರ್ಮಕ್ಕೂ ಸ್ಥಾಪಿಸಿದ ಸಂಬಂಧ ಬಹು ಸ್ವಲ್ಪ. ಇತರ ಕಡೆಗಳಲ್ಲಾದರೋ ಅವರು ಅವುಗಳನ್ನು ಬದಲಾಯಿಸಿ ಕುಲಗೆಡಿಸಿದರು, ಅವು ಜೈನೀಯವಾಗಿ ತೋರಿಬರಲೆಂದು.]

ಪುನಃ ಆತನೇ ಹೇಳಿದ್ದಾನೆ :

"The authors of the Mahāpurāṇa took pains to obliterate the difference between Jainism and the older religion as far as possible by retaining the names of the Saints and heroes by the use of Brahmanical terms and even by the adoption of Brahmanical rites. The underlying tendency in all this was to cause Brahmanism and Hinduism to appear as merely a decayed form of the true faith, namely the Jaina Religion, which had existed from time immemorial." (pp. 499)

[ಬ್ರಾಹ್ಮಣ ಪರಿಭಾಷೆಯನ್ನು ಬಳಸಿ, ಬ್ರಾಹ್ಮಣ ಕರ್ಮಗಳನ್ನು ಹೊಂದಿಸಿಕೊಂಡುದಲ್ಲದೆ, ಆ ಮೂಲಕ ಅವರ ಮುನಿಗಳ, ವೀರರ ಹೆಸರುಗಳನ್ನು ಉಳಿಸಿಕೊಂಡು, ಜೈನ ಮತ್ತು ಅದಕ್ಕೂ ಪ್ರಾಚೀನವಾದ ಧರ್ಮಗಳ ವ್ಯತ್ಯಾಸವನ್ನು ಸಾಧ್ಯವಾದಮಟ್ಟಿಗೂ ತೊಡೆದು ಹಾಕಲು 'ಮಹಾಪುರಾಣ'ದ ಕರ್ತೃಗಳು ಶ್ರಮಪಟ್ಟರು. ಬ್ರಾಹ್ಮಣ ಮತ್ತು ಹಿಂದೂ ಧರ್ಮಗಳು ಅನಾದಿಕಾಲದಿಂದ ಸ್ಥಿತವಾಗಿದ್ದ ಸತ್ಯಧರ್ಮದ, ಎಂದರೆ ಜೈನಧರ್ಮದ, ಕುಲಗೆಟ್ಟ ರೂಪವಷ್ಟೇ ಎಂದು ತೋರುವಂತೆ ಮಾಡುವುದೇ ಈ ಎಲ್ಲದರ ಅಡಿಯಲ್ಲಿ ಅಡಗಿದ್ದ ಪ್ರವೃತ್ತಿ.]

ಇದೇ ರೀತಿಯಲ್ಲಿ ಜೈನರಿಗೆ ಕೂಡ ಹಿಂದೂಪುರಾಣಗಳ ಅನೇಕ ಭಾಗ ಅಸಹಜವಾಗಿ ಕಂಡಿದೆ. ಹೀಗೆ ಕಂಡುಬಂದುದನ್ನು ಎತ್ತಿ ಆಡಿದವರಲ್ಲಿ ಆಚಾರ್ಯ ಅಮಿತಗತಿಗೆ ಅಗ್ರಸ್ಥಾನ. ಈತ

ಪೂರ್ವಾಪರವಿರುದ್ಧಾನಿ ಪುರಾಣಾನ್ಯಖಿಲಾನಿ ಚ

[ಪುರಾಣಗಳೆಲ್ಲ ಪೂರ್ವಾಪರ ವಿರುದ್ಧಗಳಾಗಿವೆ.]

ಎಂದು ಕಂಡು, ಅದನ್ನು ಕಾಣಿಸಲು ತನ್ನ 'ಧರ್ಮಪರೀಕ್ಷೆ'ಯನ್ನು ಬರೆದ. ಪ್ರಾರಂಭದಲ್ಲಿ ಹೀಗೆ ಹೇಳಿಕೊಂಡಿದ್ದಾನೆ:

ನ ಬುದ್ಧಿಗರ್ವೇಣ ನ ಪಕ್ಷಪಾತತೋ
ಮಯಾನ್ಯಶಾಸ್ತ್ರಾರ್ಥ ವಿವೇಚನಂ ಕೃತಂ
ಮಮೈಷ ಧರ್ಮಂ ಶಿವಸೌಖ್ಯದಾಯಿಕಂ
ಪರೀಕ್ಷಿತುಂ ಕೇವಲಮುತ್ಥಿತಃ ಶ್ರಮಃ

[ನಾನು ಅನ್ಯಶಾಸ್ತ್ರಗಳ ಅರ್ಥವನ್ನು ವಿವೇಚನೆ ಮಾಡಿದ್ದು ಬುದ್ಧಿಗರ್ವದಿಂದ ಅಲ್ಲ, ಪಕ್ಷಪಾತದಿಂದ ಅಲ್ಲ. ನನಗೆ ಮಂಗಳವನ್ನೂ ಸೌಖ್ಯವನ್ನೂ ಕೊಡುವ ಈ ಧರ್ಮವನ್ನು ಪರೀಕ್ಷಿಸುವುದಕ್ಕಾಗಿಯೇ ಶ್ರಮ ವಹಿಸಿದೆ.]

ಹೀಗೆ ಪರೀಕ್ಷಿಸುವಾಗ ಅನ್ಯಪುರಾಣಗಳಲ್ಲಿ ಶುಭವಾದುದು ಏನಾದರೂ ಕಂಡುಬಂದರೆ,

ಯಚ್ಛುಭಂ ದೃಶ್ಯತೇ ವಾಕ್ಯಂ ತಜ್ಜೈನಂ ಪರದರ್ಶನೇ
ಮೌಕ್ತಿಕಂ ಹಿ ಯದನ್ಯತ್ರ ತದಬ್ಧಾ ಜಾಯತೇಽಖಿಲಂ

[ಪರದರ್ಶನದಲ್ಲಿ ಯಾವ ಶುಭವಾಕ್ಯ ಕಂಡುಬಂದರೂ ಅದು ಜೈನ. ಮುತ್ತುಗಳು ಬೇರೆ ಕಡೆ ಇದ್ದರೂ ಅವೆಲ್ಲವೂ ಹುಟ್ಟಿದ್ದು ಸಮುದ್ರದಲ್ಲೇ.]

ಎಂದುಬಿಡುತ್ತಾನೆ. ಅಶುಭ ಅದ್ದು ಬಂದರಂತೂ ಸರಿ, ಅವುಗಳ ಜನ್ಮ ಜಾಲಾಡಿಬಿಡುತ್ತಾನೆ. ಅದರಲ್ಲೂ ಮಹಾಭಾರತವನ್ನಂತೂ, ಸಿಗಿದು ತೋರಣ ಕಟ್ಟಿಬಿಟ್ಟಿದ್ದಾನೆ. "ಇತ್ಯನ್ಯಥಾ ಪುರಾಣಾರ್ಥೋ ವ್ಯಾಸೇನ ಕಥಿತೋನ್ಯಥಾ" [ಹೀಗೆ ಪುರಾಣದ ಅರ್ಥ ಬೇರೆ, ವ್ಯಾಸನು ಹೇಳಿದ್ದೇ ಬೇರೆ.] ಎಂದು ಜೈನಭಾರತ ಕಟ್ಟುತ್ತಾನೆ, ಹಿಂದೂಭಾರತ ಕೆಡವುತ್ತಾನೆ. "ಈದೃಶೋಯಂ ಪುರಾಣಾರ್ಥೋ ವ್ಯಾಸೇನ ಪರಥಾ ಕಥಿ" ಎಂದು ತನ್ನ ಕತೆ ಮೇಲೆತ್ತುತ್ತಾನೆ, ಅನ್ಯಕಥೆ ಕೆಳಗಿಳಿಸುತ್ತಾನೆ. ಅಮಿತಗತಿ ಹೇಳುವಂತೆ, ಹಿಂದೂಪುರಾಣಗಳಲ್ಲಿರುವ ಪೂರ್ವಾಪರ

ವಿರೋಧಗಳನ್ನು ಪ್ರಸಿದ್ಧಿಗೊಳಿಸುವುದಕ್ಕಾಗಿಯೇ ವ್ಯಾಸ ಭಾರತವನ್ನು ಬರೆದನಂತೆ. ನಿರರ್ಥಕವಾಗಿ ಮಾಡಿದ ಕಾರ್ಯ ಲೋಕದಲ್ಲಿ ಪ್ರಸಿದ್ಧವಾಗುವುದಾದರೆ, ಅಸಂಬದ್ಧವೂ ವಿರುದ್ಧಾರ್ಥವೂ ಆದ ಶಾಸ್ತ್ರವೂ ಲೋಕದಲ್ಲಿ ಪ್ರಸಿದ್ಧವಾಗುವುದು – ಎಂದು ಅವನಿಗೆ ಎನ್ನಿಸಿತಂತೆ. ಅವನು ಒಂದು ದಿನ ಜಾಹ್ನವೀ ತೀರಕ್ಕೆ ಹೋಗಿ, ಅಲ್ಲಿಯ ಮರಳಿನಲ್ಲಿ ತನ್ನ ತಾಮ್ರದ ಪಾತ್ರೆಯನ್ನು ಹೂತಿಟ್ಟು, ಅದರ ಮೇಲೆ ಮರಳನ್ನು ಗುಡ್ಡೆಮಾಡಿ, ಸ್ನಾನಕ್ಕೆ ಹೋದನಂತೆ. ಅಲ್ಲಿಗೆ ಬಂದ ಜನವೆಲ್ಲ ಆ ಮರಳುಗುಡ್ಡೆಯನ್ನು ನೋಡಿ, ತಾವೂ ಧರ್ಮಕಾಂಕ್ಷೆಯಿಂದ ಅದೇ ರೀತಿ ಗುಡ್ಡೆಮಾಡಿದರಂತೆ. ವ್ಯಾಸನು ಸ್ನಾನ ಮುಗಿಸಿಕೊಂಡು ಬಂದನಂತೆ; ತಾಮ್ರದ ಪಾತ್ರೆಗಾಗಿ ನೋಡಿದರೆ, ಆ ಗುಡ್ಡೆಗಳ ನಡುವೆ ಗುರುತೇ ಸಿಕ್ಕಲಿಲ್ಲವಂತೆ. ಆಗ, ಅವಿಚಾರಿಗಳಾಗಿ ಕಣ್ಣಿಗೆ ಕಂಡುದನ್ನು ಅನುಸರಿಸುವ ಲೋಕದ ಮೂಢತ್ವವನ್ನು ತಿಳಿದು, ಸಂತೋಷಪಟ್ಟು; ತನ್ನ ಪೂರ್ವಾಪರವಿರುದ್ಧವಾದ ಭಾರತವನ್ನು ಬರೆದನಂತೆ.

ಹೀಗೆಯೆ **ಪರಧರ್ಮಕಥೆ**ಗಳನ್ನು ತೀವ್ರವಾಗಿ ಪರೀಕ್ಷಿಸಿ, ತೀಕ್ಷ್ಣವಾಗಿ ಟೀಕಿಸಿದವರು ಎಲ್ಲೆಲ್ಲೂ ಉಂಟು; ನಮ್ಮ ಕನ್ನಡ ಸಾಹಿತ್ಯದಲ್ಲಿ ಹಿಂದೆ ಇದ್ದರು, ಈಗಲೂ ಇದ್ದಾರೆ. ಆದರೆ ಅದೇ ತೀವ್ರವಾದ ಪರೀಕ್ಷೆಯನ್ನು, ಅದೇ ತೀಕ್ಷ್ಣವಾದ ಟೀಕೆಯನ್ನು **ಸ್ವಧರ್ಮಕಥೆ**ಗಳಿಗೂ ಅನ್ವಯಿಸಿದವರು, ನನಗೆ ತಿಳಿದಿರುವ ಮಟ್ಟಿಗೆ ರತ್ನಾಕರನಿಗೆ ಹಿಂದೆ ಯಾರೂ ಇಲ್ಲ. ಈ ಗುಣದಲ್ಲಿ ಈತ ಅನ್ವರ್ಥನಾಗಿ ಅಪೂರ್ವ. ಮಹಾಪುರಾಣದ ಪವಿತ್ರ ಸಂಪ್ರದಾಯಕ್ಕೆ ವಿಪರೀತವಾಗಿರುವ ರತ್ನಾಕರನ ಮದನಮದಭಂಗದ ನಿರೂಪಣೆ ಅರ್ಥವತ್ತಾಗಿದೆ, ಉದಾತ್ತ ತತ್ತ್ವಪ್ರಕಾಶಕವಾಗಿದೆ. ಈ ಮಾರ್ಪಾಡು

"ಕವಿಯು ಕಥಾನಾಯಕನನ್ನು ಧೀರೋಧಾತ್ತನಾಗಿ ವರ್ಣಿಸುವುದೇ ಧರ್ಮವೆಂದು ಕಥಾಕ್ರಮವನ್ನು ಸ್ವಲ್ಪ ಮಾರ್ಪಡಿಸಿ ಅಣ್ಣತಮ್ಮಂದಿರೊಳಗೆ ನಿಜವಾಗಿ ಯುದ್ಧವು ಜರಗಲಿಲ್ಲವೆಂದೂ ಭರತನು ಭುಜಬಲಿಯನ್ನು ಮಾತಿನಿಂದಲೇ ಜಯಿಸಿದನೆಂದೂ ಚಮತ್ಕಾರ ಮಾಡಿರುವನು."

ಎಂದು 'ಭರತೇಶವೈಭವ'ದ ಸಂಪಾದಕೀಯ ಹೇಳುವಷ್ಟು ನಿರಾಳವಾಗಿಲ್ಲ. ಕಥಾಕ್ರಮದಲ್ಲಿ ಕವಿ ಮಾಡಿರುವ ಈ ಮಾರ್ಪಾಡು ಕೇವಲ 'ಚಮತ್ಕಾರ'ವಲ್ಲ. ರತ್ನಾಕರನೂ ಇದನ್ನೇ ಒತ್ತಿ ಹೇಳುತ್ತಾನೆ:

ಕವಿತೆಯ ರಚನೆಯಿಂದೆನಲಾಗದೇಕೆಂದ | ರವನಾದಿಜಿನನ ಕುಮಾರ
ಭವಭಂಜನನಂತ್ಯದೇಹಿಯಲ್ಲವೆ ಪೇಳ | ಲವನಿಗೀ ಕಾಂತಿ ವಿಸ್ಮಯವೆ

ಮಹಾಪುರಾಣದ ಭರತನ ನಡತೆಯನ್ನು ಕಂಡು 'ಇಂಥವನೂ ಹೀಗೆ ಮಾಡಿದನೆ!' ಎಂದು ನಮಗುಂಟಾಗುವ ವಿಸ್ಮಯ, ರತ್ನಾಕರನ ಭರತನನ್ನು ಕಂಡಾಗ ಆಗುವುದಿಲ್ಲ; "ಇಂಥವನು ಹೀಗೆ ನಡೆದುಕೊಂಡದ್ದು ಏನು ವಿಸ್ಮಯ? ಇದು ಇಂಥವನಿಗೆ ಸಹಜ!" ಎನ್ನಿಸುತ್ತದೆ. ಏಕೆಂದರೆ, ಇವನು "ಪುರುಪರಮೇಶನ ಹಿರಿಯ ಕುಮಾರನು, ನರಲೋಕಕೊಬ್ಬನೆ ರಾಯ . . . ಹದಿನಾರನೆಯ ಮನು, ಪ್ರಥಮ ಚಕ್ರೇಶ್ವರ . . . ಚದುರರ ತಲೆವಣಿ, ತದ್ಭವ ಮೋಕ್ಷ ಸಂಪನ್ನ." 'ಇವನಿಗೀ ಕಾಂತಿ ವಿಸ್ಮಯವೆ!' ಇದು

ಹೊಲ್ಲದ ನೃಪರಿಗಿಲ್ಲದ ಗುಣಗಳನಿಟ್ಟು | ಸೊಲ್ಲಿಪ ಕೃತಿಮಾರ್ಗವಲ್ಲ
ಉಳ್ಳ ಸದ್ಗುಣಗಳ ಕಡೆಗಂಡು ಬಣ್ಣಿಸ | ಬಲ್ಲವನಾವನಾ ನೃಪನ

ತಾನು ಅರ್ತಿಯಿಂದ ಹೊಗಳಲು "ಶಲಾಕೆಗೆ ಬಂದ ಅರುವತ್ತು ಮೂವರೊಳಾಯ್ದುಕೊಂಡ ಭರತಭಾಸ್ಕರ"ನು ತನ್ನ ತಮ್ಮನನ್ನು 'ತೊಡರದ ಮಾತಿಂದ ಗೆಲ್ದ'ನಷ್ಟೆ. ಈ 'ಚಾತುರ್ಯ'ದ ರಹಸ್ಯವನ್ನು ವಾಚಕರಿಗೆ ಮುಟ್ಟಿಸಬೇಕೆಂದು, ಆ ಪ್ರಕರಣ ಮುಗಿದಮೇಲೆ, ರತ್ನಾಕರ, 'ಚಿತ್ತಜನಿರ್ವೇಗ ಸಂಧಿ'ಯ ಪ್ರಾರಂಭದಲ್ಲಿ ಈ ಪದ್ಯಗಳನ್ನು ಬರೆದಿಟ್ಟಿದ್ದಾನೆ:

ಭಂಗಿಸಿದರೆ ದೀಕ್ಷೆಗೆಯ್ದುವನೆಂದು ತ | ಮ್ಮಂಗೊಳ್ಪ ನುಡಿದು ಚಕ್ರೇಶ
ಮಂಗಲಗೈದ ಯುದ್ಧವ ಕೆಲರರಿಯದ | ಮಂಗಲಗೈವರೆಂತೆನಲು

ಜಲದೃಷ್ಟಿಮುಷ್ಟಿಯುದ್ಧದಿ ಚಕ್ರಿ ತಮ್ಮಗೆ | ಗೆಲುದೋರಿ ನುಡಿದರಂತದನು
ಕೆಲರು ಕಾದಿಯೆ ಗೆಲ್ದನೆಂಬರು ಚಕ್ರಿಯ | ಗೆಲಸಮರ್ಥನೆ ಪುಷ್ಪಬಾಣ

ಜಗವ ಮೋಹಿಪ ಶಕ್ತಿಯಲ್ಲದೆ ಚಕ್ರಿಯ | ನೆಗಪ ಸಾಹಸವುಂಟೆ ಸ್ಮರಗೆ
ಹಗಲಂತೆ ಬೆಳುದಿಂಗಳಿಹುದೆನೆ ಸೂರ್ಯನ | ಶ್ಮಿಗಳ ನೂಂಕುವ ಶಕ್ತಿಯುಂಟೆ

ಚಕ್ರಿ ಸರ್ವರ ಮುಂದೆ ಸೋಲವೆಂದನು ತನ್ನ । ಚಕ್ರಕೆ ನೂಕುತಾಕಾಯ್ತು
ವಕ್ರಿಯಲ್ಲಪ ತಮ್ಮ ವಕ್ರಿಯಾದನು ಕಾಲ । ಚಕ್ರದೊಳಾದ ದೋಷವದು

ರಂಗುಗೆಟ್ಟಾ ಚಕ್ರ ತೊಲಗಿ ನಿಂದುದೆ ಚಕ್ರ । ಭಂಗವಂತದನು ಕೆಲಬರು
ಅಂಗಜಗದು ಬೆಸಗೈದುದೆಂದತಿರಸ । ಭಂಗವ ಮಾಡಿ ನುಡಿವರು

ಅರ್ಧಚಕ್ರಿಯು ಚಕ್ರ ವೈರಿಗೆ ಬೆಸಗೈದು । ಅರ್ಧಚಕ್ರಿಯನೆ ಖಂಡಿಪುದು
ವರ್ಧಿಪ ಸಕಲಚಕ್ರಿಯ ಚಕ್ರ ಸೋಲ್ವುದೆ । ಸ್ಪರ್ಧಿಸಿದಿದಿರ ಭೂಪತಿಗೆ

ಮೃದುಯುದ್ಧ ಮೂರಕೊಪ್ಪಿದ ಮೇಲೆ ಮೀರಿ ಚ । ಕ್ರದೊಳಿಡುವನೆ ಭರತೇಶ
ಮದನನ ಪ್ರಾಣಕೆ ಮುಸಿವನೆ ಪಾಪಿಗ । ಳಿದ ನುಡಿದಾಡಿ ಕೆಡುವರು

ರಣಭಂಗವಾಗಬಾರದು ತಮ್ಮಗೆಂದು ಸ । ದ್ಗುಣವಚನದಿ ಜಯಿಸಿದನು
ಕ್ಷಣಕೆ ಮುಕ್ತಿಯ ಕೊಂಬ ಮೃದುಹೃದಯಗೆ ಕ್ರೂರ । ಗುಣವುಂಟೆ ಸಾಕದಂತಿರಲಿ

ಈ ವಾಕ್ಯಾವಳಿಗೆ ವಿವರಣೆ ಬೇಕಾಗಿಲ್ಲ. ಇಲ್ಲಿ ರತ್ನಾಕರ, ಪಂಪನ 'ಆದಿಪುರಾಣ' ಹಾಗೂ ಅದಕ್ಕೆ ಮೂಲವಾದ 'ಪೂರ್ವಪುರಾಣ'ಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆಂಬುದು ಸ್ಪಷ್ಟ. ಪೂರ್ವಪುರಾಣದ ಪ್ರಾಚೀನತೆ ಸ್ವಲ್ಪವಾದುದೆ ?

ಪುರುದೇವಾದಿ ಜಿನೇಂದ್ರಮಾಲೆ ಗಣಭೃತ್ಸಂತಾನಮೆಂದೀ ಪರಂ
ಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯ ಪರ್ಯಂತಮಾ
ಗಿರೆ ಬಂದೀ ಕಥೆ ಗುಣ್ಪುವೆತ್ತುದವರುಂ ಜ್ಞಾನರ್ಧಿಸಂಪನ್ನರೆಂ
ದಿರದಾಂ ಧೃಷ್ಟನೆಸೀ ಕಥಾಬ್ಧಿಯುಮನೇಸೀಸಲ್ ಮಸಂದಂದವೆನೋ

ಎಂದು ಪಂಪ ಕನ್ನಡಿಸಲು ಕೈಕೊಂಡ, ಆದಿಜಿನ ಮೊದಲಾಗಿ ಜಿನಸೇನಾಚಾರ್ಯ ಪರ್ಯಂತ ಬಂದ, ಪೂರ್ವಪುರಾಣದ ಪದ್ಧತಿಯನ್ನು ಹೀಗೆ ಪ್ರಶ್ನಿಸಬೇಕಾದರೆ, ತನ್ನ ದರ್ಶನದಲ್ಲಿ ರತ್ನಾಕರನಿಗೆ ಎಷ್ಟು ನಂಬಿಕೆಯಿರಬೇಡ !

ಹೀಗೆ, ಪ್ರಾಚೀನವೂ ಪವಿತ್ರವೂ ಆಗಿಬಂದುದರ ಸತ್ಯತೆಯನ್ನು ಇಷ್ಟು ನಿಷ್ಠುರವಾಗಿ ಪ್ರಶ್ನಿಸಿ ರತ್ನಾಕರ ದನಿಯೆತ್ತಿದಾಗ ಲೋಕ ಏನೆಂದಿತಂತೆ ? ರತ್ನಾಕರನೇ ತಿಳಿಸಲಿ :

ಈ ಕಥೆಯನು ನಾನು ಪೇಳ್ದಾಗ ಧರೆಯೊಳ । ನೇಕರು ಹರುಷವೇರಿದರು
ಪೋಕರು ನಾಲ್ಕೆಂಟು ಮಂದಿ ಚಿತ್ತದೊಳತಿ ವ್ಯಾಕುಲಬಟ್ಟರೆಂತೆನಲು

ಕೀರ್ತಿಯ ಬಯಸಿ ನಾನುಸುರಿತಿಲ್ಲೆನಗೆ ಸ | ತ್ಕೀರ್ತಿ ತಾನೆ ಬರುತಿಹುದು
ಕೀರ್ತಿಯ ಬಯಸಿ ಕಣ್ಗುಸುರಾಗಿ ಕೆಲಬರು | ಧೂರ್ತರು ಪೇಚಾಡುತಿಹರು

ತೊಡಗುವರ್ ತಾವು ಕವಿತ್ವವ ಕಡೆಗಡು | ನಡೆಯದು ಕಿವಿಗೆ ಶೋಭಿಸದು
ಬಿಡು ಹೊಸಕವಿತೆಯನೆಂದು ಪೂರ್ವದ ಶಾಸ್ತ್ರ | ಗಡಬಡೆ ಮಾಡುವರೊಡನೆ

ಏನೇನು ಪರಿಯೊಳಾಡಿದರು ತವಗೆ ಕೀರ್ತಿ | ಹಾಸಿಯಾಗಿಯೆ ಬಂದಿತದಕೆ
ಬೇನೆಬಟ್ಟೊಡನೆಮ್ಮ ಕಾವ್ಯವ ಜರೆದರ | ಜ್ಞಾನಿಗಳಲ್ಲಸಲ್ಲೆಂದು

ತರ್ಕ ಪುರಾಣ ತಳ್ಳಿಯ ತೋರಿ ಬೆದೆಬೆಂಡ | ರರ್ಕನ ಪಳಿದ ಗೂಗೆಯೊಲು
ಮಾರ್ಕೊಳ್ಳದಾನು ಮೋನದೊಳಿರ್ದೆ ಬುಧರು ರಾ | ಜರ್ಕಳೆ ನೂಂಕಿದರವರ

ಹಂಸನಾಥನ ಶಕ್ತಿಯೊಳು ಪೇಳ್ದ ಕಾವ್ಯಕೆ | ಸಂಶಯವುಂಟೆ ಲೋಕದೊಳು
ನಾಂ ಸೂಚಿಸವ ಮುನ್ನ ಮುನಿಗಳು ನೃಪರು ವಿ | ದ್ವಾಂಸರು ಕೊಂಡೊಯ್ದು
ರೊಲಿದು

ರತ್ನಾಕರನ ಈ ಸಮ್ಯಗ್ದರ್ಶನದ ದಿವ್ಯಸೃಷ್ಟಿಗೆ ಅವನ ಸಮಕಾಲೀನರಾದ ಮುನಿಗಳು, ಬುಧರು, ರಾಜರು, ಸರ್ವರೂ ಒಲಿದು ಮೆಚ್ಚಿಕೊಂಡರಂತೆ. ಇದು ಏನೂ ವಿಸ್ಮಯವಲ್ಲ. ‘ಗುಣಕ್ಕೆ ಮೇಣ್ ಮಚ್ಚರಮುಂಟೆ’!

# ಶ್ರೀ ರಾಮಾಶ್ವಮೇಧ

"ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಎಂದು ಖ್ಯಾತಿ ಬರುವಂತೆ ಉತ್ತರರಾಮಚರಿತವನ್ನು ಬರೆದ ಭವಭೂತಿ ಅನ್ಯತ್ರ ಹೇಳಿದ

ಉತ್ಪತ್ಸ್ಯತೇಸ್ತಿ ಮಮ ಕೋಪಿ ಸಮಾನಧರ್ಮಾ
ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ

[ನನಗೆ ಸಮಾನವಾದ ಮನೋಧರ್ಮವುಳ್ಳವನು ಎಲ್ಲಿಯಾದರೂ ಹುಟ್ಟುತ್ತಾನೆ, ಏಕೆ, ಹುಟ್ಟಿಯೇ ಇದ್ದಾನೆ. ಏಕೆಂದರೆ ಕಾಲ ಅನಿಮಿತವಾಗಿದೆ, ಭೂಭಾಗ ವಿಶಾಲವಾಗಿದೆ.]

ಎಂಬ ಮಾತು ವ್ಯರ್ಥವಾಗಲಿಲ್ಲ. ಸೀತಾ ಪರಿತ್ಯಾಗದ ಬಗೆಗೆ ಅವನದೇ ಮನೋಧರ್ಮವನ್ನು ತೋರಿಸಿದ ಶ್ರೀ ರಾಮಾಶ್ವಮೇಧಕಾರನು ಅವನಾದ ಹದಿಮೂರು ಶತಮಾನಗಳನಂತರ, ಕನ್ನಡ ನಾಡಿನಲ್ಲಿ ಆಗಿಹೋದ. ಈ 'ಸಮಾನಧರ್ಮ'ನ ಮನೋಧರ್ಮವನ್ನು ತಿಳಿಯಲು ಇವನ ಕಥಾಕ್ರಮವನ್ನು ಕುರಿತೋದಬೇಕು.

ಕನ್ನಡ ಶ್ರೀ ರಾಮಾಶ್ವಮೇಧಕಾರನು "ಉಱಿದೊಡಂ ಅಱಿದೊಡಂ ಬಟ್ಟಿದೋಱಿಪ ರಸಭರಿತಂ ಚರಿತಂ" ಎನ್ನಿಸಿದ "ಶ್ರೀರಾಮಂ ಅಶ್ವಮೇಧಮಂ ಕೆಯ್ಕೊಂಡನೆಂಬರಲ್ತೆ" ಆ ಕಥೆಯನ್ನೆ ಹೇಳುವವನಂತೆ ಹೊರತೋರಿಕೆಗೆ ಕಂಡುಬಂದರೂ, 'ಶ್ರೀ ರಾಮಾಶ್ವಮೇಧ'ದಲ್ಲಿ ಇರುವುದು **ಶ್ರೀರಾಮನು ಅಶ್ವವನ್ನು ಮೇಧಮಾಡಿದ ಕಥೆಯಲ್ಲ,** (ಸೀತೆಯನ್ನು ಪರಿತ್ಯಜಿಸಿದ) **ಶ್ರೀರಾಮನೆಂಬ ಅಶ್ವವನ್ನು ಮೇಧಮಾಡಿದ ಕಥೆ.** ಗ್ರಂಥದ ತೃತೀಯಾಶ್ವಾಸದ ಪ್ರಾರಂಭದಲ್ಲಿ **"ಲೋಗರಱಿವಿನ ಕೊಱತೆಯುಂ ನೀಡುಮೆಣಿಸದೆ ತಗದ ಕಜ್ಜಮನೊಡರ್ಚುತೆ ಕಟ್ಟಕಡೆಯೊಳ್ ಬಱಿಮುಱಕದಿಂ ಮನದೆ ಕುದಿವರ್ ಪಲಂಬರೊಳೆರ್"** ಎಂದು ಸೂತ್ರಪ್ರಾಯವಾಗಿ ಹೇಳಿದುದಕ್ಕೆ ಈ ಕಾವ್ಯ ವ್ಯಾಖ್ಯಾನರೂಪವಾಗಿದೆ. ಹೇಗೆಂದರೆ:

ರಾಘವನು ರಾವಣ ಕುಂಭಕರ್ಣಾದ್ಯರನ್ನು ಮಡಿಯಿಸಿ ಸೀತಾ ಸಮೇತ ಅಯೋಧ್ಯೆಗೆ ಬಂದು ಆಳುತ್ತಿದ್ದನಷ್ಟೆ. ಸಾವಿರ ಕಾಲ ಕಳೆ

ದರೂ ಅವರಿಗೆ ಸಂತಾನವಾಗಲಿಲ್ಲ. ಕುಲದೈವವನ್ನು ಅರ್ಚಿಸಿ, ಗುರು ಜನಗಳನ್ನು ಪೂಜಿಸಿ, ಹಿರಿಯರನ್ನು ಸಂಭಾವಿಸಿ, ಗೋಬ್ರಾಹ್ಮಣರನ್ನು ಸೇವಿಸಿದ ಸಮನಂತರದಲ್ಲಿ ಸೀತೆ ಗರ್ಭಿಣಿಯಾದಳು. ತಿಂಗಳು ತಿಂಗಳು ಕಳೆದು, ಆರು ತಿಂಗಳು ತುಂಬಿತು.

ಆ ವೇಳೆಗೆ ಒಬ್ಬ "**ಗಾವಿಲಂ** ಕಱುಂಬಿ ಪೇೞ್ದೊಂದು ನಿಷ್ಠುರೋಕ್ತಿ" ರಾಮನ ಕಿವಿ ಮುಟ್ಟಿತು. ಆ ಗಾವಿಲ "**ನಡುಗೇರಿಯೊಳೊರ್ವ ನಸಗಂ** ಪೆಂಡತಿ ಮುಳಿಸಿಂ ಪೇೞದೆ ತವರ್ಮನೆಗೆ ಪೋಪುದುಂ ಕಳ್ದುವಂದಳ್ಗೆ ಬುದ್ಧಿವೇೞ್ದು ತಾಯ್ತಂದೆವಿರ್ ಬೞಿವಂದಳಿಯಂಗೊಪ್ಪಿಸಲೆಂದು ಕೋಪಮಂ ತಿಳಿಪಲೊಡಂ, 'ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾೞೆಂ' ಎಂದು ಬಿಱು ನುಡಿದ"ನಂತೆ. ಅದನ್ನು ಕೇಳಿ "**ಮಂಡಲೇಶ್ವರಂ ರಜಕನೊಂದು ಪರುಷೋಕ್ತಿಗೆ ಮನಗೆಟ್ಟಿಂ** . . . ನೀಡುಮೆಣಿಕೆಯೊಳ್ . . . ರಜಕನ್ ಎನ್ನನ್ ಏಳಿಸಿದನಿಲ್ಲಂ, ಆದಂ ಎಟ್ಟಿಱಿಸಿದಂ. ಸಾಜಂ. ಆಗಳ್ ರಕ್ಕಸನ ಬಂದಿಯೊಳ್ ಬಾೞ್ದಳಂ ಮಗುೞ್ದುಂ ಆನ್ ಆಳ್ವೊಡ ಕ್ಕುಮೆ? . . . ಕೆಯ್ವೊಲನೊಳ್ ಬೆಳೆದ ಕುಱುಂಬುಲ್ಲಂ ಕಿೞ್ತುಬಿಸುಡುವಂತಿರೆ ಸೀತೆಯಂ ಬಿಡುವೆಂ" ಎಂದು ನಿಶ್ಚೈಸಿ, ಸೌಮಿತ್ರಿಯತ್ತ ತಿರುಗಿ, "ಕೇಳ್ದಯ್ ತಮ್ಮ. ಮುನ್ನಂ ಲಂಕೆಯೊಳ್ ನೀನೆ ಪೇೞ್ದಿಯಲ್ತೆ–ಸೀತೆ ಪೂತೆ, ಅವಳಂ ಕೆಯ್ಕೊಳ್ವುದೆಂದು. ಈಗಳೇನಾಯ್ತು" ಎಂದನಂತೆ. ಅದಕ್ಕೆ ಭರತ "ಸೌಮಿತ್ರಿ ಪೇೞ್ವುದೇಂ? ಎಮ್ಮಯ್ಯಂ ಪೇೞನೆ? ಅಗ್ನಿ ಪೇೞನೆ? ದೇವರ್ಕಳ್ ಪೇೞರೆ? ಭೂದೇವಿ ತಾಂ ಪೇೞಳೆ? **ಧೂರ್ತನೊರ್ವಂ ಪೇೞ್ದ ನಾಣ್ನುಡಿಯ ನೆವಂಬಿಡಿದು** ದೇವಿಯರೊಳ್ ಕುಂದನೆಣಿಸಲ್ಬಾರದು" ಎಂದು ಕೈಮುಗಿದ. ಅದಕ್ಕೆ ರಾಮ ಅವನ ಬಾಯಿ ಮುಚ್ಚಿ, "ಧರ್ಮಮಂತುಟು. ಅಪವಾದಂ ಪೊರ್ದಿದಿಂಬೞಿಯಂ ದೂಷಿತೆಯಾದೀ ಮಡದಿಯಂ ಬಿಟ್ಟಲ್ಲದೆ ಮಾಣೆಂ" ಎನ್ನಲು ಭರತ ಕಿವಿಗಳನ್ನು ಮುಚ್ಚಿಕೊಂಡ. ಆಗ ಶತ್ರುಘ್ನ ". . . ಕಿಱುಗೂಸಂ ನಿನ್ನ ಕೆಯ್ಯೊಳೀವಂದು ಜನಕನೇನೆಂದಂ, ಅಗ್ನಿಸಾಕ್ಷಿಯಾಗಿ ನೀನೆ ಏನೆಂದಯ್! ಪಾವಕ ಪಾವನೆಯುಂ ತೋಱಿಯು

ಲ್ಕೆಂತು ಮನಂದಂದಯ್ ? ಕರುಣಾಕರನೆಂಬ ಬಿರುದಿಗಿಂತಿ
ತಗುಗುಮೆ ! ನಿನ್ನೀ ಜಸಕೆ ನಿನ್ನೀ ಪೆರ್ಮೆಗೆ ನಿನ್ನೀ ಬೀರಕಿಂತಿ
ಪಾಡೇ!. . .**ಕೊಳಂ ಕೊಱಚಾಡೆ ನೀನೊಂದಾಡುವುದೆ!** ಕಾವುದು
ಕಾವುದು" ಎಂಪು ಕೈಯೊಡ್ಡಿ ಬೇಡಿದ. ಲಕ್ಷ್ಮಣ ". . .**ಅದಱೊಳ್
ತುಂಬಿದ ಬಸಿಱಿಯಲ್ತೆ !** ಎಂತಯ್ ಕೊಂಡುಯ್ದು ಬಿಡುವೆಂ
ಎಂದ. ಆದರೂ '**ಮತ್ತಂ ಮತ್ತಂ ರಾಘವಂ ಚಲಮಂ ಪಿಡಿದು**
ಹೇಳಿದನಂತೆ: "ಬಲ್ಲೆಂ ಬಲ್ಲೆನವಳಯೋನಿಜೆಯೆಂಬುದಂ, ಪಾವನೆ
ಯೆಂಬುದಂ, ಪುಣ್ಯಶ್ಲೋಕೆಯೆಂಬುದಂ. ಆದೊಡಂ....ಜನರಿಂತು
ಱೋಡಿಸೆ ಪುದುವಾೞ್ವೆನೆಂತೊ ! ಅದಱಿಂ ಸೀತೆಯಂ ತೊಱೆ
ಸೊಗಂಬಾೞ್ವೆನಿದು ಸಿದ್ಧಂ" ಎಂದು. ಅಲ್ಲದೆ, "**ತಾನೆ ಸಿ
ದೋಹದದಿನಡವಿಯ ರಿಸಿವೆಣ್ಗಳಂ ಕಾಣಲ್ಕೆಂದು ಬಯಸಿದಳ್
ಅಂತದಱಿನೀ ನೆವದಿನಡವಿಯೊಳುೞಿದೆ ಬಾರಾ**" ಎಂದನಂ
ಸೀತೆ, ಪಾಪ, "**ಕವಡನಱಿಯದ ಬಾಲೆ** ಮೆಯ್ವೆರ್ಚಿನ ನಲ್ಲನೊ
ತನ್ನೊಳಿಂತು ನನ್ನಿಯೆಂದೇ ಸೊಗವಯಣದ ಬಯಕೆಯಿಂ ಬೀಗಿ"
ಳಂತೆ. "ಪಾಲ್ಗಡಲೊಳ್ ಅಮರ್ದು ಪುಟ್ಟಿದುದಂ ನೆನೆದಳ್
ನಂಜುರ್ಕಿದುದನೇಗೆಯ್ದುಂ ಬಗೆಯದಾದಳ್! "

"ಆ ವೇಳೆಯೊಳ್ **ರಾಮರಾಜ್ಯದೊಳಿಂತನುಚಿತವ
ಅಱಂಗೆಟ್ಟುದೆಂದು** ತಾರೆಗಳ್ ದೆಸೆಗೆಟ್ಟುವು, ಚಂದ್ರಮಂ ಕಳೆಗೆಟ್ಟ
**....ಇಂತಿದೇನನ್ನೆಯದ ಗಲಬೆ ?** ಇದಱಡಿಯನಱಿಯಲ್ವೇೞ್
ಮೆಂದು ತಾನೆ ಭಾಸ್ಕರಂ," ಶ್ರೀರಾಮನ ವಂಶದ ಮೂಲಪುರು
ನಾದ ಸಾಕ್ಷಾತ್ ಸೂರ್ಯ, ಮೇಲೆದ್ದು ಬಂದನಂತೆ. ಆದರೂ ಆ ಜ
ಚ್ಚಕ್ಷುವಿನ ಎದುರಿಗೇ, ಅವನು ಯಾವ **ಅನ್ನೆಯದ ಅಡಿಯನ್ನು
ಅಱಿಯಬೇಕೆಂದು** ಬಂದನೋ ಆ **ಅನ್ನೆಯ ಮುಡಿವರೆಗು**
ನಡೆದು ಹೋಯಿತು. ಅಗ್ರಜನ ಆಣತಿಯಂತೆ ಅನುಜನಿಂದ ಸೀತಾ
ಪರಿತ್ಯಾಗ ನಡೆಯಿತು.

ಪರಿತ್ಯಾಗ ಕಾಲದಲ್ಲಿ ಲಕ್ಷ್ಮಣ "**ನಾಡೊಳಾವನೊ ಮಡಿವಳ
ನೊರ್ವಂ** ಅಭದ್ರಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನ

ಾಡಿದಂ ಗಡ! ಅಂತೀ ದೂಸಱಿನಗ್ರಭವಂ ನಿಮ್ಮಂ ವಿಪಿನದೊಳಿಱಿಪಿ ಿರ್ಪುದೆಂದೆನ್ನಂ ಪೇೞ್ದಂ" ಎಂದಾಗ ಸೀತೆ ಮೂರ್ಛೆಹೋದಳು. ಚ್ಚತ್ತು "**ಕೂಳನೊಂದು ಪಿಸುಣ್ಗೆ ನಿರಪರಾಧಿನಿಯನೆನ್ನಂ** ಬಲಿ ತ್ತನೇ! . . . **ನಿರ್ವ್ಯಾಜಮುಸಗನೊರ್ವಂ ತೆಗಲ್ದ**ನೆಂದಬಲೆಯ ಂತು ಕಾರಡವಿಯೊಳ್ ಬಿಡುವರೆ! . . . ಹಾ! ರಾಘವಾ! **ಎನ್ನೊಳ್ ಕೋಱತೆಯಿರೆ ಮನ್ನಿಸಿ ಕಾವುದಯ್!**" ಎಂದು ಬಣ್ಣಿಸಿ ಬಣ್ಣಿಸಿ ಮರುಮರುಗಿ ಖಿನ್ನಳಾಗಿ, "ಅತ್ತೆವಿರಿಂತಿದಕೆರ್ೞಪ್ಪಿದರೆ? ರಚ್ಚಿನ ಬಂಟಂ ಹನೂಮಂತಂ ಕೆಮ್ಮನಿರ್ದನೆ? ಸುಮಂತ್ರಾದ್ಯರ್ಗೆ ಾನಕ್ಕೆ ಬಂದುದೆ? ವೃದ್ಧಂ ಜಾಂಬವಂ ತಡೆಯದಾದನೆ? ಹಾ! ಹಾ! **ಣ್ಣೆನ್ನೊಂದು ಬಾೞ್ಕೆ ಬಾೞ್ಕೆಯೆ?**" ಎಂದು, "ಪೂರ್ವ ಜನ್ಮ ಾಳಾವ ದಂಪತಿಗಳೊಳ್ ಭೇದಮಿಕ್ಕಿದೆನೋ! ಆವ ಹದಿಬದೆಯಂ ಿದೆನೋ! ಬೊಮ್ಮನೆನ್ನ ಪಣೆಯೊಳ್ ಬರೆದುದಿಂತುಟೈಸೆ. . . **ಯ್ಮಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ!** ಪೆಣ್ಣಿನಿಸೆ ಿಟ್ಟಿದೆನ್ನಯೆ ದೋಷಂ" ಎಂದು, ಮರುಗುವ ಮೈದುನನನ್ನೂ ಸಂತ ಿಸ್ಸಿ, ಸರ್ವಂಸಹೆಯಾದ ಭೂದೇವಿಯ ಆ ಮಗಳು ತನ್ನ ಸಹಜತೆ ಿಂದ "ನಿನ್ನಾಣತಿಗಬಲೆ ಮಱುಗಿದಳಿಲ್ಲ, ಮಾರ್ನುಡಿದಳಿಲ್ಲ, ಿಳಿಸಾಂತಳಿಲ್ಲ, ಬೆರ್ಚಿದಳಿಲ್ಲ, ಕೂಱ್ಕುದಿಗೊಂಡಳಿಲ್ಲ, ದೂಱಿದ ಲ್ಲ, **ನೀನೆ ಗತಿಯೆಂಮ ನಿನ್ನಡಿಯಂ ನೆನೆಯುತೆ ಕಡೆವೊೞ್ತಂ ಾರುತಿರ್ಪಳ್**" ಎಂದು ರಾಮನಿಗೆ ಹೇಳಿಕಳುಹಿದಳು. ಮುಂದೆ, ್ರೀರಾಮನ ಸುಕೃತವೋ, ಸೀತೆಯ ಸೌಭಾಗ್ಯವೋ ಅಥವಾ 'ವಾಲ್ಮೀ ಕಿಯ ಭಾಗ್ಯ'ವೋ ಸೀತೆ ಪ್ರಾಚೇತಸನ ಒಲ್ಮೆಗಾಪಿಗೆ ಸಂದು ಲವಕುಶ ರನ್ನು ಪಡೆದಳು.

ಹೀಗೆ, ರಾಮನು **ಲೋಗರ ಅಱಿವಿನ ಕೋಱತೆಯುಂ ನೀಡುಂ ಎಣಿಸದೆ ತಗದ ಕಜ್ಜಮುಂ ಒಡರ್ಚಿದ;** ಅರಿವಿಲ್ಲದ ಅಗಸನ ಮಾತಿಗೆ ಮನಸ್ಸು ಕೊಟ್ಟು, ಆರಾರು ಹೇಳಿದರೂ ಛಲ ಬಿಡದೆ, ಅರಿಯದ ಹೆಣ್ಣನ್ನು, ತುಂಬಿದ ಬಸಿರಿಯನ್ನು, ಅವಳ ಬಯಕೆಯ

ನೆವದಿಂದ ಕಾಡಿಗೆ ಕಳಿಸಿದ. ಮುಂದೆ **ಬೞಿಮುೞುಕದಿಂ ಮನದೆ ಕುದಿದ**. ಹೇಗೆಂದರೆ :

"ಏಗಳ್ ಲಕ್ಷ್ಮಣಂ ಸೀತೆಯಂ ಕೊಂಡುಯ್ದನೆಂಬ ವಾರ್ತೆ ಕೇಳಿಸಿದುದಾಗಳೆ ಪಶ್ಚಾತ್ತಾಪದಿಂ ರಾಘವನ ಮನವೊಳಗೊಳಗೆ ಬೆಂದು ಬೇಗುದಿಯೊಳಿರ್ದತ್ತು ; ಮೇಣೆಂದು ವನದೊಳಿಟಿಪಿ ಬಂದ ನೆಂದನಂದೆ ಒರ್ಮೆಯೆ ಉರ್ಕಿದುದು ". ಸೀತೆ ಎಳೆಯಂದಿನಿಂದ ಪಟ್ಟ ಪಾಡುಗಳನ್ನೆಲ್ಲಾ ನೆನೆನೆನೆದು ಹಲುಬಿದ. "ಎಳವೆ ವನಸಂಚಾರ ದೊಳಾಯ್ತು ; ಬಳವಿ ರಕ್ಕಸರ ಬಂದಿಯೊಳಾಯ್ತು ; ಕೆಟಿವೆ ಪುಲಿ ಕರಡಿಗಳಿನಗುರ್ವಿಸಿದ ಕಾರಡವಿಯೊಳಾಯ್ತಲೇ ! ಅಯ್ಯೋ ! **ಅಬ್ಬೆ ಯಿಲ್ಲದ ಪೆಣ್ಮಗಳನೊರ್ವಳಂ ಕಾಡಿಗೊತ್ತಿ**ಗೀವೊಡೆಂದೇಂ ಮದುವೆನಿಂದೆನೇ ! ನಿನ್ನಾ ಪಾತಿವ್ರತ್ಯಮನ್ ಆ ಸೌಜನ್ಯಮನ್ ಆ ವಿನಯಮನ್ ಎಂತೊ ಮಱೆವೆಂ . . . . . " ಎಂದಾದಿಯಾಗಿ "ಅನುಗಾಲ[ಮಾ]ವಿಯೋಗದುಃಖಮಂ ನೆನೆನೆನೆದು ಪಟಿಯಿಸುತಿರ್ದ" ನಂತೆ.

**ಈ ಬೞಿಮುೞುಕ**ದಿಂದ ಏನು ಫಲವಾಯ್ತು ?

ಈ ರೀತಿಯಲ್ಲಿ, **ಶ್ರೀರಾಮನ ಸೀತಾಪರಿತ್ಯಾಗವು ಅನ್ಯಾಯ** ಎಂಬುದನ್ನು ಕಾವ್ಯರೂಪದಿಂದ ಕೆತ್ತಲು ಉದ್ದೇಶಿಸಿದ ಕವಿ, ಕಾವ್ಯದ ಆದಿಯಲ್ಲಿ **''ಲೋಗರಱಿವಿನ ಕೊಱತೆಯುಂ ನೀಡುಂ ಎಣಿಸದೆ, ತಗದ ಕಜ್ಜಮಂ ಒಡರ್ಚುತೆ, ಕಟ್ಟಕಡೆಯೊಳ್ ಬೞಿಮುೞುಕದಿಂ ಮನದೆ ಕುದಿವರ್ ಪಲಂಬರ್ ಒಳರ್''** ಎಂಬ ಕೈಕಂಬವನ್ನು ನೆಟ್ಟ ಕವಿ, ಮುಂದೆ ವರ್ಣನೆಯಲ್ಲೂ ಪಾತ್ರಗಳಿಂದಲೂ ಅದನ್ನೇ ಎತ್ತಿ ಎತ್ತಿ ಆಡಿಸಿದ ಕವಿ, ಕಾವ್ಯದ ಕೊನೆಯಲ್ಲೂ ಪುನಃ ಅದನ್ನೇ ಎತ್ತಿ ಆಡಿಸುತ್ತಾನೆ. ಹೇಗೆಂದರೆ :

ರಾಮನು, ತನ್ನ ಅಶ್ವವನ್ನು ಕಟ್ಟಿ ಕಾದಿದ ಯಮಳರು ತನ್ನ ಸೀತೆಯ ಮಕ್ಕಳೇ ಎಂದರಿಯದೆ ಅಚ್ಚರಿಗೊಂಡಾಗ, ವಾಲ್ಮೀಕಿ ಅವ ನನ್ನು ಕುರಿತು **''ನೀಂ ನಾಡೊಡೆಯನೆಂಬೊಂದುರ್ಕಿಂ ಸೊರ್ಕಿಂ**

ಹಿಂದಿನ ಕಾಳಗಗಳ ವರ್ಣನೆಗೆ ತೂಕಡಿಸುತ್ತಿದ್ದ ಮನೋರಮೆ ಈಗ ಬೆರಗಾಗಿ ಹುಂಗಟ್ಟಿದೆ ಗುರುಗುಮ್ಮನೆ ಕುಳಿತಳು. 'ಮಕ್ಕಳ ಈ ಮೇರೆಯಿಲ್ಲದ ಸಾಹಸಕ್ಕೆ ಬೆರಗಾಗಿ ಇಷ್ಟುಹೊತ್ತೂ ಸುಮ್ಮನಿದ್ದೆ' ಎಂದೆನ್ನುವ ಮಟ್ಟಿಗೆ ಮುಟ್ಟಿತ್ತು ಮುದ್ದಣನ ಕಥಾ ಕೌಶಲ. ಕಟ್ಟಕಡೆಗೆ, ರಾಮ ಸೀತೆಯನ್ನು ಮಕ್ಕಳೊಡನೆ ಕರೆದು ಕೊಂಡು ಹೋದನೆಂಬುದನ್ನು ಕೇಳಿದಾಗ "ಓ! ರಾಮನೊಳ್ಳಿದ ನಕ್ಕೆ! ಸೊಗಂ ಬಾಟ್ಗೆ! ರಾಮಂಗೆ ಗೆಲವಕ್ಕೆ" ಎಂದಾದಿಯಾಗಿ ನಲಿದಾಡಿದಳು.

ಹೀಗೆ ಮನೋರಮೆ, ಸಂಸ್ಕೃತ ರಾಮಾಶ್ವಮೇಧದ ಕಥಾ ಶ್ರವಣಕ್ಕೆ ಶ್ರದ್ಧಾಳುವಾದ ಶ್ರೋತೃವಾಗಿ ಕುಳಿತು, ಆ ಕಥೆಯ ಮೂರು ಭಾಗಗಳಲ್ಲಿ ಉತ್ತಮಾಧಮಮಧ್ಯಮಗಳನ್ನು ಮುಗ್ಧ ಮನೋಹರವಾಗಿ ಗುರುತಿಸಿ ತೋರಿದ್ದಾಳೆ. ಅಥವಾ, ಅವಳಿಗೆ ಅದು ತೋರಿಬರುವಂತೆ ಮುದ್ದಣ ಅದನ್ನು ನಿರೂಪಿಸಿದ್ದಾನೆ ಎಂದರೆ ಹೆಚ್ಚು ಸರಿಯಾದೀತು. ಅಥವಾ, ಅದಕ್ಕಿಂತ, ಸಂಸ್ಕೃತ ರಾಮಾಶ್ವಮೇಧದ ಮೇಲಣ ತಮ್ಮ ಅಭಿಪ್ರಾಯವನ್ನು ಕಾಂತಾಸಮ್ಮಿತಿಯಿಂದ ಕಟ್ಟಿಕೊಡುವುದಕ್ಕಾಗಿ ನಂದಳಿಕೆ ಲಕ್ಷ್ಮೀನಾರಣಪ್ಪನವರು ಈ ಮುದ್ದಣ ಮನೋರಮಾ ಸಂವಾದದ ರೂಪಿನ ಚೌಕಟ್ಟಿನಲ್ಲಿ ಕನ್ನಡ ರಾಮಾಶ್ವಮೇಧದ ಕತೆಯನ್ನು ಅಳವಡಿಸಿರುವರೆಂದು ತಿಳಿದರೆ ಹೆಚ್ಚು ಯುಕ್ತವಾದೀತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ, ಬೆಂಗಳೂರು ನಗರ – ೧೯೭೫